ಕರ್ನಾಟಕ ಸರ್ಕಾರ

ವಯಸ್ಸು
4 ರಿಂದ 5 ವರ್ಷಗಳು

# ಚಿಲಿಪಿಲಿ Plus

## ಶಿಕ್ಷಕರ ಕೈಪಿಡಿ

**ಪುಸ್ತಕ 8**

- ದಿನಗಳು, ತಿಂಗಳುಗಳು ಮತ್ತು ಋತುಗಳು
- ಸಮಯ









ಸರ್ವ ಶಿಕ್ಷಣ ಅಭಿಯಾನ

ಸಮಗ್ರ ಶಿಕ್ಷಣ ಕರ್ನಾಟಕ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Scanned with CamScanner



# ಪರಿವಿಡಿ

## ವಿಷಯ 8: ದಿನಗಳು, ತಿಂಗಳುಗಳು ಮತ್ತು ಋತುಗಳು


**ಉಪವಿಷಯ 8.1: ದಿನಗಳು**

- ಸಂಭಾಷಣೆ . . . . . 2
- ಯೋಜನಾ ಕಾರ್ಯಗಳು . . . . . 7
- ಶಿಶುಗೀತೆಗಳು . . . . . 9
- ಕಥೆ . . . . . 15
- ಸೃಜನಾತ್ಮಕ ಚಟುವಟಿಕೆಗಳು . . . . . 17
- ಒಳಾಂಗಣ ಆಟಗಳು . . . . . 19
- ಹೊರಾಂಗಣ ಆಟಗಳು . . . . . 20
- Total Physical Response . . . . . 21

**ಉಪವಿಷಯ 8.2: ವಾರ, ತಿಂಗಳು ಮತ್ತು ವರ್ಷ**

- ಸಂಭಾಷಣೆ . . . . . 26
- ಯೋಜನಾ ಕಾರ್ಯಗಳು . . . . . 30
- ಶಿಶುಗೀತೆಗಳು . . . . . 32
- ಕಥೆ . . . . . 36
- ಸೃಜನಾತ್ಮಕ ಚಟುವಟಿಕೆಗಳು . . . . . 38
- ಒಳಾಂಗಣ ಆಟಗಳು . . . . . 39
- ಹೊರಾಂಗಣ ಆಟಗಳು . . . . . 41
- Total Physical Response . . . . . 42

**ಉಪವಿಷಯ 8.3: ಹವಾಮಾನ ಮತ್ತು ಋತುಗಳು**

- ಸಂಭಾಷಣೆ . . . . . 46
- ಯೋಜನಾ ಕಾರ್ಯಗಳು . . . . . 53
- ಶಿಶುಗೀತೆಗಳು . . . . . 54
- ಕಥೆ . . . . . 59
- ಸೃಜನಾತ್ಮಕ ಚಟುವಟಿಕೆಗಳು . . . . . 61
- ಒಳಾಂಗಣ ಆಟಗಳು . . . . . 62
- ಹೊರಾಂಗಣ ಆಟಗಳು . . . . . 63
- Total Physical Response . . . . . 64

**ಸಮಯ**

**ಪರಿಕಲ್ಪನೆ ಹಾಗೂ ನಿರ್ವಹಣೆ**

- ಸಿದ್ಧತಾ ಚಟುವಟಿಕೆಗಳು . . . . . 68
- ಪರಿಶೋಧನಾತ್ಮಕ ಚಟುವಟಿಕೆಗಳು . . . . . 70
- ವಿಸ್ತರಣಾ ಚಟುವಟಿಕೆ . . . . . 72







ಪಠ್ಯಕ್ರಮವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ:

## ಮೌಖಿಕ ಭಾಷಾ ಕೌಶಲ ಬೆಳವಣಿಗೆ


ಸಂಭಾಷಣೆ


ಯೋಜನಾ ಕಾರ್ಯಗಳು


ಶಿಶುಗೀತೆಗಳು


ಕಥೆ


Total Physical Response (TPR)

---

## ಸೂಕ್ಷ್ಮ ಮತ್ತು ಸ್ಥೂಲ ಚಲನ ಕೌಶಲ, ಸಾಮಾಜಿಕ-ಭಾವನಾತ್ಮಕ ಮತ್ತು ಸೃಜನಾತ್ಮಕ ಬೆಳವಣಿಗೆ


ಒಳಾಂಗಣ ಆಟಗಳು


ಹೊರಾಂಗಣ ಆಟಗಳು


ಸೃಜನಾತ್ಮಕ ಚಟುವಟಿಕೆಗಳು

---

## ಇಂದ್ರಿಯ ಗ್ರಹಿಕೆಯ ಬೆಳವಣಿಗೆ


ಸಿದ್ಧತಾ ಚಟುವಟಿಕೆಗಳು


ಪರಿಶೋಧನಾತ್ಮಕ ಚಟುವಟಿಕೆಗಳು


ವಿಸ್ತರಣಾ ಚಟುವಟಿಕೆ


ಅನ್ವಯಿಸುವಿಕೆ

Scanned with CamScanner

# ಕೃತಜ್ಞತೆಗಳು

2019–20ನೇ ಸಾಲಿನಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರಿಗೆ ಪಠ್ಯಕ್ರಮ ಅನುಸರಿಸಲು ಕೈಪಿಡಿಯ ಅವಶ್ಯಕತೆಯಿರುವುದರಿಂದ, ಸಿದ್ದಪಡಿಸಲು ಈ ಕೆಳಕಂಡ ಪಠ್ಯಕ್ರಮ ರಚನಾ ತಂಡಕ್ಕೆ ಸೂಚನೆ ನೀಡಲಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಗಳ ಪಠ್ಯಕ್ರಮ ರಚನೆಗೆ ಸಹಕರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ನಲಿ–ಕಲಿ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಅಕ್ಷರ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸೆಂಟರ್ ಫಾರ್ ಲರ್ನಿಂಗ್, ಕಮ್ಯೂನಿಟಿ ಬೇಸ್ಡ್ ರಿಹ್ಯಾಬಿಲಿಟೇಷನ್ ನೆಟ್‌ವರ್ಕ್(ಸಿ.ಬಿ.ಆರ್), ಕಲಿಕೆ–ಟಾಟಾ ಟ್ರಸ್ಟ್, ಪ್ರಜಾಯತ್ನ, ಪ್ರಜ್ಞಾ ವಿದ್ಯಾ–ಕ್ರಿಯೇಟಿವ್ ಸ್ಕೂಲ್, ಪ್ರಾಪ್ತಿ ಫೌಂಡೇಷನ್, ಪ್ರಾಮಿಸ್ ಫೌಂಡೇಷನ್, ಟ್ರೈಡ್ ಲರ್ನಿಂಗ್ ಮತ್ತು ವಿ.ಹೆಚ್.ಡಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ರವರು ತಮ್ಮ ಅನುಭವ, ಪರಿಣಿತಿಯನ್ನು ಹಂಚಿಕೊಂಡಿರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಸಹಕರಿಸಿದವರೆಲ್ಲವರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚಿಲಿ ಪಿಲಿ ಕಲಿಕಾ ಸಂಪನ್ಮೂಲಗಳಿಂದ ಕೆಲವು ಆಯ್ದ ಚಟುವಟಿಕೆಗಳು, ಕಥೆಗಳು, ಪದ್ಯಗಳು, ಎನ್‌ಸಿಇಆರ್‌ಟಿ ಸಂಪನ್ಮೂಲ ಪುಸ್ತಕಗಳಿಂದ ಥೀಮ್ ಬೇಸ್ಡ್ ಅರ್ಲಿ ಚೈಲ್ಡ್ ಕೇರ್ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸೇವ್‌ದ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ರೆಡಿ ಟು ಲರ್ನ್ ಅರ್ಲಿ ಲಿಟರೆಸಿ ಆಂಡ್ ಮ್ಯಾಥ್ಸ್, www.storyweaver.org.in, ಮತ್ತು ಇತರೆ ಮುಕ್ತ ಸಂಪನ್ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ ಯುನಿಸೆಫ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

**(ಡಾ. ಎಂ.ಟಿ. ರೇಜು, ಭಾ.ಆ.ಸೇ.)**
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

Scanned with CamScanner



## ದಿನಗಳು, ತಿಂಗಳುಗಳು ಮತ್ತು ಋತುಗಳು



# ದಿನಗಳು





Scanned with CamScanner

# ಕಲಿಕಾ ಫಲಿತಗಳು

## ಉಪ ವಿಷಯ 8.1: ದಿನಗಳು

| 3–4 ವರ್ಷಗಳು | 4–5 ವರ್ಷಗಳು | 5–6 ವರ್ಷಗಳು |
| --- | --- | --- |
| 1 ದಿನದ ವಿವಿಧ ಭಾಗಗಳಾದ ಬೆಳಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಗಳನ್ನು ಹಾಗೂ ಅವುಗಳು ಉಂಟಾಗುವ ಕ್ರಮವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ವಿವರಿಸುವುದು. | 1 ದಿನಚರಿ ಮತ್ತು ದಿನದ ಆಯಾ ಹೊತ್ತಿನಲ್ಲಿ ಅನುಸರಿಸಬೇಕಾದ ಚಟುವಟಿಕೆಗಳನ್ನು ವಿವರಿಸುವುದು. ಇವುಗಳು-ಶಾಲೆಗೆ ಹೋಗುವ ಮುಂಚಿನ ಚಟುವಟಿಕೆಗಳು (ಏಳುವುದು, ಹಲ್ಲುಜ್ಜುವುದು, ತಿಂಡಿ ತಿನ್ನುವುದು, ಬಟ್ಟೆ ಧರಿಸುವುದು, ತಯಾರಾಗುವುದು), ಶಾಲೆಯಲ್ಲಿನ ಚಟುವಟಿಕೆಗಳು (ಅಭ್ಯಾಸ ಮಾಡುವುದು, ಆಟ ಆಡುವುದು, ಊಟ ಮಾಡುವುದು, ಶಾಲೆಯ ಮುಕ್ತಾಯ) ಮತ್ತು ಶಾಲೆಯ ನಂತರದ ಚಟುವಟಿಕೆಗಳನ್ನು (ಕೈ ಕಾಲು ತೊಳೆದುಕೊಳ್ಳುವುದು, ಆಟ ಆಡುವುದು, ಊಟ ಮಾಡುವುದು ಮತ್ತು ಮಲಗುವುದು) ಒಳಗೊಂಡಿರುತ್ತವೆ. | 1 ಹಗಲು ಮತ್ತು ರಾತ್ರಿ ಹೇಗೆ ಉಂಟಾಗುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಮತ್ತು ವಿವರಿಸುವುದು. |
| 2 ನೈಸರ್ಗಿಕ ವಿದ್ಯಮಾನಗಳನ್ನು (ಸೂರ್ಯ ಮತ್ತು ಚಂದ್ರ, ಮಿಂಚು ಮತ್ತು ಗುಡುಗು) ಮತ್ತು ದಿನದ ಪ್ರತಿಯೊಂದು ಭಾಗಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ವಿವರಿಸುವುದು. | 2 ನಿನ್ನೆ, ಇವತ್ತು ಮತ್ತು ನಾಳೆಯ ಪರಿಕಲ್ಪನೆಗಳನ್ನು ಹಾಗೂ ಈಗಿನ, ಮುಂಚಿನ ಹಾಗೂ ನಂತರ/ಆದ ಮೇಲೆ ಯಾವ ದಿನಗಳೆಂದು ವಿವರಿಸುವುದು. | 2 ಸಮಯವನ್ನು ತೋರಿಸುವ ವಿವಿಧ ಉಪಕರಣಗಳಾದ-ಮರಳು ಗಡಿಯಾರ, ಸ್ಟಾಪ್ ವಾಚ್ (ಸಮಯದ ಅವಧಿಯನ್ನು ಅಳೆಯಲು ಉಪಯೋಗಿಸುವ ಗಡಿಯಾರ), ಗೋಡೆ ಗಡಿಯಾರ, ಕೈ ಗಡಿಯಾರ, ಮೊಬೈಲ್‌ಗಳು ಮತ್ತು ಅಲಾರಂಗಳು |
| 3 ದಿನದ ವಿವಿಧ ಸಮಯಗಳಲ್ಲಿ ಇತರರ ಜೊತೆ ಮಾತನಾಡುವಾಗ ಬಳಸಬಹುದಾದ ನಿರ್ದಿಷ್ಟ ಶಬ್ದಗಳನ್ನು ಹಾಗೂ ಕ್ರಮವನ್ನು ತಿಳಿಯುವುದು ಮತ್ತು ಆಯಾ ಹೊತ್ತಿನಲ್ಲಿ ಸರಿಯಾಗಿ ಬಳಸುವುದು. | 3 ಗಡಿಯಾರಗಳು ಸಮಯವನ್ನು ತೋರಿಸುತ್ತವೆ ಎಂಬುದನ್ನು ಮತ್ತು ಸಮಯಕ್ಕೆ ಸರಿಯಾಗಿ ಬರುವುದರ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು. | 3 ಘಂಟೆಗಳಲ್ಲಿ ಸಮಯವನ್ನು ಗಡಿಯಾರದಲ್ಲಿ ನೋಡಲು ಕಲಿಯುವುದು ಮತ್ತು ವೇಳಾಪಟ್ಟಿಯನ್ನು ಸರಿಯಾದ ಘಂಟೆಗೆ ಅನ್ವಯಿಸುವುದು (ಉದಾ-ಬೆಳಗ್ಗೆ 9 ಘಂಟೆಗೆ ಶಾಲೆ ಪ್ರಾರಂಭವಾಗುತ್ತದೆ). |

Scanned with CamScanner

ಉಪವಿಷಯ 8.1

# ದಿನಗಳು



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ದಿನಚರಿ ಮತ್ತು ದಿನದ ಆಯಾ ಹೊತ್ತಿನಲ್ಲಿ ಅನುಸರಿಸಬೇಕಾದ ಚಟುವಟಿಕೆಗಳನ್ನು ವಿವರಿಸುವುದು. ಇವುಗಳು–ಶಾಲೆಗೆ ಹೋಗುವ ಮುಂಚಿನ ಚಟುವಟಿಕೆಗಳು (ಏಳುವುದು, ಹಲ್ಲುಜ್ಜುವುದು, ತಿಂಡಿ ತಿನ್ನುವುದು, ಬಟ್ಟೆ ಧರಿಸುವುದು, ತಯಾರಾಗುವುದು), ಶಾಲೆಯಲ್ಲಿನ ಚಟುವಟಿಕೆಗಳು (ಅಭ್ಯಾಸ ಮಾಡುವುದು, ಆಟ ಆಡುವುದು, ಊಟ ಮಾಡುವುದು, ಶಾಲೆಯ ಮುಕ್ತಾಯ) ಮತ್ತು ಶಾಲೆಯ ನಂತರದ ಚಟುವಟಿಕೆಗಳನ್ನು (ಕೈ ಕಾಲು ತೊಳೆದುಕೊಳ್ಳುವುದು, ಆಟ ಆಡುವುದು, ಊಟ ಮಾಡುವುದು ಮತ್ತು ಮಲಗುವುದು) ಒಳಗೊಂಡಿರುತ್ತವೆ.
- ನಿನ್ನೆ, ಇವತ್ತು ಮತ್ತು ನಾಳೆಯ ಪರಿಕಲ್ಪನೆಗಳನ್ನು ಹಾಗೂ ಈಗಿನ, ಮುಂಚಿನ ಹಾಗೂ ನಂತರ/ಆದ ಮೇಲೆ ಯಾವ ದಿನಗಳೆಂದು ವಿವರಿಸುವುದು.
- ಗಡಿಯಾರಗಳು ಸಮಯವನ್ನು ತೋರಿಸುತ್ತವೆ ಎಂಬುದನ್ನು ಮತ್ತು ಸಮಯಕ್ಕೆ ಸರಿಯಾಗಿ ಬರುವುದರ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು.



Scanned with CamScanner

ಸಂಭಾಷಣೆ 1

## ಬೆಳಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿ



### ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ದಿನದ ವಿವಿಧ ಭಾಗಗಳಾದ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಗಳನ್ನು ಹಾಗೂ ಅವುಗಳು ಉಂಟಾಗುವ ಕ್ರಮವನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ವಿವರಿಸುತ್ತಾರೆ.

### ಸೂಚನೆಗಳು

ಹಂತ 1

1. ಹಗಲು ಮತ್ತು ರಾತ್ರಿ ಎಂಬ ಪದಗಳನ್ನು ಕೇಳಿದ್ದಾರೆಯೇ ಅಥವಾ ತಿಳಿದಿದ್ದಾರೆಯೇ? ಎಂದು ಮಕ್ಕಳನ್ನು ಕೇಳುವುದು.
2. ಈಗ ಹಗಲೋ ಅಥವಾ ರಾತ್ರಿಯೋ? ನಿಮಗೆ ಹೇಗೆ ಗೊತ್ತು? ನೀವು ಹಗಲು ಹೊತ್ತಿನಲ್ಲಿ ಆಕಾಶದಲ್ಲಿ ಏನನ್ನು ನೋಡುತ್ತೀರಾ? ರಾತ್ರಿಯಲ್ಲಿ ಆಕಾಶದಲ್ಲಿ ನಿಮಗೆ ಏನು ಕಾಣಿಸುತ್ತದೆ?
3. ಮಕ್ಕಳ ಪ್ರತಿಕ್ರಿಯೆಗಳನ್ನು ಆಲಿಸಿದ ಮೇಲೆ, ಹೀಗೆ ಹೇಳುವುದು-ಯಾವಾಗ ಸುತ್ತಲೂ ಬೆಳಕಿರುತ್ತದೆಯೋ ಮತ್ತು ಸೂರ್ಯನು ಪ್ರಕಾಶಿಸುತ್ತಿರುತ್ತಾನೋ ಆಗ ಹಗಲು. ಯಾವಾಗ ಸೂರ್ಯನು ಇರುವುದಿಲ್ಲವೋ ಮತ್ತು ಸುತ್ತಲೂ ಕತ್ತಲೆಯಾಗಿರುತ್ತದೆಯೋ ಆಗ ರಾತ್ರಿ. ರಾತ್ರಿಯಲ್ಲಿ ನೀವು ಚಂದ್ರ ಮತ್ತು ನಕ್ಷತ್ರಗಳನ್ನು ಕಾಣುತ್ತೀರ.
4. ನಮ್ಮ ದಿನವನ್ನು ನಾವು ವಿವಿಧ ಭಾಗಗಳಾಗಿ ವಿಂಗಡಿಸಿಕೊಂಡಿದ್ದೇವೆ. ಅವು ಯಾವುವು ಎಂದು ನೋಡೋಣ. ನಾವು ದಿನದ ಈ ಸಮಯದಲ್ಲಿ ಏಳುತ್ತೇವೆ. ಇದು ಯಾವ ಹೊತ್ತು? ಹೊರಗಿನ ವಾತಾವರಣ ಹೇಗಿರುತ್ತದೆ? ಹೇಗೆ ಕಾಣಿಸುತ್ತಿರುತ್ತದೆ? ಬೆಳಿಗ್ಗೆ ತಂಪಾಗಿರುತ್ತದೆಯೋ ಅಥವಾ ಬೆಚ್ಚಗಿರುತ್ತದೆಯೋ? ನಾವು ಈ ಹೊತ್ತಿನಲ್ಲಿ ಮಲಗುತ್ತೇವೆ. ಅದು ಯಾವಾಗ ಎಂದು ಹೇಳಿ ನೋಡೋಣ? ರಾತ್ರಿಯ ಹೊತ್ತು ಹೊರಗೆ ಹೇಗಿರುತ್ತದೆ? ನಿಮಗೆ ಏನು ಕಾಣುತ್ತದೆ? ದಿನದ ಈ ಹೊತ್ತಿನಲ್ಲಿ ಬಹಳ ಬಿಸಿಲಿರುತ್ತದೆ. ಇದು ಯಾವ ಹೊತ್ತು ಎಂದು ಹೇಳಿ ನೋಡೋಣ? ಈ ಹೊತ್ತಿನಲ್ಲಿ ಸೂರ್ಯ ಮುಳುಗುತ್ತಾನೆ. ಇದು ದಿನದ ಯಾವ ಸಮಯ?
5. ಈಗ ಹೊರಗೆ ಹೋಗಿ ಹೇಗೆ ಕಾಣಿಸುತ್ತಿದೆ ಎಂದು ಹೇಳಬಹುದಾ?. ಹೌದು, ಈಗ ಬೆಳಿಗ್ಗೆ, ಎಂದು ಹೇಳುವುದು.
6. ನಿಮಗೆ ಇಷ್ಟವಾದ ದಿನದ ಭಾಗ ಯಾವುದು? ಈಗ ಬೆಳಿಗ್ಗೆಯೋ, ಮಧ್ಯಾಹ್ನವೋ, ಸಂಜೆಯೋ ಅಥವಾ ರಾತ್ರಿಯೋ? ಏಕೆ? ಎಂದು ಕೇಳುತ್ತಾ ಸಂಭಾಷಣೆಯನ್ನು ಮುಂದುವರಿಸುವುದು. ಮಕ್ಕಳು ಸರಿಯಾಗಿ ಉತ್ತರಿಸುತ್ತಾರೆಯೋ ಅಥವಾ ತಪ್ಪಾಗಿ ಉತ್ತರಿಸುತ್ತಾರೆಯೋ ಎಂಬುದಕ್ಕೆ ಒತ್ತು ನೀಡದೆ ಎಲ್ಲರಿಗೂ ಮಾತನಾಡಲು ಅವಕಾಶ ಕೊಡುವುದು ಮುಖ್ಯವಾಗುತ್ತದೆ.



Scanned with CamScanner

# ಬೆಳಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿ



**ಹಂತ 2: ಚಟುವಟಿಕೆ: ದಿನದ ಭಾಗಗಳನ್ನು ಪರಿಚಯಿಸುವ ಆಟ**

1. ಮಕ್ಕಳಿಗೆ ತರಗತಿಯಲ್ಲಿ ನಿಮ್ಮ ಕಡೆಗೆ ಮುಖ ಮಾಡಿ ಚೆದುರಿ ನಿಲ್ಲಲು ಹೇಳುವುದು.
2. ನಿಮ್ಮ ಕೈಗಳನ್ನು ಮೇಲಕ್ಕೆತ್ತಿ ಗಾಳಿಯಲ್ಲಿ ಕೈಗಳನ್ನು ಆಡಿಸುವುದು. ಇದು ಬೆಳಿಗ್ಗೆಯನ್ನು ಸೂಚಿಸುತ್ತದೆ ಎಂದು ಹೇಳುವುದು. ಮಕ್ಕಳಿಗೆ ಅದನ್ನು ಪುನರಾವರ್ತಿಸಲು ಹೇಳುವುದು.
3. ಎರಡೂ ಕೈಗಳನ್ನು ಭುಜದ ನೇರಕ್ಕೆ ತಂದು ಅಲುಗಾಡಿಸಿ, ಇದು ಮಧ್ಯಾಹ್ನವನ್ನು ಸೂಚಿಸುತ್ತದೆ ಎಂದು ಮಕ್ಕಳಿಗೆ ಹೇಳುವುದು. ಮಕ್ಕಳಿಗೆ ಅದನ್ನು ಪುನರಾರ್ತಿಸಲು ಹೇಳುವುದು.
4. ಎರಡೂ ಕೈಗಳನ್ನು ಕೆಳಕ್ಕಿಳಿಸಿ ತೊಡೆಗಳ ಬಳಿ ಚಾಚಿ ಅಲುಗಾಡಿಸುವುದು. ಈ ಅಭಿನಯ ಸಾಯಂಕಾಲವನ್ನು ಸೂಚಿಸುತ್ತದೆ ಎಂದು ಮಕ್ಕಳಿಗೆ ಹೇಳುವುದು. ಮಕ್ಕಳಿಗೆ ಅದನ್ನು ಪುನರಾರ್ತಿಸಲು ಹೇಳುವುದು.
5. ಮುಂದೆ ಬಾಗಿ ಕೈಗಳಿಂದ ಕಾಲಿನ ಬೆರಳನ್ನು ಮುಟ್ಟುವುದು ಮತ್ತು ಕೈಗಳನ್ನು ಪಾದಗಳ ಬಳಿ ಅಲುಗಾಡಿಸುವುದು. ಇದು ರಾತ್ರಿಯನ್ನು ಸೂಚಿಸುತ್ತದೆ ಎಂದು ಮಕ್ಕಳಿಗೆ ಹೇಳುವುದು. ಮಕ್ಕಳಿಗೆ ಅದನ್ನು ಪುನರಾರ್ತಿಸುವಂತೆ ಹೇಳುವುದು.
6. ಆಟವನ್ನು ಪ್ರಾರಂಭಿಸುವ ಮುಂಚೆ ಯಾವ ಅಭಿನಯ ದಿನದ ಯಾವ ಹೊತ್ತನ್ನು ಸೂಚಿಸುತ್ತದೆ ಎಂದು ಮಕ್ಕಳಿಗೆ ಸ್ಪಷ್ಟವಾಗಿ ತಿಳಿದಿದೆಯೇ ಎಂದು ಖಾತ್ರಿಪಡಿಸಿಕೊಳ್ಳುವುದು.
7. ಈಗ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಯೆಂದು ಕ್ರಮವಿಲ್ಲದೇ ಹೇಳುತ್ತಾ ಮಕ್ಕಳಿಗೆ ಅದಕ್ಕೆ ತಕ್ಕ ಅಭಿನಯವನ್ನು ಮಾಡಲು ಹೇಳುವುದು. ದಿನದ ಹೊತ್ತನ್ನು ಹೇಳುವುದರ ವೇಗವನ್ನು ಹೆಚ್ಚು ಕಡಿಮೆ ಮಾಡುತ್ತಾ ಚಟುವಟಿಕೆಯ ಸವಾಲನ್ನು ಹೆಚ್ಚಿಸುವುದು.
8. ನೀವು ಹೇಳುವ ದಿನದ ಭಾಗಕ್ಕೆ ತಕ್ಕಂತೆ ಅಭಿನಯಿಸದೆ ಯಾರು ತಪ್ಪು ಮಾಡುತ್ತಾರೆಯೋ ಅವರನ್ನು ಆಟದಿಂದ ಹೊರ ಹೋಗಲು ಹೇಳುವುದು. ಉದಾಹರಣೆಗೆ ನೀವು ಸಾಯಂಕಾಲ ಎಂದು ಹೇಳಿದಾಗ ಮಗು ತನ್ನ ಪಾದವನ್ನು ಮುಟ್ಟಿದರೆ ಅದು ಪಂದ್ಯದಿಂದ ಹೊರಗೆ ಹೋದಂತೆ ಅರ್ಥ.



Scanned with CamScanner

ಸಂಭಾಷಣೆ 2

# ದಿನಚರಿ



## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ದಿನಚರಿ ಮತ್ತು ಇಲ್ಲಿ ಪಟ್ಟಿ ಮಾಡಿದ ಚಟುವಟಿಕೆಗಳನ್ನು ದಿನದ ನಿರ್ದಿಷ್ಟ ಸಮಯದಲ್ಲಿ ಅನುಸರಿಸಬೇಕು ಎಂದು ತಿಳಿದುಕೊಳ್ಳುತ್ತಾರೆ.

- ಶಾಲೆಯ ಮುಂಚಿನ ಚಟುವಟಿಕೆಗಳು
- ಶಾಲೆಯಲ್ಲಿ ಮಾಡುವ ಚಟುವಟಿಕೆಗಳು
- ಶಾಲೆಯ ನಂತರದ ಚಟುವಟಿಕೆಗಳು

## ಕಲಿಕಾ ಸಾಮಗ್ರಿಗಳು

ದೈನಂದಿನ ಚಟುವಟಿಕೆಗಳ ಮಿಂಚುಪಟ್ಟಿಗಳ ಸರಣಿ **F8.1.1**

1. F8.1.1-1 ಬೆಳಿಗ್ಗೆ ಏಳುವುದು–ಕಿಟಕಿಯಲ್ಲಿ ಹಗಲಿನ ಸಮಯ ಸೂಚಿಸುವ ಅಂಶಗಳಿರುತ್ತವೆ.
2. F8.1.1-2 ಹಲ್ಲುಜ್ಜುವುದು.
3. F8.1.1-3 ಸ್ನಾನ ಮಾಡುವುದು.
4. F8.1.1-4 ತಿಂಡಿ ತಿನ್ನುವುದು–ಕಿಟಕಿಯಲ್ಲಿ ಹಗಲಿನ ಸಮಯ ಸೂಚಿಸುವ ಅಂಶಗಳಿರುತ್ತವೆ.
5. F8.1.1-5 ಶಾಲೆಗೆ ನಡೆದು ಹೋಗುವುದು.
6. F8.1.1-6 ಶಾಲೆಯಲ್ಲಿನ ತರಗತಿ–ಒಂದು ಸಾಮಾನ್ಯ ತರಗತಿಯ ಚಿತ್ರಣ.
7. F8.1.1-7 ಶಾಲೆಯಿಂದ ಮನೆಗೆ ನಡೆಯುವುದು.
8. F8.1.1-8 ಸಂಜೆ ಆಟವಾಡುತ್ತಿರುವುದು.
9. F8.1.1-9 ರಾತ್ರಿ ಊಟ ಮಾಡುವುದು–ಕಿಟಕಿಯಲ್ಲಿ ರಾತ್ರಿಯ ಸಮಯ ಸೂಚಿಸುವ ಅಂಶಗಳಿರುತ್ತವೆ.
10. F8.1.1-10 ಮಲಗುವುದು–ಕಿಟಕಿಯಲ್ಲಿ ರಾತ್ರಿಯ ಸಮಯ ಸೂಚಿಸುವ ಅಂಶಗಳಿರುತ್ತವೆ.




## ಸೂಚನೆಗಳು

**ಹಂತ 1: ಮಿಂಚುಪಟ್ಟಿಗಳನ್ನು ಬಳಸಿ ಸಂಭಾಷಿಸುವುದು**

1. ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಲು ಹೇಳುವುದು.
2. ಮಿಂಚುಪಟ್ಟಿಗಳನ್ನು ಮಕ್ಕಳಿಗೆ ಒಂದೊಂದಾಗಿ ತೋರಿಸುತ್ತಾ ಅವರಿಗೆ ಅದರಲ್ಲಿ ತೋರಿಸಿರುವ ಚಿತ್ರವನ್ನು ವಿವರಿಸಲು ಹೇಳುವುದು.

**ಚಿತ್ರ 1:** ಇಲ್ಲಿ ಏನಾಗುತ್ತಿದೆ? ಮಗು ಏನು ಮಾಡುತ್ತಿದೆ? ನೀವೇನು ಮಾಡುತ್ತೀರಿ? ನೀವು ಯಾವಾಗ ಏಳುತ್ತೀರಿ? (ಬೆಳಿಗ್ಗೆ) ಬೆಳಗಾಗಿದೆಯೆಂದು ನಿಮಗೆ ಹೇಗೆ ಗೊತ್ತಾಗುತ್ತದೆ? ನೀವು ಎದ್ದ ತಕ್ಷಣ ಏನು ಮಾಡುತ್ತೀರಿ?

**ಚಿತ್ರ 2 ರಿಂದ 4:** ಅನುಕ್ರಮವಾಗಿ ಚಿತ್ರಗಳನ್ನು ಒಂದಾದ ಮೇಲೆ ಒಂದರಂತೆ ತೋರಿಸುವುದು.– ಮಗು ಏನು ಮಾಡುತ್ತಿದೆ? ನೀವು ಯಾವಾಗ ಇದನ್ನು ಮಾಡುತ್ತೀರಿ? ಇದನ್ನು ಮಾಡದಿದ್ದರೆ ಏನಾಗುತ್ತದೆ?



Scanned with CamScanner

## ದಿನಚರಿ

**ಚಿತ್ರ 5 ರಿಂದ 7:** ಚಿತ್ರದಲ್ಲಿ ಏನಾಗುತ್ತಿದೆ ಎಂದು ಮಕ್ಕಳಿಗೆ ವಿವರಿಸಲು ತಿಳಿಸುವುದು. ಇದು ಯಾವಾಗ ಆಗುತ್ತದೆ? ಬೆಳಿಗ್ಗೆ ನಿಮ್ಮ ಜೊತೆ ಯಾರು ಬರುತ್ತಾರೆ? ನಿಮ್ಮನ್ನು ವಾಪಾಸು ಮನೆಗೆ ಯಾರು ಕರೆದುಕೊಂಡು ಹೋಗುತ್ತಾರೆ? ನೀವೆಲ್ಲಾ ಶಾಲೆಯಲ್ಲಿ ಏನು ಮಾಡುತ್ತೀರ?




**ಚಿತ್ರ 8 ರಿಂದ 10:** ಚಿತ್ರದಲ್ಲಿ ಮಗುವಿಗೆ ಏನಾಗುತ್ತಿದೆ? ನೀವು ಶಾಲೆಯಿಂದ ಯಾವಾಗ ಹೊರಡುತ್ತೀರಾ? ನೀವು ಮನೆಗೆ ಹೋದ ಮೇಲೆ ಏನು ಮಾಡುತ್ತೀರಾ? ಮಕ್ಕಳಿಗೆ ಮುಕ್ತವಾಗಿ ಮಾತನಾಡಲು ಅವಕಾಶ ಕೊಡಿ.


ನೀವು ಯಾವಾಗ ಮಲಗುತ್ತೀರಾ? ರಾತ್ರಿ ನೀವು ಮಲಗುವ ಮೊದಲು ಯಾವ ಚಟುವಟಿಕೆಗಳನ್ನು ಮಾಡುತ್ತೀರಾ? ನಿಮಗೆ ಇದು ರಾತ್ರಿಯೆಂದು ಹೇಗೆ ಗೊತ್ತಾಗುತ್ತದೆ? ಬೆಳಗ್ಗೆ ಅಥವಾ ಮಧ್ಯಾಹ್ನ ಮಾಡಲಾಗದ, ರಾತ್ರಿ ಮಾತ್ರ ಮಾಡುವಂತಹ ಚಟುವಟಿಕೆಗಳು ಯಾವುದಾದರೂ ಇವೆಯೇ?




ಸಂಭಾಷಣೆಯ ಅಂತ್ಯದಲ್ಲಿ "ನಾವು ದಿನದಲ್ಲಿ/ಹಗಲಿನಲ್ಲಿ ಏನೆಲ್ಲಾ ಮಾಡುತ್ತೇವೆ ಎಂದು ಸರಿಯಾದ ಕ್ರಮದಲ್ಲಿ ಯಾರು ಹೇಳಬಲ್ಲಿರಿ?" ಎಂದು ಕೇಳುವುದು. ಒಂದು ಅಥವಾ ಎರಡು ಮಕ್ಕಳಿಗೆ ಚಟುವಟಿಕೆಗಳನ್ನು ಪುನಃ ವಿವರಿಸಲು ಬಿಡುವುದು. ಉಳಿದ ಮಕ್ಕಳು ಅದಕ್ಕೆ ವಿಷಯಗಳನ್ನು ಸೇರಿಸಲು ಅಥವಾ ಸರಿ ಪಡಿಸಲು ಅವಕಾಶ ಕೊಡುವುದು.

ಹಂತ 2: ಚಿತ್ರದ ಕಾರ್ಡುಗಳನ್ನು ಮೂರು ಗುಂಪುಗಳನ್ನಾಗಿ ಮಾಡುವುದು: 1–4, 5–7 ಮತ್ತು 8–10. ಮಕ್ಕಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿ ಗುಂಪಿಗೂ ಒಂದು ಜೊತೆ ಕಾರ್ಡುಗಳನ್ನು ಕೊಡುವುದು. ಅವುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಲು ಹೇಳುವುದು. ಅವರು ಕೆಲಸವನ್ನು ಮುಗಿಸಿದ ಮೇಲೆ ಪ್ರತಿ ಗುಂಪಿನ ಒಂದು ಮಗುವಿಗೆ ಅವರು ಆ ನಿರ್ದಿಷ್ಟ ಕ್ರಮದಲ್ಲಿ ಕಾರ್ಡುಗಳನ್ನು ಏಕೆ ಜೋಡಿಸಿದ್ದಾರೆ ಎಂದು ವಿವರಿಸಲು ಹೇಳುವುದು. ಒಂದು ಗುಂಪಿನ ಮಕ್ಕಳು ತಮ್ಮ ಕೆಲಸವನ್ನು ಮುಗಿಸಿದ ಮೇಲೆ ಇನ್ನೊಂದು ಗುಂಪಿನ ಮಕ್ಕಳ ಜೊತೆ ಕಾರ್ಡುಗಳನ್ನು ಬದಲಾಯಿಸಿಕೊಳ್ಳಲು ಬಿಡುವುದು. ಎಲ್ಲಾ ಮಕ್ಕಳಿಗೂ ಮೂರು ಗುಂಪಿನ ಕಾರ್ಡುಗಳ ಜೊತೆಯೂ ಕೆಲಸ ಮಾಡಲು ಅವಕಾಶ ಮಾಡಿಕೊಡುವುದು.






Scanned with CamScanner

ಸಂಭಾಷಣೆ 3

# ನಿನ್ನೆ, ಇವತ್ತು ಮತ್ತು ನಾಳೆ



## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ನಿನ್ನೆ, ಇವತ್ತು ಮತ್ತು ನಾಳೆಗಳ ಪರಿಕಲ್ಪನೆಗಳನ್ನು ಪರಿಚಯ ಮಾಡಿಕೊಳ್ಳಲು ಹಾಗು ಅರ್ಥಮಾಡಿಕೊಳ್ಳಲು ಅರ್ಹರಾಗಿರುತ್ತಾರೆ.

**ಕಲಿಕಾ ಸಾಮಗ್ರಿಗಳು**: ವಾರದ ದಿನಗಳ ಚಕ್ರ

## ಶಿಕ್ಷಕರ ಪೂರ್ವಸಿದ್ಧತೆ

ಎರಡು ಕಾಗದದ ಪ್ಲೇಟ್‌ಗಳನ್ನು ತೆಗೆದುಕೊಂಡು ಒಂದನ್ನು ಸಣ್ಣ ವೃತ್ತಾಕಾರವಾಗಿ ಕತ್ತರಿಸಿ ಕೊಳ್ಳುವುದು. ಪ್ಲೇಟ್‌ಗಳನ್ನು ಏಳು ಸಮ ಭಾಗಗಳಾಗಿ ವಿಂಗಡಿಸುವುದು. ಒಂದೊಂದು ಭಾಗಕ್ಕೆ ಕಾಮನಬಿಲ್ಲಿನ ಒಂದೊಂದು ಬಣ್ಣವನ್ನು –ಕೆಂಪು, ಕಿತ್ತಳೆ, ಹಳದಿ, ಹಸಿರು, ನೀಲಿ, ಊದಾ ಮತ್ತು ನೇರಳೆ ಎಂದು ಕ್ರಮವಾಗಿ ಹಚ್ಚುವುದು. ಪ್ಲೇಟಿನ ಸುತ್ತಲೂ ದಿನಗಳ ಹೆಸರುಗಳನ್ನು ಕ್ರಮವಾಗಿ ಬರೆಯುವುದು.

ಸಣ್ಣ ಪ್ಲೇಟ್ ಎರಡನೆಯ ಪರಿಕಲ್ಪನೆಯಾದ ನಿನ್ನೆ, ಇವತ್ತು ಮತ್ತು ನಾಳೆಯನ್ನು ಪರಿಚಯಿಸುತ್ತದೆ. ಒಂದು ಬೋರ್ಡ್ ಪಿನ್ನಿನ ಸಹಾಯದಿಂದ ಮೇಲಿನ ಪ್ಲೇಟ್ ತಿರುಗುವಂತೆ ಎರಡೂ ವೃತ್ತಗಳ ಕೇಂದ್ರಗಳನ್ನು ಸೇರಿಸುವುದು. ನಾಳೆಯ ವಿಭಾಗದಲ್ಲಿ ಒಂದು ಬಾಣದ ಗುರುತನ್ನು ಮಾಡುವುದು.

## ಸೂಚನೆಗಳು

**ಹಂತ 1: ಸೋಮವಾರದಂದು ಈ ಪ್ರಶ್ನೆಗಳನ್ನು ಕೇಳುವುದು**

- ನಾವು ನಿನ್ನೆ ಏಕೆ ಶಾಲೆಗೆ ಬರಲಿಲ್ಲ?–ಏಕೆಂದರೆ ನಿನ್ನೆಯ ದಿನ ಭಾನುವಾರವಾಗಿತ್ತು ಮತ್ತು ರಜೆಯ ದಿನವಾಗಿತ್ತು. ನಾವು ಭಾನುವಾರದಂದು ಶಾಲೆಗೆ ಬರುವುದಿಲ್ಲ.
- ನಿನ್ನೆ ನೀವು ಏನು ಮಾಡಿದಿರಿ? ಎಂದು ಮಕ್ಕಳನ್ನು ಕೇಳುವುದು. ಅವರ ಭಾನುವಾರದ ಚಟುವಟಿಕೆಗಳ ವಿವರಗಳನ್ನು ಮಕ್ಕಳು ಇತರರೊಡನೆ ಹಂಚಿಕೊಳ್ಳಲು ಬಿಡುವುದು. ಇವತ್ತು ಸೋಮವಾರ. ನೀವು ಸೋಮವಾರದಿಂದ ಶುಕ್ರವಾರ (ಶನಿವಾರ?)ದವರೆಗೆ ಶಾಲೆಗೆ ಬರುತ್ತೀರ ಎಂದು ಮಕ್ಕಳಿಗೆ ಹೇಳುವುದು.

**ಇದನ್ನು ಪ್ರತಿದಿನವೂ ಪುನರಾವರ್ತಿಸುವುದು:**

- ನಾವು ನಿನ್ನೆ ಏನು ಮಾಡಿದೆವು? ಅವರು ಶಾಲೆಯಲ್ಲಿ ಏನು ಮಾಡಿದರೆಂಬುದನ್ನು ಪುನಃ ವಿವರಿಸುವುದು–ನಾವು ಯಾವ ಹಾಡನ್ನು ಹಾಡಿದೆವು? ನಾವು ಮಧ್ಯಾಹ್ನ ಏನು ಊಟ ಮಾಡಿದೆವು? ನಿನ್ನೆ ಶಾಲೆಗೆ ಯಾರು ಬಂದಿರಲಿಲ್ಲ? ಅವರು ನಿನ್ನೆಯ ದಿನವನ್ನು ನೆನಪಿಸಿಕೊಳ್ಳಲು ಅಗತ್ಯವಾದ ಸೂಚಕಗಳನ್ನು ನೀಡುತ್ತಾ ಸಹಾಯ ಮಾಡುವುದು.
- ತರಗತಿ ಪ್ರಾರಂಭಿಸುವ ಮುನ್ನ ಮಕ್ಕಳು ತರಗತಿಯಲ್ಲಿ ಆ ದಿನ ಏನು ಮಾಡುತ್ತಾರೆಂದು ಚರ್ಚಿಸುವುದು. ನಾವು ಇವತ್ತು ಗಡಿಯಾರವನ್ನು ಮಾಡುತ್ತೇವೆ ಎಂದು ಮಕ್ಕಳಿಗೆ ಹೇಳುವುದು. ಇವತ್ತು ಶಾಲೆಗೆ ಯಾರು ಬಂದಿಲ್ಲ ಎಂದು ಕೇಳುವುದು. ನಾವು ಇವತ್ತು ಯಾವ ಹಾಡುಗಳನ್ನು ಹಾಡುತ್ತಿದ್ದೇವೆ ಎಂದು ಮಕ್ಕಳನ್ನು ಕೇಳುವುದು.
- ಶಾಲೆ ಮುಗಿಯುವ ಮುನ್ನ ನಾವು ಈ ದಿನ ಏನು ಮಾಡಿದೆವೆಂದು ಮಕ್ಕಳನ್ನು ಕೇಳುವುದು. ಮಕ್ಕಳು ಹೊರಡುವ ಮುನ್ನ ನಾಳೆ ಮತ್ತೆ ಭೇಟಿಯಾಗೋಣ ಎಂದು ಹೇಳುವುದು. ಆ ದಿನವೇನಾದರೂ ವಾರಾಂತ್ಯವಾಗಿದ್ದರೆ ನಾಳೆ ಶಾಲೆಗೆ ಬರುತ್ತೀರಾ? ಎಂದು ಕೇಳುವುದು. ಇಲ್ಲ, ನಾಳೆ ಭಾನುವಾರ ಮತ್ತು ರಜೆಯ ದಿನ. ನಾಳೆ ನಾವು ಭೇಟಿಯಾಗುವುದಿಲ್ಲ ಎಂದು ಹೇಳುವುದು.
- ನಾಳೆ ಏನು ಮಾಡುತ್ತೀರೆಂದು ಮಕ್ಕಳನ್ನು ಕೇಳುವುದು. ಮಕ್ಕಳು ತಮ್ಮ ಭಾನುವಾರದ ಚಟುವಟಿಕೆಗಳ ವಿವರಗಳನ್ನು ಮತ್ತೊಮ್ಮೆ ಹಂಚಿಕೊಳ್ಳಲಿ. ವಾರದ ದಿನಗಳಲ್ಲಿ ನೀವು ಮಾಡುವ ಚಟುವಟಿಕೆಗಳನ್ನು ಎಲ್ಲೆಲ್ಲಿ ಅನ್ವಯಿಸಲು ಸಾಧ್ಯವೋ ಅಲ್ಲಿ ಸಮಯದ ಭಾಷೆಯನ್ನು ಬಳಸಿ ವ್ಯಾಖ್ಯಾನ ನೀಡುವುದು. ನಿನ್ನೆ, ಇವತ್ತು, ನಾಳೆ, ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಎಂಬ ಪದಗಳ ಮೇಲೆ ಹೆಚ್ಚು ಒತ್ತು ಕೊಡುವುದು.




Scanned with CamScanner

ಯೋಜನಾ ಕಾರ್ಯ 1

# ದೈನಂದಿನ ವೇಳಾಪಟ್ಟಿಯ ಚಾರ್ಟ್

## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಪ್ರಸ್ತುತ ಇರುವ, ಹಿಂದೆ ಏನು ಬಂತು ಮತ್ತು ಆಮೇಲೆ ಏನು ಬರುತ್ತದೆ ಎಂಬ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ.




## ಕಲಿಕಾ ಸಾಮಗ್ರಿಗಳು

ದೈನಂದಿನ ವೇಳಾಪಟ್ಟಿಯ ಚಾರ್ಟ್

## ಶಿಕ್ಷಕರ ಪೂರ್ವಸಿದ್ಧತೆ

ಮೇಲೆ ತೋರಿಸಿರುವ ಹಾಗೆ ಒಂದು ದೈನಂದಿನ ವೇಳಾಪಟ್ಟಿಯನ್ನು ಸಿದ್ಧ ಪಡಿಸಿಕೊಳ್ಳುವುದು. ಅದು ದಿನದಲ್ಲಿ ಮಾಡುವ ಚಟುವಟಿಕೆಗಳನ್ನು ತೋರಿಸಬೇಕು. ಅಲ್ಲಿ ಬೇಕೋ ಅಲ್ಲಿ ಹಾಕಲು ಮತ್ತು ತೆಗೆಯಲು ಅನುಕೂಲವಾಗುವ ಒಂದು ಕ್ಲಿಪ್ ಇರಬೇಕು. ಚಟುವಟಿಕೆಗಳನ್ನು ತೋರಿಸುವ ಚಿತ್ರಗಳು ದೊಡ್ಡದಾಗಿರಬೇಕು.

## ಸೂಚನೆಗಳು

ತರಗತಿಯ ದಿನಚರಿಯ ಒಂದು ಭಾಗದಂತೆ ಮಕ್ಕಳಿಗೆ ಭಾಸವಾಗಲು ಪ್ರತಿದಿನವೂ ದೈನಂದಿನ ವೇಳಾಪಟ್ಟಿಯನ್ನು ಬಳಸುವುದು. ಪ್ರಸ್ತುತ ನಡೆಯುತ್ತಿರುವ ಚಟುವಟಿಕೆಯನ್ನು ತೋರಿಸಲು ಕ್ಲಿಪ್ ಅನ್ನು ಆ ಚಟುವಟಿಕೆಯ ಮುಂದೆ ತೋರಿಸುತ್ತಿರುವಂತೆ ಹಾಕುವುದು. ಚಟುವಟಿಕೆ ಬದಲಾದ ಹಾಗೆ ಕ್ಲಿಪ್ ಅನ್ನು ಮುಂದಕ್ಕೆ ಜರುಗಿಸುವುದು. ನೀವು ಮುಂದಿನ ಚಟುವಟಿಕೆಗೆ ಜರುಗಿಸುತ್ತಿರುವ ಹಾಗೆ ನಾವು ಈ ಚಟುವಟಿಕೆಯನ್ನು ಮಾಡುವವರಿದ್ದೇವೆ ಎಂದು ಮಕ್ಕಳಿಗೆ ಹೇಳಿ ಚಾರ್ಟ್‌ನಲ್ಲಿ ಅದನ್ನು ತೋರಿಸುವ ಚಿತ್ರದತ್ತ ಬೆರಳು ಮಾಡುವುದು. ದಿನದ ಅವಧಿಯಲ್ಲಿ ಈ ಚಟುವಟಿಕೆಯ ಹಿಂದೆ ಯಾವ ಚಟುವಟಿಕೆ ಮಾಡುತ್ತಿದ್ದಿರಿ ಹಾಗೂ ಇದಾದ ಮೇಲೆ ಯಾವ ಚಟುವಟಿಕೆ ಮಾಡುವಿರಿ? ಎಂದು ಕೇಳುತ್ತಿರುವುದು. ಅವರಿಗೆ ಉತ್ತರ ಗೊತ್ತಿಲ್ಲದಿದ್ದರೆ ಚಾರ್ಟನ್ನು ನೋಡಿ ಉತ್ತರ ಕೊಡಲು ಹೇಳುವುದು. ಇದಾದ ನಂತರ ಕ್ಲಿಪ್ ಅನ್ನು ಅನುಗುಣವಾದ ಚಟುವಟಿಕೆಯ ಬಳಿ ಜರುಗಿಸುವ ಜವಾಬ್ದಾರಿಯನ್ನು ಪ್ರತಿಯೊಂದು ದಿನ ಒಂದೊಂದು ಮಗುವಿಗೆ ಅವಕಾಶ ಕೊಡುವುದು.

Scanned with CamScanner

ಯೋಜನಾ ಕಾರ್ಯ 2

# ಗಡಿಯಾರವನ್ನು ಮಾಡುವುದು




## ಕಲಿಕಾ ಫಲಿತಗಳು

ಈ ಯೋಜನಾ ಕಾರ್ಯದ ಕೊನೆಯಲ್ಲಿ ಮಕ್ಕಳು ಗಡಿಯಾರವು ಸಮಯವನ್ನು ತೋರಿಸುತ್ತದೆ ಎಂದು ತಿಳಿದುಕೊಳ್ಳುತ್ತಾರೆ.

## ಕಲಿಕಾ ಸಾಮಗ್ರಿಗಳು

ವೃತ್ತಾಕಾರದ ಹಾಳೆಯ ಪ್ಲೇಟ್‌ಗಳು, ಚಾರ್ಟು, ಸ್ಕೆಚ್ ಪೆನ್ನುಗಳು, ಬಣ್ಣದ ಪೆನ್ಸಿಲ್‌ಗಳು, ಬೋರ್ಡ್ ಪಿನ್ನುಗಳು

## ಶಿಕ್ಷಕರ ಪೂರ್ವಸಿದ್ಧತೆ

ಪ್ರತಿಯೊಂದು ಗುಂಪಿಗೆ ಬೇಕಾದ ಗಡಿಯಾರದ ಮುಳ್ಳುಗಳನ್ನು ಕತ್ತರಿಸಿ ಸಿದ್ಧವಾಗಿಟ್ಟುಕೊಳ್ಳುವುದು. ಘಂಟೆಯ ಮುಳ್ಳು ಒಂದು ಬಣ್ಣ ಮತ್ತು ನಿಮಿಷದ ಮುಳ್ಳು ಬೇರೆಯ ಬಣ್ಣದಲ್ಲಿದ್ದರೆ ಒಳ್ಳೆಯದು. ಮಕ್ಕಳಿಗೆ ತೋರಿಸಲು ನಿಮಗಾಗಿ ಒಂದು ಗಡಿಯಾರವನ್ನು ಮಾಡಿಟ್ಟುಕೊಳ್ಳುವುದು.

## ಸೂಚನೆಗಳು

ಹಂತ 1

ಹಿಂದಿನ ದಿನ ಮಕ್ಕಳನ್ನು ಜೋಡಿಗಳಾಗಿ ವಿಂಗಡಿಸುವುದು ಮತ್ತು ಪ್ರತಿಯೊಂದು ಗುಂಪಿಗೂ ಒಂದು ಪ್ಲೇಟನ್ನು ಕೊಡುವುದು. ಆ ಪ್ಲೇಟಿಗೆ ಬಣ್ಣದ ಪೆನ್ಸಿಲ್‌ಗಳು ಅಥವಾ ಸ್ಕೆಚ್ ಪೆನ್ನುಗಳಿಂದ ತಮಗೆ ಇಷ್ಟವಾದ ಬಣ್ಣ ಹಚ್ಚುವಂತೆ ಮಕ್ಕಳಿಗೆ ಹೇಳುವುದು. ಅದನ್ನು ಒಣಗಲು ಬಿಡುವುದು. ಮಕ್ಕಳಿಗೆ ಅದರ ಮೇಲೆ 1 ರಿಂದ 12 ಸಂಖ್ಯೆಗಳನ್ನು ಬರೆಯಲು ಸಹಾಯ ಮಾಡುವುದು ಅಥವಾ ಅವುಗಳನ್ನು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ವೃತ್ತದ ಸುತ್ತಲೂ 1 ರಿಂದ 12 ನ್ನು ಗುರುತು ಮಾಡಿ ಗಡಿಯಾರದ ಮುಖ ಮಾಡಲು ಹೇಳುವುದು. ಗಡಿಯಾರದ ಮುಳ್ಳುಗಳನ್ನು ಬೋರ್ಡ್ ಪಿನ್ನುಗಳ ಸಹಾಯದಿಂದ ಗಡಿಯಾರದ ಮಧ್ಯದಲ್ಲಿ ಅಂಟಿಸುವುದು. ಮುಳ್ಳುಗಳು ಗಡಿಯಾರದ ಸುತ್ತಲೂ ತಿರುಗುವ ಹಾಗೆ ಇರಬೇಕು, ಆಗ ವಿವಿಧ ಸಮಯವನ್ನು ತೋರಿಸಬಹುದು.

ಹಂತ 2: **ಅವರು ಮಾಡಿದ ಗಡಿಯಾರಗಳನ್ನು ಉಪಯೋಗಿಸಿಕೊಂಡು ಸಂಭಾಷಣೆಯಲ್ಲಿ ತೊಡಗುವುದು**

1. ನೀವು ಗಡಿಯಾರಗಳನ್ನು ಎಲ್ಲಿ ನೋಡಿರುವಿರಿ? ಅವು ಹೇಗೆ ಕಾಣಿಸುತ್ತವೆ? ಎಂದು ಕೇಳುವುದು. ನಿಮಗೆ ಗೊತ್ತೇ? ಗಡಿಯಾರಗಳಿಗೆ ಮುಖ ಮತ್ತು ಕೈಗಳಿರುತ್ತವೆ. ಗಡಿಯಾರದ ವಿವಿಧ ಭಾಗಗಳನ್ನು ಎಲ್ಲ ಮಕ್ಕಳಿಗೆ ಕಾಣುವಂತೆ ತೋರಿಸುವುದು ಮತ್ತು ಅವುಗಳ ಹೆಸರುಗಳನ್ನು ಹೇಳುವುದು.
2. ಮಕ್ಕಳು ಕೈ ಗಡಿಯಾರದ ಬಗ್ಗೆ ಮಾತನಾಡಿದರೆ, ಕೈ ಗಡಿಯಾರ ಮತ್ತು ಗೋಡೆ ಗಡಿಯಾರದ ಸಾಮ್ಯತೆ ಮತ್ತು ವ್ಯತ್ಯಾಸಗಳ ಬಗ್ಗೆ ಚರ್ಚಿಸುವುದು.
3. ನಿಮ್ಮ ಮನೆಯಲ್ಲಿ ಗಡಿಯಾರವಿದೆಯೇ? ಗಿರಗತಿಯಲ್ಲಿರುವ ಗಡಿಯಾರ ನಿಮಗೆ ಕಾಣಿಸುತ್ತಿದೆಯೇ? ಅದು ಇಲ್ಲಿ ಏಕೆ ಇದೆ? ನಾವು ಗಡಿಯಾರವನ್ನು ಏಕೆ ಬಳಸುತ್ತೇವೆ? ಎಂದು ಕೇಳುವುದು.
4. ನೀವು ಯಾವ ಸಮಯಕ್ಕೆ ಶಾಲೆಗೆ ಬರುವಿರಿ? ಎಂದು ಕೇಳುವುದು. –9 ಘಂಟೆಗೆ. 9 ಘಂಟೆಯಾಗಿದೆ ಎಂದು ನಿಮಗೆ ಹೇಗೆ ಗೊತ್ತಾಗುತ್ತದೆ? ನಾವು ಯಾವ ಸಮಯಕ್ಕೆ ಮಧ್ಯಾಹ್ನದ ಊಟ ಮಾಡುತ್ತೇವೆ? ಮನೆಗೆ ಹೋಗುವ ಸಮಯ ಎಂದು ನಿಮಗೆ ಹೇಗೆ ಗೊತ್ತಾಗುತ್ತದೆ?–ಗಡಿಯಾರವನ್ನು ನೋಡುವುದರಿಂದ.
5. ಮಕ್ಕಳು ಈ ಹಂತದಲ್ಲಿ ಸಮಯವನ್ನು ಹೇಗೆ ನೋಡಬೇಕೆಂದು ಕಲಿಯಬೇಕಾಗಿಲ್ಲವಾದರೂ, ಗಡಿಯಾರವನ್ನು ಉಪಯೋಗಿಸುವುದು ಮತ್ತು ಮುಳ್ಳುಗಳು ಹೇಗೆ ಕೆಲಸ ಮಾಡುತ್ತವೆ ಎಂದು ಅವುಗಳನ್ನು ತಿರುಗಿಸಿ ಮಕ್ಕಳಿಗೆ ತೋರಿಸುವುದು.



Scanned with CamScanner

## ಶಿಶುಗೀತೆಯ ಸೂಚನೆಗಳು

### ಕಲಿಕಾ ಫಲಿತಗಳು

ಮಕ್ಕಳು **'ರಾಜನ ಮನೆ ಊಟ ಹೇಗಿತ್ತು?**, ನನ್ನ ಹೆಸರು ದೂಂ ದಾಂ, ಏಳು ಮುದ್ದು ಮತ್ತು ವಾರದ ದಿನಗಳು'– ಈ ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರ ಮತ್ತು ಅಭಿನಯದೊಂದಿಗೆ ಹಾಡಲು ಸಾಧ್ಯವಾಗಬೇಕು.

### ಕಲಿಕಾ ಸಾಮಗ್ರಿಗಳು

ಹಿಂದೆ ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ, ಶಿಶುಗೀತೆಗಳ ಕಾರ್ಡ್‌ಗಳು

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಚೆನ್ನಾಗಿ ಪರಿಚಯಿಸಿಕೊಳ್ಳುವುದು. ಶಿಶುಗೀತೆಯನ್ನು ದೊಡ್ಡ ಅಕ್ಷರಗಳಲ್ಲಿ ಚಾರ್ಟ್ ಪೇಪರಿನ ಮೇಲೆ ಬರೆದು ಚಾರ್ಟಿನ ಮೂಲೆಯಲ್ಲಿ ಅದಕ್ಕೆ ಸಂಬಂಧಿಸಿದ ಸಚಿತ್ರ ವಿವರಣೆಯನ್ನು ಬರೆದು ಮಕ್ಕಳ ಕಣ್ಣಿನ ನೇರಕ್ಕೆ ಗೋಡೆಯ ಮೇಲೆ ತೂಗಿ ಹಾಕುವುದು. ಮಕ್ಕಳು ಶಿಶುಗೀತೆಯನ್ನು ನೋಡಲಿ.

### ಸೂಚನೆಗಳು


1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದನ್ನು ಕುರಿತಾದದ್ದು ಎಂದು ಮಕ್ಕಳಿಗೆ ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
4. ಪದಗಳಿಗೆ ಹೊಂದುವ ಅಭಿನಯವನ್ನು ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ಈಗ ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.

ಗಮನಿಸಿ: ಎಲ್ಲಾ ಶಿಶುಗೀತೆಗಳನ್ನು 3–4 ಬಾರಿ ಹೇಳಿಸಬೇಕು ಹಾಗೂ 'ದಿನ, ವಾರಗಳು, ತಿಂಗಳುಗಳು, ವಾತಾವರಣ ಮತ್ತು ಋತುಗಳು/ಕಾಲಗಳು' ಮುಖ್ಯ ವಿಷಯದುದ್ದಕ್ಕೂ ಪುನಃ ಮಾಡಬೇಕು.

Scanned with CamScanner

ಶಿಶುಗೀತೆ 1

## ರಾಜನ ಮನೆ ಊಟ






ರಾಜನ ಮನೆ ಊಟ ಹೇಗಿತ್ತು ಗೊತ್ತಾ?
ಸೋಮವಾರ ಸಂಡಿಗೆ ಮಂಗಳವಾರ ಮಂಡಿಗೆ
ಬುಧವಾರ ಬೂಂದಿ
ಗುರುವಾರ ಗುಗ್ಗುರಿ
ಶುಕ್ರವಾರ ಶನಿವಾರ ಶ್ಯಾವಿಗೆ ಕೇಸರಿಬಾತ್
ಇದೆಲ್ಲ ತಿಂದು ಏನಾಯ್ತು ಗೊತ್ತಾ?
ಸೋಮವಾರ ಸೊಂಟ ನೋವ್
ಮಂಗಳವಾರ ಮಂಡಿ ನೋವ್
ಬುಧವಾರ ಬುರುಡೆ ನೋವ್
ಗುರುವಾರ ಗಂಟಲ್ ನೋವ್
ಶುಕ್ರವಾರ ಶನಿವಾರ ಆಕ್ಷೀ..ಆಕ್ಷೀ..ಆಕ್ಷೀ





Scanned with CamScanner

ಶಿಶುಗೀತೆ 2

## Days in a Week




### Days in a Week

Every week has Seven days
Seven days, seven days
Every week has Seven days
Sunday Monday Tuesday Wednesday
Thursday Friday and Saturday
Every week has Seven days



Scanned with CamScanner


ಶಿಶುಗೀತೆ 3

## ನನ್ನ ಹೆಸರು

# ನನ್ನ ಹೆಸರು

ನನ್ನ ಹೆಸರು ಡಾಮು ಡೂಮು ಚಂದಮಾಮ
ನನ್ನ ತಂಗಿ ಹೆಸರು ಚಿತ್ರಲೇಖ ಚಂದಮಾಮ
ಕಾಡ ಅಂದ ನೋಡ ಹೋದೆ ಚಂದಮಾಮ
ನಾ ನವಿಲುಗರಿಯ ಹುಡುಕಿ ತಂದೆ ಚಂದಮಾಮ

ನನ್ನ ಹೆಸರು ಡಾಮು ಡೂಮು ಚಂದಮಾಮ
ನನ್ನ ತಂಗಿ ಹೆಸರು ಚಿತ್ರಲೇಖ ಚಂದಮಾಮ
ಬೇಟೆಗೆಂದು ಕಾಡಿಗೋದೆ ಚಂದಮಾಮ
ನನ್ನ ತಂಗಿಗೆರಡು ಗುಬ್ಬಿ ತಂದೆ ಚಂದಮಾಮ
ನನ್ನ ಹೆಸರು __________. ಚಂದಮಾಮ






Scanned with CamScanner

ಶಿಶುಗೀತೆ 4

## ಏಳು ಮುದ್ದು ಕಂದ



## ಏಳು ಮುದ್ದು ಕಂದ

(ಚಿಲಿ ಪಿಲಿ ಹಾಡು) ಸೂರ್ಯ, ಚಂದ್ರ, ನಕ್ಷತ್ರ

ಸೂರ್ಯ ಹುಟ್ಟುವ ಮುನ್ನ
ಏಳು ಮುದ್ದಿನ ಕಂದ
ಚಂದ್ರನು ಹೋದಾನು
ಸೂರ್ಯನು ಬಂದಾನು
ಹೊಂಗಿರಣ ತಂದಾನು
ಏಳು ಕಂದ ಬೆಳಗಾಯಿತು
ಪಕ್ಷಿಗಳು ಹಾರ್‍ಯಾವು
ಹಕ್ಕಿಗಳು ಕೂಗ್ಯಾವೂ
ಏಳು ಕಂದ ಬೆಳಗಾಯಿತು
(ಚಿಲಿ ಪಿಲಿ ಹಾಡು)

ಹಾಲಮ್ಮ ಬಂದಾಳು
ಹಾಲನ್ನು ತಂದಾಳು
ಏಳು ಕಂದ ಬೆಳಗಾಯಿತು
ಹೊತ್ತು ಹೋದೀತು
ಏಳು ಕಂದ ಬೆಳಗಾಯಿತು

ಶಿಶುಗೀತೆ ೫

## Daily Routine

# Daily Routine

This is the way I pack my bag, pack my bag, pack my bag,
This is the way I pack my bag early in the morning.


This is the way I walk to school, walk to school, walk to school,
This is the way I walk to school early in the morning.

This is the way I say hello, say hello, say hello,
This is the way I greet my friends early in the morning.

This is the way I close my books, close my books,
This is the way I close my books early in the evening.

This is the way I say goodbye, say goodbye, say goodbye,
This is the way I say goodbye early in the evening.

This the way I walk back home, walk back home,
This is the way I walk back home early in the evening.





Scanned with CamScanner

# ಶಾಲೆಯ ಪ್ರವಾಸ



## ಕಲಿಕಾ ಫಲಿತಗಳು


ಮಕ್ಕಳು **'ಶಾಲೆಯ ಪ್ರವಾಸ'** ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ. ಸರಳವಾದ, "ಏನು, ಯಾಕೆ, ಹೇಗೆ ಮತ್ತು ಯಾವಾಗ" ಎಂಬ ಪ್ರಶ್ನೆಗಳನ್ನು ಹಾಗೂ ನೆನಪಿಸಿಕೊಳ್ಳುವ ಮತ್ತು ತರ್ಕಬದ್ಧವಾಗಿ ಉತ್ತರಿಸುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಉತ್ತರಿಸುತ್ತಾರೆ.

## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ

## ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಪರಿಚಯಿಸಿಕೊಳ್ಳುವುದು ಹಾಗೂ ಕಥೆಯನ್ನು ಒಮ್ಮೆ ತರಗತಿಗೂ ಮುನ್ನ ಧ್ವನಿಯ ಏರಿಳಿತಗಳೊಂದಿಗೆ ನಿರೂಪಿಸುವುದನ್ನು ಅಭ್ಯಾಸ ಮಾಡಿಕೊಳ್ಳುವುದು.




## ಕಥೆಯ ಸಂಕ್ಷಿಪ್ತ ರೂಪ

**ಶಾಲೆಯ ಪ್ರವಾಸ**

ರಾಜೇಶ್ ಮತ್ತು ರಮ್ಯ ಎಂಬ ಅಣ್ಣ ತಂಗಿಯರಿದ್ದರು. ಅವರಿಬ್ಬರೂ ಒಂದೇ ಶಾಲೆಯಲ್ಲಿ ಓದುತ್ತಿದ್ದರು. ಒಂದು ದಿನ ಅವರ ಶಿಕ್ಷಕರು "ನಾಳೆ ನಾವು ಸಮುದ್ರ ತೀರಕ್ಕೆ ಪ್ರವಾಸ ಹೋಗುತ್ತಿದ್ದೇವೆ. ಆದರೆ ನೆನಪಿಡಿ, ನಾವು ಬೆಳಗಿನ ಜಾವವೇ ಹೊರಡುವುದರಿಂದ ಸಮಯಕ್ಕೆ ಸರಿಯಾಗಿ ಇಲ್ಲಿರಬೇಕು." ಎಂದು ಹೇಳಿದರು.

"ನಾನು ಐಸ್ ಕ್ರೀಂ ತಿನ್ನುತ್ತೇನೆ ಹಾಗೂ ಮರಳು ಮತ್ತು ಅಲೆಗಳ ಜೊತೆ ಆಟವಾಡುತ್ತೇನೆ" ಎಂದು ರಾಜೇಶ್ ಯೋಚಿಸಿದ. "ನಾನು ಮರಳಿನಲ್ಲಿ ಗೂಡು ಕಟ್ಟುತ್ತೇನೆ ಮತ್ತು ಚೆಂಡಾಟ ಆಡುತ್ತೇನೆ" ಎಂದು ರಮ್ಯ ಯೋಚಿಸಿದಳು.

ಆ ರಾತ್ರಿ, ರಮ್ಯ ಬೆಳಿಗ್ಗೆ ಬೇಗನೇ ಏಳಬಹುದೆಂದು ಬೇಗ ಮಲಗಲು ಹೋದಳು. ರಾಜೇಶ್ ತನ್ನ ಆಟಿಕೆಗಳೊಂದಿಗೆ ಆಟವಾಡುತ್ತಾ ಬಹಳ ಸಮಯದವರೆಗೆ ಎದ್ದಿದ್ದ. ಅವನು ಬಹಳ ತಡವಾಗಿ ಮಲಗಲು ಹೋದ, ಅವನಿಗೆ ಬೇಗ ಏಳಲು ಸಾಧ್ಯವಾಗಲಿಲ್ಲ. ಅವನು ಎದ್ದಾಗ ಬಹಳ ತಡವಾಗಿತ್ತು. ಅವನು ಶಾಲೆಗೆ ಓಡಿ ಹೋಗಿ ನೋಡಿದರೆ ಅವನನ್ನು ಬಿಟ್ಟು ಎಲ್ಲರೂ ಪ್ರವಾಸಕ್ಕೆ ಹೋಗಿಯಾಗಿತ್ತು.

ರಾಜೇಶ್ ಏನು ಮಾಡಿದ?

ಅವನು ಮನೆಗೆ ಓಡಿ ಹೋಗಿ ತನ್ನ ಸೈಕಲ್ ತೆಗೆದುಕೊಂಡ. "ಅವರನ್ನು ಹಿಂಬಾಲಿಸಿಕೊಂಡು ಹೋಗುತ್ತೇನೆ" ಎಂದು ಯೋಚಿಸಿದ. ಅದು ದೂರದ ಹಾದಿಯಾಗಿತ್ತು. ಅವನು ಏದುಸಿರು ಬಿಡುತ್ತಾ ಸೈಕಲ್ ತುಳಿದ. ಸೂರ್ಯನು ನೆತ್ತಿಯ ಮೇಲಿದ್ದ ಮತ್ತು ಬಹಳ ಬಿಸಿಲೂ ಇತ್ತು. ಕೊನೆಗೂ ಅವನಿಗೆ ಸಮುದ್ರದ ತೀರ ಕಾಣಿಸಿತು. ಅವನಿಗೆ ಬಹಳ ಸಂತೋಷವಾಯಿತು.

ಅವನ ಸ್ನೇಹಿತರು ಅವನನ್ನು ಆಟವಾಡಲು ಕರೆದರು.

ಆದರೆ ರಾಜೇಶ್‌ಗೆ ಬಹಳ ಸುಸ್ತಾಗಿತ್ತು ಮತ್ತು ನಿದ್ದೆಯೂ ಬರುತ್ತಿತ್ತು. ಅವನು ಮರಳ ಮೇಲೆ ಚೆನ್ನಾಗಿ ನಿದ್ರಿಸಿದ.

**Source: Adapted from https://www.youtube.com/watch?v=RKRZyukYKPo**



Scanned with CamScanner

## ಶಾಲೆಯ ಪ್ರವಾಸ



### ಸೂಚನೆಗಳು

ಹಂತ 1: ಕಥೆಯನ್ನು ಪರಿಚಯಿಸುವುದು. (ವಿಷಯದ ಬಗ್ಗೆ ಮಕ್ಕಳ ಜೊತೆ ಚರ್ಚೆ ಮಾಡುವುದು, ಅದನ್ನು ತಮ್ಮ ಜೀವನದ ಅನುಭವಗಳ ಜೊತೆ ತಾಳೆ ಮಾಡುವುದು ಮತ್ತು ಪುಸ್ತಕದ ಹೊದಿಕೆಯ ಪುಟವನ್ನು ತೋರಿಸುತ್ತಾ ಅದು ಯಾವ ಕಥೆ ಇರಬಹುದೆಂದು ಚರ್ಚಿಸುವುದು.)

ಹಂತ 2: ಮುಖದ ಹಾವಭಾವಗಳು ಮತ್ತು ಧ್ವನಿಯ ಏರಿಳಿತಗಳನ್ನು ಉಪಯೋಗಿಸಿ ಕಥೆಯನ್ನು ಹೇಳುವುದು.

ಹಂತ 3: ಕಥೆಯನ್ನು ಮತ್ತೆ ಓದುತ್ತಾ ಹೋದಂತೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು ಮತ್ತು ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವುದು. ಮಕ್ಕಳಿಗೆ ಕಥೆ ಅರ್ಥವಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು. ಪ್ರತಿಧ್ವನಿ ಪ್ರಶ್ನೆಗಳಿಗೆ ಉದಾಹರಣೆಗಳು

- "ರಾಜೇಶ್ ಮತ್ತು ರಮ್ಯ ಎಂಬ ಅಣ್ಣ ತಂಗಿಯರಿದ್ದರು."–ರಾಜೇಶ್ ಮತ್ತು ರಮ್ಯ ಯಾರು?
- ಒಂದು ದಿನ ಅವರ ಶಿಕ್ಷಕರು "ನಾಳೆ ನಾವು ಸಮುದ್ರ ತೀರಕ್ಕೆ ಪ್ರವಾಸ ಹೋಗುತ್ತಿದ್ದೇವೆ" ಎಂದು ಹೇಳಿದರು.–ಅವರು ಎಲ್ಲಿಗೆ ಹೋಗುತ್ತಿದ್ದಾರೆಂದು ಶಿಕ್ಷಕರು ಹೇಳಿದರು?

ಹಂತ 4: ಕಥೆಯ ಕೊನೆಯಲ್ಲಿ ಸರಳವಾದ ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕಥೆಯಿಂದ ಕೇಳುವುದು. ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳ ಕೆಲವು ಉದಾಹರಣೆಗಳು

- ಸಮುದ್ರ ತೀರದಲ್ಲಿ ಏನು ಮಾಡುತ್ತೇನೆ ಎಂದು ರಾಜೇಶ್ ಕನಸು ಕಾಣುತ್ತಿದ್ದ?
- ರಮ್ಯ ಸಮುದ್ರ ತೀರದಲ್ಲಿ ಏನು ಮಾಡುತ್ತೇನೆ ಎಂದು ಯೋಚಿಸುತ್ತಿದ್ದಳು?
- ರಾಜೇಶ್ ರಾತ್ರಿ ಏನು ಮಾಡಿದ?
- ರಮ್ಯ ಯಾವಾಗ ನಿದ್ದೆ ಮಾಡಿದಳು?
- ರಾಜೇಶ್ ಯಾವಾಗ ನಿದ್ದೆ ಮಾಡಿದ?
- ರಾಜೇಶ್ ಸಮುದ್ರ ತೀರಕ್ಕೆ ಹೇಗೆ ಹೋದ?

ಹಂತ 5: ಮಕ್ಕಳಿಗೆ ಊಹಿಸಬಹುದಾದ ಅಥವಾ "ಹೀಗಾಗಿದ್ದರೆ ಏನಾಗುತ್ತಿತ್ತು" ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು. ಈ ರೀತಿಯ ಪ್ರಶ್ನೆಗಳಿಗೆ ಕೆಲವು ಉದಾಹರಣೆಗಳು

- ಅವನನ್ನು ಬಿಟ್ಟು ಹೋದಾಗ ರಾಜೇಶ್‌ಗೆ ಏನನ್ನಿಸಿತು?
- ನಿಮ್ಮನ್ನು ನಿಮ್ಮ ಸ್ನೇಹಿತರು ಬಿಟ್ಟು ಪ್ರವಾಸಕ್ಕೆ ಹೊರಟು ಹೋದರೆ ನಿಮಗೆ ಏನನ್ನಿಸುತ್ತಿತ್ತು?
- ಕೊನೆಯಲ್ಲಿ ರಾಜೇಶ್‌ಗೆ ಏಕೆ ಸಂತೋಷವಾಯಿತು?

ಹಂತ 6: ಕಥೆಯ ಪಾತ್ರಗಳೊಂದಿಗೆ ಮಕ್ಕಳು ಅನುಭೂತಿಯನ್ನು ತೋರಲು ಅಗತ್ಯವಿರುವ ಸರಳವಾದ ಪ್ರಶ್ನೆಗಳನ್ನು ಕೇಳುವುದು.

- ಶಾಲೆಯ ಮಕ್ಕಳ ಜೊತೆ ಪ್ರವಾಸ ಹೋಗಬೇಕೆಂದಿದ್ದರೆ ರಾಜೇಶ್ ಏನು ಮಾಡಬೇಕಿತ್ತು?
- ಸಮುದ್ರದ ತೀರ ಶಾಲೆಗೆ ಹತ್ತಿರದಲ್ಲಿತ್ತೇ?
- ರಾಜೇಶ್ ಏಕೆ ನಿದ್ರಿಸಿದ?
- ರಾಜೇಶ್ ಅವನ ಸ್ನೇಹಿತರ ಜೊತೆ ಆಟವಾಡಿದನೇ?

ಹಂತ 7: ಮಕ್ಕಳಿಗೆ ತಮ್ಮ ಪದಗಳನ್ನು ಉಪಯೋಗಿಸಿಕೊಂಡು 2–4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ನೆರವು ನೀಡುವುದು.



Scanned with CamScanner

## ಸೃಜನಾತ್ಮಕ ಚಟುವಟಿಕೆಗಳು

**ಚಟುವಟಿಕೆ 1**

## ಹಗಲು ಮತ್ತು ರಾತ್ರಿ




### ಕಲಿಕಾ ಸಾಮಗ್ರಿಗಳು

ಚಾರ್ಟ್‌ಪೇಪರ್ ಮತ್ತು ಅಂಟು, ಬಣ್ಣದ ಪೆನ್ಸಿಲ್‌ಗಳು, ಸ್ಕೆಚ್ ಪೆನ್ನುಗಳು, ಸೂರ್ಯ, ಚಂದ್ರ, ನಕ್ಷತ್ರ, ಮರಗಳು ಮತ್ತು ಮೋಡಗಳ ಕತ್ತರಿಸಿದ ಆಕಾರಗಳು

### ಶಿಕ್ಷಕರ ಪೂರ್ವಸಿದ್ಧತೆ

ಒಂದು ಬಿಳಿಯ ಚಾರ್ಟ್‌ಪೇಪರನ್ನು ತೆಗೆದುಕೊಳ್ಳುವುದು. ಒಂದು ಕಡೆ ಪೂರ್ತಿಯಾಗಿ ಕಪ್ಪು ಬಣ್ಣ ಹಚ್ಚುವುದು. ಸಾಕಷ್ಟು ಸೂರ್ಯ, ಚಂದ್ರ, ನಕ್ಷತ್ರ, ಮರಗಳು ಮತ್ತು ಮೋಡಗಳ ಕತ್ತರಿಸಿದ ಸಣ್ಣ ಆಕಾರಗಳನ್ನು ಸಿದ್ಧ ಮಾಡಿಟ್ಟುಕೊಳ್ಳುವುದು. ಇಡೀ ತರಗತಿಯ ಮಕ್ಕಳು ಗುಂಪುಗಳಲ್ಲಿ ಕೆಲಸ ಮಾಡಲು ಸಾಕಾಗುವಷ್ಟು ಚಾರ್ಟ್ ಪೇಪರ್‌ಗಳನ್ನು ಸಿದ್ಧಪಡಿಸುವುದು.

### ಸೂಚನೆಗಳು

1. ನಾಲ್ಕು ಮಕ್ಕಳಿರುವ ಗುಂಪುಗಳನ್ನು ಮಾಡುವುದು.
2. ಕತ್ತರಿಸಿದ ಆಕಾರಗಳನ್ನು ಮಕ್ಕಳಿಗೆ ಕೊಟ್ಟು ಸೂರ್ಯ ಮತ್ತು ಮರಗಳಿಗೆ ಬಣ್ಣ ಹಚ್ಚುವಂತೆ ಹೇಳುವುದು.
3. ನಂತರ ಅವರಿಗೆ ಚಾರ್ಟ್ ಪೇಪರನ್ನು ಕೊಟ್ಟು ಸೂರ್ಯ ಹಾಗೂ ಮೋಡಗಳು ಮತ್ತು ಕೆಲವು ಮರಗಳನ್ನು ಹಗಲಿನ ಭಾಗದಲ್ಲಿ ಅಂಟಿಸಲು ಹೇಳುವುದು.
4. ಚಂದ್ರ, ನಕ್ಷತ್ರಗಳು ಮತ್ತು ಕೆಲವು ಮರಗಳನ್ನು ರಾತ್ರಿಯ ಭಾಗದಲ್ಲಿ ಅಂಟಿಸಲು ಹೇಳುವುದು.

---

**ಚಟುವಟಿಕೆ 2**

## ಮೋಡಗಳನ್ನು ಮಾಡುವುದು

**ಕಲಿಕಾ ಸಾಮಗ್ರಿಗಳು:** ಹತ್ತಿ, ಚಿತ್ರ ಬರೆಯುವ ಹಾಳೆಗಳು/ನೋಟ್ ಪುಸ್ತಕಗಳು, ಪೆನ್ಸಿಲ್‌ಗಳು, ಅಂಟು

### ಶಿಕ್ಷಕರ ಪೂರ್ವಸಿದ್ಧತೆ

ಈ ಚಟುವಟಿಕೆಯನ್ನು ನೀವು ಶುಭ್ರ ನೀಲಿ ಆಕಾಶ ಮತ್ತು ಕೆಲವು ಬಿಳಿ ಮೋಡಗಳಿರುವ ದಿನ ಮಾಡಬೇಕು. ಮಕ್ಕಳು ಆಕಾಶದತ್ತ ಮುಖ ಮಾಡಿ ನೋಡುವ ಹಾಗೆ ಇರುವ ಸೂರ್ಯ ಹೆಚ್ಚು ಪ್ರಖರನಾಗಿರದ ದಿನ ಆಯ್ಕೆ ಮಾಡಿಕೊಳ್ಳುವುದು.

### ಸೂಚನೆಗಳು

1. ಮಕ್ಕಳನ್ನು ಹೊರಗೆ ಕರೆದೊಯ್ಯುವುದು. ಅವರಿಗೆ ಬೆನ್ನ ಮೇಲೆ ಮಲಗಿ ಆಕಾಶವನ್ನು ಗಮನಿಸಲು ಹೇಳುವುದು.
2. ಸ್ವಲ್ಪ ಸಮಯದ ನಂತರ ಅವರನ್ನು ಒಳಗೆ ಕರೆದೊಯ್ಯುವುದು. ಅವರಿಗೆ ಚಿತ್ರ ಬಿಡಿಸುವ ಹಾಳೆಗಳು ಮತ್ತು ಪೆನ್ಸಿಲ್‌ಗಳನ್ನು ಕೊಡುವುದು.
3. ಅವರಿಗೆ ತಾವು ಗಮನಿಸಿದ ಮೋಡಗಳನ್ನು ಬಿಡಿಸಲು ಹೇಳುವುದು.
4. ಅವರು ಬಿಡಿಸಿದ ನಂತರ, ಹತ್ತಿಯ ಚೂರುಗಳು ಮತ್ತು ಸ್ವಲ್ಪ ಅಂಟನ್ನು ಕೊಡುವುದು.
5. ಅವರು ಬಿಡಿಸಿದ ಮೋಡಗಳ ಒಳಗೆ ಹತ್ತಿಯನ್ನು ಅಂಟಿಸಲು ಹೇಳುವುದು.



Scanned with CamScanner

ಚಟುವಟಿಕೆ 3

## ಮುಕ್ತವಾಗಿ ಚಿತ್ರ ಬಿಡಿಸುವುದು

### ಕಲಿಕಾ ಸಾಮಗ್ರಿಗಳು

ಉದ್ದಕ್ಕೂ ಇರುವ ಕಪ್ಪು ಹಲಗೆ/ಸ್ಲೇಟು, ಸೀಮೆಸುಣ್ಣ, ಪೆನ್ಸಿಲ್‌ಗಳು, ಬಿಳಿ ಹಾಳೆಗಳು, ಬಣ್ಣದ ಪೆನ್ಸಿಲ್‌ಗಳು, ಬಣ್ಣಗಳು

### ಸೂಚನೆಗಳು

1. ಮಕ್ಕಳಿಗೆ ಸೀಮೆಸುಣ್ಣವನ್ನು ಕೊಟ್ಟು ಅವರಿಗೆ ಕಪ್ಪು ಹಲಗೆ/ ಸ್ಲೇಟಿನ ಮೇಲೆ ಅಥವಾ ಪೆನ್ಸಿಲ್‌ನಿಂದ ಬಿಳಿ ಹಾಳೆಗಳ ಮೇಲೆ ಚಿತ್ರ ಬಿಡಿಸಲು ಹೇಳುವುದು.
2. ಅವರು ಬೆಳಿಗ್ಗೆಯಿಂದ ರಾತ್ರಿಯವರೆಗೆ ಏನೇನು ಮಾಡುತ್ತಾರೆ ಅಥವಾ ಹಗಲು ಮತ್ತು ರಾತ್ರಿ ಹೇಗೆ ಕಾಣುತ್ತವೆ ಎಂಬುದರ ಬಗ್ಗೆ ಅವರು ಚಿತ್ರ ಬರೆದು ತೋರಿಸಬಲ್ಲರೇ ಎಂದು ಕೇಳುವುದು.

---

ಚಟುವಟಿಕೆ 4

## ಬೆಳಗಿನ ಚಟುವಟಿಕೆಗಳ ಕೊಲಾಜ್

### ಕಲಿಕಾ ಸಾಮಗ್ರಿಗಳು

ದಿನಪತ್ರಿಕೆಗಳು, ನಿಯತಕಾಲಿಕೆಗಳು, ಹಳೆಯ ಪುಸ್ತಕಗಳು, ಚಾರ್ಟ್ ಪೇಪರ್, ಅಂಟು ಮತ್ತು ಕತ್ತರಿ

### ಸೂಚನೆಗಳು

1. ಮಕ್ಕಳಿಗೆ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಹಳೆಯ ಪುಸ್ತಕಗಳಲ್ಲಿ ಬೆಳಗಿನ ದಿನಚರಿಗೆ ಸಂಬಂಧಿಸಿದ ಚಿತ್ರಗಳನ್ನು ಹುಡುಕಲು ಹೇಳುವುದು.
2. ಉದಾಹರಣೆಗೆ–ಹಲ್ಲುಜ್ಜುವ ಬ್ರಷ್, ಟೂತ್ ಪೇಸ್ಟ್, ಸಾಬೂನಿನ ಜಾಹೀರಾತುಗಳು–ಜನರು ಬೆಳಗಿನ ಉಪಹಾರವನ್ನು ಸೇವಿಸುತ್ತಿರುವ ಚಿತ್ರಗಳು ಇತ್ಯಾದಿ.
3. ಅವರಿಗೆ ಈ ಚಿತ್ರಗಳನ್ನು ಹರಿದು ಚಾರ್ಟ್ ಪೇಪರಿನ ಮೇಲೆ ಅಂಟಿಸಲು ಹೇಳುವುದು. ಅಗತ್ಯವಿದ್ದಲ್ಲಿ ಸಹಾಯ ಮಾಡುವುದು.



Scanned with CamScanner

ಚಟುವಟಿಕೆ 1

## ಸಣ್ಣ ಕಲ್ಲುಗಳು ಮತ್ತು ಗೆರೆಗಳು

### ಕಲಿಕಾ ಸಾಮಗ್ರಿಗಳು

ಸಣ್ಣ ಕಲ್ಲುಗಳು/ಬೀಜಗಳು/ಹುಲ್ಲಿನ ಕಡ್ಡಿಗಳು ಮತ್ತು ಸೀಮೆಸುಣ್ಣ

### ಸೂಚನೆಗಳು

1. ಮಕ್ಕಳಿಗೆ ಶಾಲೆಯ ಮೈದಾನಕ್ಕೆ ಹೋಗಿ ಅಲ್ಲಿ ಸಿಗುವ ಸಣ್ಣ ಕಲ್ಲುಗಳು, ಹುಲ್ಲಿನ ಕಡ್ಡಿಗಳನ್ನು ಸಂಗ್ರಹಿಸಲು ಹೇಳುವುದು.
2. ನೆಲದ ಮೇಲೆ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ದೊಡ್ಡ ದೊಡ್ಡ ರೇಖಾಕೃತಿಗಳನ್ನು ಬರೆಯುವುದು.
3. ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ, ಪ್ರತಿಯೊಂದು ಗುಂಪಿಗೂ ಒಂದು ರೇಖಾ ಚಿತ್ರವನ್ನು ಕೊಡುವುದು. ಪ್ರತಿಯೊಂದು ಗುಂಪಿಗೂ ಸ್ವಲ್ಪ ಸಣ್ಣ ಕಲ್ಲುಗಳು/ಬೀಜಗಳು/ಹುಲ್ಲಿನ ಕಡ್ಡಿಗಳನ್ನು ಕೊಡುವುದು.
4. ರೇಖಾ ಚಿತ್ರದ ಗೆರೆಗಳ ಮೇಲೆ ಸಣ್ಣಕಲ್ಲುಗಳು/ಬೀಜಗಳು/ಹುಲ್ಲಿನ ಕಡ್ಡಿಗಳನ್ನು ಇಡಲು ಹೇಳುವುದು.





Scanned with CamScanner

**ಚಟುವಟಿಕೆ 1**

## ರಿಲೇ ಸಂದ್ಯ



### ಕಲಿಕಾ ಸಾಮಗ್ರಿಗಳು

ಎರಡು ಚೆಂಡುಗಳು

### ಸೂಚನೆಗಳು

1. ಮಕ್ಕಳನ್ನು ಎರಡು ಗುಂಪುಗಳಾಗಿ ವಿಂಗಡಿಸುವುದು.
2. ಎರಡು ಸಾಲಿನಲ್ಲಿ ಮಕ್ಕಳಿಗೆ ನಿಲ್ಲಲು ಹೇಳುವುದು. ತಮ್ಮ ಕಾಲುಗಳನ್ನು ಅಗಲಿಸಿ ನಿಲ್ಲಲು ಹೇಳುವುದು.
3. ಪ್ರತಿ ಸಾಲಿನ ಮುಂದೆ ನಿಂತಿರುವ ಮಗುವಿಗೆ ಒಂದೊಂದು ಚೆಂಡನ್ನು ಕೊಡುವುದು.
4. ಮಕ್ಕಳಿಗೆ ಬಗ್ಗಿ ತಮ್ಮ ಕಾಲುಗಳ ಮಧ್ಯದಲ್ಲಿ ಚೆಂಡನ್ನು ಹಿಂದೆ ದೂಡಲು ಹೇಳುವುದು. ಆ ಚೆಂಡು ಹೀಗೆ ಸಾಲಿನ ಕೊನೆಯಲ್ಲಿ ನಿಂತಿರುವ ಮಗುವಿಗೆ ತಲುಪಬೇಕು.
5. ಕೊನೆಯ ಮಗು ಚೆಂಡನ್ನು ತೆಗೆದುಕೊಂಡು ಓಡಿ ಸಾಲಿನ ಮುಂದೆ ಬಂದು ನಿಂತುಕೊಂಡು ಆಟವನ್ನು ಮೇಲೆ ಹೇಳಿದಂತೆ ಮುಂದುವರಿಸಬೇಕು.
6. ಎಲ್ಲಾ ಮಕ್ಕಳಿಗೂ ಅವಕಾಶ ಸಿಗುವವರೆಗೆ ಹಾಗೂ ಯಾವ ಮಗು ಸಾಲಿನಲ್ಲಿ ಮೊದಲು ಇತ್ತೋ ಆ ಮಗು ಸಾಲಿನ ಕೊನೆಗೆ ಬರುವವರೆಗೂ ಆಟವನ್ನು ಇದೇ ರೀತಿ ಮುಂದುವರೆಸಬೇಕು.
7. ಯಾವ ಸಾಲಿನ ಮಕ್ಕಳು ಮೊದಲು ಆಟವನ್ನು ಮುಗಿಸುವರೋ ಅವರು ಗೆದ್ದರು ಎಂದು ನಿರ್ಧರಿಸುವುದು.

---

**ಚಟುವಟಿಕೆ 2**

## ಹೊತ್ತುಗಳ ಆಟ

### ಕಲಿಕಾ ಸಾಮಗ್ರಿಗಳು

ದೈನಂದಿನ ಚಟುವಟಿಕೆಗಳ ಮಿಂಚುಪಟ್ಟಿಗಳ ಸರಣಿ F8.1.1

### ಸೂಚನೆಗಳು

1. ಬೆಳಿಗ್ಗೆ, ರಾತ್ರಿ, ಸಂಜೆ ಮತ್ತು ಮಧ್ಯಾಹ್ನಗಳಿಗೆ ನಾಲ್ಕು ವೃತ್ತಗಳನ್ನು ಬರೆಯುವುದು.
2. ಇವುಗಳನ್ನು ಸೂಚಿಸಲು ಹುಟ್ಟುತ್ತಿರುವ ಸೂರ್ಯನನ್ನು ಬೆಳಿಗ್ಗೆಗಾಗಿ, ಚಂದ್ರ ಮತ್ತು ನಕ್ಷತ್ರಗಳನ್ನು ರಾತ್ರಿಗಾಗಿ, ಮೋಡಗಳ ಜೊತೆ ಸೂರ್ಯನನ್ನು ಸಂಜೆಗಾಗಿ ಮತ್ತು ಪ್ರಕಾಶಮಾನವಾದ ಸೂರ್ಯನನ್ನು ಮಧ್ಯಾಹ್ನಕ್ಕಾಗಿ ಬರೆಯಬಹುದು.
3. ಯಾವ ಚಿತ್ರ ಏನನ್ನು ಸೂಚಿಸುತ್ತದೆ ಎಂದು ಮಕ್ಕಳಿಗೆ ಹೇಳುವುದು. ಮಕ್ಕಳೂ ಸುತ್ತಲೂ ಓಡುತ್ತಾ ಚಪ್ಪಾಳೆ ಸದ್ದು ನಿಂತಾಗ ಯಾವುದಾದರೂ ಒಂದು ವೃತ್ತದಲ್ಲಿ ನಿಲ್ಲಲು ಬಿಡುವುದು.
4. ಮಿಂಚುಪಟ್ಟಿಗಳಿಂದ ಒಂದು ಕಾರ್ಡನ್ನು ತೆಗೆಯುವುದು. ಆ ಕಾರ್ಡಿನಲ್ಲಿರುವ ಚಿತ್ರಕ್ಕೆ ಹೊಂದುವಂತಹ ವೃತ್ತದಲ್ಲಿರುವ ಮಕ್ಕಳು ಆಟದಿಂದ ಹೊರಗೆ ಹೋಗುತ್ತಾರೆ.
5. ಉದಾಹರಣೆಗೆ ನೀವು ಮಕ್ಕಳು ಶಾಲೆಗೆ ನಡೆದು ಹೋಗುತ್ತಿರುವ ಕಾರ್ಡನ್ನು ತೆಗೆದರೆ ಬೆಳಿಗ್ಗೆಯ ವೃತ್ತದಲ್ಲಿರುವ ಮಕ್ಕಳು ಆಟದಿಂದ ಹೊರಗೆ ಹೋಗುತ್ತಾರೆ.



Scanned with CamScanner

# ದಿನಗಳು



## ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

1. Wake up
2. Walk to school
3. Study in school

1. Wake up
2. Walk to school
3. Study in school

1. Wake up
2. Walk to school
3. Study in school

1. Pack your bag
2. Say good-bye
3. Go to sleep

1. Pack your bag
2. Say good-bye
3. Go to sleep

1. Pack your bag
2. Say good-bye
3. Go to sleep

Say


gesture

model

1. Wake up
2. Walk to school
3. Study in school
4. Pack your bag
5. Say good-bye
6. Go to sleep

1. Go to sleep
2. Pack your bag
3. Say good-bye
4. Study in school
5. Walk to school
6. Wake up

Scanned with CamScanner




# ದಿನಗಳು, ತಿಂಗಳುಗಳು ಮತ್ತು ಋತುಗಳು

---

# ವಾರ, ತಿಂಗಳು ಮತ್ತು ವರ್ಷ




Scanned with CamScanner

# ಕಲಿಕಾ ಫಲಿತಗಳು

## ಉಪ ವಿಷಯ 8.2: ವಾರ, ತಿಂಗಳು ಮತ್ತು ವರ್ಷ

### 3–4 ವರ್ಷಗಳು

1. ಕೆಲಸದ ದಿನಗಳು ಮತ್ತು ರಜಾದಿನಗಳ ಪರಿಕಲ್ಪನೆಯನ್ನು ಮತ್ತು ಒಂದು ವಾರವು ವಾರದ/ ಕೆಲಸದ ದಿನಗಳು ಮತ್ತು ವಾರಾಂತ್ಯದ ದಿನಗಳನ್ನೊಳಗೊಂಡಿದೆ ಎಂದು ತಿಳಿದುಕೊಳ್ಳುವುದು.
2. ವಾರದ / ಕೆಲಸದ ದಿನಗಳು ಮತ್ತು ರಜಾದಿನಗಳಲ್ಲಿ ಅನುಸರಿಸುವ ದಿನಚರಿಗಳಲ್ಲಿನ ವ್ಯತ್ಯಾಸವನ್ನು ವಿವರಿಸಲು ಸಾಧ್ಯವಾಗುವುದು.
3. ವಾರದ ದಿನಗಳಲ್ಲಿ ಶಾಲೆಗೆ ಹಾಜರಾಗುವುದರ ಪ್ರಾಮುಖ್ಯತೆಯನ್ನು ವಿವರಿಸುವುದು.

### 4–5 ವರ್ಷಗಳು

1. ಒಂದು ವಾರದಲ್ಲಿ 7 ದಿನಗಳಿವೆ ಮತ್ತು ವಾರಗಳಿಂದ ತಿಂಗಳು ಆಗುತ್ತದೆ ಎಂದು ತಿಳಿದುಕೊಳ್ಳುವುದು.
2. ವಿವಿಧ ತಿಂಗಳುಗಳಿಗೆ ಸಂಬಂಧಿಸಿದಂತೆ ಇರುವ ಘಟನೆಗಳನ್ನು ತಿಳಿದುಕೊಳ್ಳುವುದು (ಶಾಲೆಗೆ ಹೋಗುವ ತಿಂಗಳುಗಳು, ಬೇಸಿಗೆ ಮತ್ತು ಚಳಿಗಾಲದ ರಜೆಗಳು).
3. ವಾರದ ಹೆಸರುಗಳು ಮತ್ತು ತಿಂಗಳುಗಳ ಹೆಸರುಗಳನ್ನು ಹೇಳುವುದು.

### 5–6 ವರ್ಷಗಳು

1. ಒಂದು ವರ್ಷಕ್ಕೆ 12 ತಿಂಗಳುಗಳು ಮತ್ತು ಫೆಬ್ರವರಿ ಹೊರತಾಗಿ ಎಲ್ಲಾ ತಿಂಗಳುಗಳಲ್ಲಿ 30 ಅಥವಾ 31 ದಿನಗಳಿರುತ್ತವೆ ಎಂದು ತಿಳಿದುಕೊಳ್ಳುವುದು.
2. ಶಾಲಾ ಕ್ಯಾಲೆಂಡರನ್ನು ಅರ್ಥ ಮಾಡಿಕೊಳ್ಳುವುದು (ರಜಾದಿನಗಳು, ಶಾಲೆಯ ಆರಂಭದ ದಿನ, ಮತ್ತು ಶಾಲಾ ವರ್ಷ).
3. ಶಾಲಾ ಕ್ಯಾಲೆಂಡರನ್ನು ಓದುವುದು ಮತ್ತು ತಿಂಗಳ ಕೊನೆಯಲ್ಲಿ ಅದನ್ನು ಬದಲಾಯಿಸುವುದು.

Scanned with CamScanner

ಉಪವಿಷಯ ೮.೨

# ವಾರ, ತಿಂಗಳು ಮತ್ತು ವರ್ಷ




## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಒಂದು ವಾರದಲ್ಲಿ 7 ದಿನಗಳಿವೆ ಮತ್ತು ವಾರಗಳಿಂದ ತಿಂಗಳು ಆಗುತ್ತದೆ ಎಂದು ತಿಳಿದುಕೊಳ್ಳುವುದು.
- ವಿವಿಧ ತಿಂಗಳುಗಳಿಗೆ ಸಂಬಂಧಿಸಿದಂತೆ ಇರುವ ಘಟನೆಗಳನ್ನು ತಿಳಿದುಕೊಳ್ಳುವುದು (ಶಾಲೆಗೆ ಹೋಗುವ ತಿಂಗಳುಗಳು, ಬೇಸಿಗೆ ಮತ್ತು ಚಳಿಗಾಲದ ರಜೆಗಳು.
- ವಾರದ ಹೆಸರುಗಳು ಮತ್ತು ತಿಂಗಳುಗಳ ಹೆಸರುಗಳನ್ನು ಹೇಳುವುದು.



Scanned with CamScanner

ಸಂಭಾಷಣೆ 1



# ಕ್ಯಾಲೆಂಡರ್‌ನಲ್ಲಿ ತಿಂಗಳು ಮತ್ತು ವರ್ಷಗಳನ್ನು ಓದಲು ಕಲಿಯುವುದು

## ಕಲಿಕಾ ಫಲಿತಗಳು

ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.

- ವಿವಿಧ ತಿಂಗಳುಗಳಿಗೆ ಸಂಬಂಧಿಸಿದಂತೆ ಇರುವ ಘಟನೆಗಳನ್ನು ಅರಿತುಕೊಳ್ಳುವುದು (ಶಾಲೆಗೆ ಹೋಗುವ ತಿಂಗಳುಗಳು, ಬೇಸಿಗೆ ಮತ್ತು ಚಳಿಗಾಲದ ರಜೆಗಳು)
- ಒಂದು ವರ್ಷಕ್ಕೆ 12 ತಿಂಗಳುಗಳು ಎಂದು ತಿಳಿದುಕೊಳ್ಳುವುದು ಮತ್ತು ತಿಂಗಳುಗಳ ಹೆಸರುಗಳನ್ನು ಹೇಳುವುದು.

## ಕಲಿಕಾ ಸಾಮಗ್ರಿಗಳು

ಶಿಕ್ಷಕರಿಗೆ ಚಟುವಟಿಕೆಯನ್ನು ನಿರ್ವಹಿಸಲು ಬೇಕಾದ ದೊಡ್ಡ ಕ್ಯಾಲೆಂಡರ್ (ಪ್ರತಿ ತಿಂಗಳಿಗೆ ಒಂದು ಪುಟದಂತೆ ಇರುವ ಕ್ಯಾಲೆಂಡರ್), ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾಯಿಸಬಲ್ಲ ಟೇಬಲ್ ಕ್ಯಾಲೆಂಡರ್ (ರಜಾದಿನಗಳು ಮತ್ತು ಹಬ್ಬದ ದಿನಗಳನ್ನು ಸರಿಯಾಗಿ ಗುರುತಿಸಿದೆ ಎಂದು ಖಚಿತಪಡಿಸಿಕೊಳ್ಳಿ).



## ಸೂಚನೆಗಳು

1. ಕ್ಯಾಲೆಂಡರ್ ತೋರಿಸುತ್ತಾ ಇದು ಕ್ಯಾಲೆಂಡರ್, ಇದರಲ್ಲಿ ಎಲ್ಲಾ ತಿಂಗಳುಗಳು ಮತ್ತು ದಿನಾಂಕಗಳಿವೆ ಎಂದು ಹೇಳುತ್ತಾ ಸಂಭಾಷಣೆ ಪ್ರಾರಂಭಿಸುವುದು. ಪ್ರಾರಂಭದಲ್ಲಿ ತಿಂಗಳುಗಳನ್ನು ಸರಿಯಾದ ಅನುಕ್ರಮದಲ್ಲಿ ನೋಡಬೇಕೆಂದೇನಿಲ್ಲ. ಕ್ಯಾಲೆಂಡರ್ ಅನ್ನು ಮುಕ್ತವಾಗಿ ನೋಡಲು ಅವಕಾಶ ನೀಡುವುದು. ದೊಡ್ಡ ಕ್ಯಾಲೆಂಡರ್ ಅನ್ನು ನೀವು ಹಿಡಿದುಕೊಂಡು ಟೇಬಲ್ ಕ್ಯಾಲೆಂಡರ್ ಅನ್ನು ಮಕ್ಕಳು ತಮ್ಮ ಕುತೂಹಲದಿಂದ ಹಾಗೂ ಒಬ್ಬರಿಂದೊಬ್ಬರಿಗೆ ವರ್ಗಾಯಿಸುತ್ತಾ ಗುಂಪು ಗುಂಪಾಗಿ ನೋಡಲು ಹೇಳುವುದು.
2. ಅವರ ಹುಟ್ಟುಹಬ್ಬ ಯಾವ ತಿಂಗಳು ಬರುತ್ತದೆ ಎಂದು ಕೇಳಿ ಪುಟದ ಮೇಲ್ಭಾಗದಲ್ಲಿ ಬರೆದಿರುವ ತಿಂಗಳಿನ ಹೆಸರನ್ನು ತೋರಿಸುವುದು (ಉದಾ: ಜನವರಿ). ಮಕ್ಕಳಿಗೆ ಅವರ ಹುಟ್ಟುಹಬ್ಬದ ತಿಂಗಳು ಸರಿಯಾಗಿ ತಿಳಿದಿರದಿದ್ದರೆ ಮರುದಿನ ಪೋಷಕರಲ್ಲಿ ಕೇಳಿ ತಿಳಿದುಕೊಂಡು ಬರಲು ಹೇಳುವುದು.
3. ಈಗ ಯಾವ ತಿಂಗಳು ಮತ್ತು ಈ ತಿಂಗಳಿನಲ್ಲಿ ಬರುವ ಹಬ್ಬಗಳು, ಉದಾಹರಣೆಗೆ, ದೀಪಾವಳಿ, ಸಂಕ್ರಾಂತಿ, ದಸರಾ ಯಾವುವು ಎಂದು ಕೇಳುವುದು. ವಿದ್ಯಾರ್ಥಿಗಳಿಗೆ ಸರಿಯುತ್ತರ ಗೊತ್ತಿರದಿದ್ದರೆ ತೊಂದರೆ ಇಲ್ಲ– ಬೇರೆ ಬೇರೆ ತಿಂಗಳುಗಳು ಮತ್ತು ಆ ತಿಂಗಳುಗಳಲ್ಲಿ ಬರುವ ಹಬ್ಬಗಳ ಬಗ್ಗೆ ಮಾತನಾಡುವುದು.
4. ಒಂದು ವರ್ಷದಲ್ಲಿ 12 ತಿಂಗಳುಗಳಿವೆ ಮತ್ತು ವರ್ಷವು ಜನವರಿ ತಿಂಗಳಿನಿಂದ ಪ್ರಾರಂಭವಾಗಿ ಡಿಸೆಂಬರ್ ತಿಂಗಳಿನಲ್ಲಿ ಕೊನೆಗೊಂಡು, ಮತ್ತೆ ಪುನರಾವರ್ತನೆಯಾಗುತ್ತದೆ ಎಂದು ಹೇಳುವುದು. ಕ್ಯಾಲೆಂಡರ್‌ನಲ್ಲಿ ವರ್ಷ ಬರೆದಿರುವುದನ್ನು ತೋರಿಸಿ ಈ ಸಂಖ್ಯೆಯು ಈಗ ನಾವಿರುವ ವರ್ಷವನ್ನು ಸೂಚಿಸುತ್ತದೆ ಎಂದು ಹೇಳುವುದು. ಮೇಲ್ಭಾಗದಲ್ಲಿ ಬರೆದಿರುವ ತಿಂಗಳಿನ ಹೆಸರು ತೋರಿಸಿ ಇದು ತಿಂಗಳಿನ ಹೆಸರು ಎಂದು ಹೇಳುವುದು.ಈ ಸಂಭಾಷಣೆಯಲ್ಲಿ ತಿಂಗಳು ಮತ್ತು ವರ್ಷಗಳ ಬಗ್ಗೆ ಮಾತ್ರ ಗಮನಹರಿಸುವುದು.
5. ಶಾಲಾ ರಜೆಯು ಯಾವ ತಿಂಗಳುಗಳಲ್ಲಿ ಬರುತ್ತದೆ ಎಂದು ಮಕ್ಕಳನ್ನು ಕೇಳುವುದು ಮತ್ತು ಏಪ್ರಿಲ್ ಮತ್ತು ಮೇ ತಿಂಗಳುಗಳನ್ನು ತೋರಿಸಿ ಈ ತಿಂಗಳುಗಳಲ್ಲಿ ಬೇಸಿಗೆ ರಜೆ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಚಳಿಗಾಲದ ರಜೆ ಬರುತ್ತದೆ ಎಂದು ಹೇಳುವುವುದು. ರಜೆ ಇಲ್ಲದಾಗ, ವರ್ಷದ ಉಳಿದ ಭಾಗದಲ್ಲಿ ಏನು ಮಾಡುತ್ತಾರೆ ಎಂದು ಕೇಳುವುದು. ಇವುಗಳು ಶಾಲೆಗೆ ಹೋಗುವ ತಿಂಗಳುಗಳು ಎಂದು ಅವರಿಗೆ ಹೇಳುವುದು.
6. ಈಗ ಮೊದಲನೆ ತಿಂಗಳಿನಿಂದ ಕೊನೆಯ ತಿಂಗಳಿನವರೆಗೆ ಕ್ಯಾಲೆಂಡರ್‌ನ ಎಲ್ಲಾ ಪುಟಗಳನ್ನು ಮಗುಚುತ್ತಾ ನೀವು ಹೇಳಿದಂತೆ ತಿಂಗಳುಗಳ ಹೆಸರುಗಳನ್ನು ಹೇಳಲು ಹೇಳುವುದು.



Scanned with CamScanner

ಸಂಭಾಷಣೆ 2

# ಕ್ಯಾಲೆಂಡರ್‌ನಲ್ಲಿ ವಾರಗಳು ಮತ್ತು ತಿಂಗಳುಗಳನ್ನು ಓದಲು ಕಲಿಯುವುದು



## ಕಲಿಕಾ ಫಲಿತಗಳು

ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.

- ಹಲವು ವಾರಗಳು ಸೇರಿ ತಿಂಗಳುಗಳಾಗುತ್ತವೆ ಮತ್ತು ದಿನಗಳು ಸೇರಿ ವಾರಗಳಾಗುತ್ತವೆ ಎಂದು ತಿಳಿದುಕೊಳ್ಳುವುದು.
- ವಾರದ/ಕೆಲಸದ ದಿನಗಳು ಮತ್ತು ರಜಾದಿನಗಳಿವೆ ಎಂದು ತಿಳಿದುಕೊಳ್ಳುವುದು.

## ಶಿಕ್ಷಕರ ಪೂರ್ವಸಿದ್ಧತೆ

3 – 4 ಟೇಬಲ್ ಕ್ಯಾಲೆಂಡರ್‌ಗಳನ್ನು ಶಾಲೆಯಿಂದ ಅಥವಾ ಪೋಷಕರಿಂದ ಪಡೆದುಕೊಂಡು ಸಿದ್ಧಪಡಿಸಿಟ್ಟುಕೊಳ್ಳಿ.




## ಕಲಿಕಾ ಸಾಮಗ್ರಿಗಳು

ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾಯಿಸಬಲ್ಲ ಟೇಬಲ್ ಕ್ಯಾಲೆಂಡರ್‌ಗಳು.

## ಸೂಚನೆಗಳು

1. 4 – 5 ಮಕ್ಕಳಿರುವ ಗುಂಪುಗಳಾಗಿ ಮಕ್ಕಳನ್ನು ವಿಂಗಡಿಸಿ ಮತ್ತು ಪ್ರತಿ ಗುಂಪಿಗೆ ಒಂದೊಂದು ಕ್ಯಾಲೆಂಡರ್ ಕೊಡಿ.
2. ಕ್ಯಾಲೆಂಡರ್ ಅನ್ನು ಗಮನವಿಟ್ಟು ನೋಡಿ ಅದರಲ್ಲಿ ಏನಿದೆಯೆಂದು ವಿವರಿಸಲು ಹೇಳುವುದು. ಮೇಲ್ಭಾಗದಲ್ಲಿ ಒಂದು ಗೆರೆ ಇದೆ ಎಂದು ಹೇಳುತ್ತಾ ಪ್ರಾರಂಭಿಸುವುದು. ನಿಮಗೆ ಇನ್ನೇನು ಹೇಳಲು ಸಾಧ್ಯವಿದೆ? ಎಂದು ಕೇಳುವುದು. ಅವರ ಸುತ್ತಲೂ ಸುತ್ತುತ್ತಾ ಅವರು ಏನೇನು ಗಮನಿಸಿದರೆಂದು ಹೇಳಲು ಹೇಳುವುದು. ಅದರಲ್ಲಿ ಅಂಕೆಗಳಿವೆ ಮತ್ತು ಇನ್ನೇನೋ ಬರೆದಿದೆ ಎಂದು ಮಕ್ಕಳು ಹೇಳಬಹುದು.
3. ಆ ಅಂಕೆಗಳು ಏನು ಸೂಚಿಸುತ್ತವೆ ಎಂದು ಹೇಳಬಹುದೇ ಎಂದು ಮಕ್ಕಳನ್ನು ಕೇಳುವುದು.
4. ಚೌಕಾಕಾರದ ಒಳಗೆ ಇರುವ ಅಂಕೆಯು ಒಂದು ದಿನಾಂಕವನ್ನು ಮತ್ತು ಒಂದು ಅಡ್ಡಸಾಲು ವಾರವನ್ನು ಸೂಚಿಸುತ್ತದೆ ಎಂದು ವಿವರಿಸುವುದು. ನೀವು ಪೆನ್ಸಿಲ್‌ನಿಂದ ಗೆರೆ ಹಾಕುತ್ತಾ ಒಂದು ತಿಂಗಳಿನಲ್ಲಿರುವ ವಾರಗಳನ್ನು ತೋರಿಸಬಹುದು.
5. ಒಂದು ವರ್ಷವು ತಿಂಗಳುಗಳಿಂದ ಕೂಡಿರುವ ಹಾಗೆ ವಾರಗಳು ಸೇರಿ ತಿಂಗಳುಗಳು ಮತ್ತು ದಿನಗಳು ಸೇರಿ ವಾರಗಳು ಆಗಿವೆ ಎಂದು ವಿವರಿಸುವುದು.
6. ಕ್ಯಾಲೆಂಡರ್‌ನ ಮೇಲ್ಭಾಗದಲ್ಲಿ ಬರೆದಿರುವ ವಾರದ ಹೆಸರುಗಳನ್ನು ತೋರಿಸಿ ಇವುಗಳು ವಾರದ ದಿನಗಳ ಹೆಸರುಗಳೆಂದು ಮಕ್ಕಳಿಗೆ ಹೇಳುವುದು.
7. ನಂತರ, "ನೀವು ಎಲ್ಲಾ ದಿನಗಳಲ್ಲೂ ಶಾಲೆಗೆ ಬರುತ್ತೀರಾ? ಯಾವ ದಿನಗಳಲ್ಲಿ ಬರುವುದಿಲ್ಲ?" ಎಂದು ಮಕ್ಕಳನ್ನು ಕೇಳುವುದು. "ನೀವು ಭಾನುವಾರದಂದು ಶಾಲೆಗೆ ಬರುವುದಿಲ್ಲ, ಏಕೆಂದರೆ ಆ ದಿನ ರಜಾ ದಿನ".
8. ಅವರು ಶಾಲೆಗೆ ಬರುವ ದಿನಗಳು ಕೆಲಸದ ದಿನಗಳು ಮತ್ತು ಶಾಲೆಗೆ ಬರದಿರುವ ದಿನಗಳು ರಜಾ ದಿನಗಳು ಎಂದು ಹೇಳುವುದು.
9. ಕೆಲವು ದಿನಗಳನ್ನು ಬೇರೆ ಬಣ್ಣದಿಂದ ಬರೆದಿರುವುದು ಕಾಣಿಸುತ್ತಿದೆಯೇ? – ರಜಾದಿನಗಳನ್ನು ಈ ರೀತಿ ವಾರದ ದಿನಗಳಿಂದ ಬೇರೆಯಾಗಿ ಗುರುತಿಸಲಾಗಿದೆ.
10. ಮುಂದಿನ ಸಂಭಾಷಣೆಗೆ ಹೋಗುವ ಮುನ್ನ ಸಂಭಾಷಣೆ 1 ಮತ್ತು 2ನ್ನು ಮರುವೀಕ್ಷಣೆ ಮಾಡುವುದು.

Scanned with CamScanner

ಸಂಭಾಷಣೆ 3


## ಕ್ಯಾಲೆಂಡರ್‌ನಲ್ಲಿ ದಿನಗಳು ಮತ್ತು ವಾರಗಳನ್ನು ಓದಲು ಕಲಿಯುವುದು



### ಕಲಿಕಾ ಫಲಿತಗಳು

ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.

- ಒಂದು ವಾರದಲ್ಲಿ 7 ದಿನಗಳಿರುತ್ತವೆ ಎಂದು ತಿಳಿದುಕೊಳ್ಳುವುದು.
- ವಾರದ ದಿನಗಳನ್ನು ಹೆಸರಿಸುವುದು.




### ಕಲಿಕಾ ಸಾಮಗ್ರಿಗಳು

ವಾರದ ದಿನಗಳ ಹೆಸರು ಬರೆದಿರುವ ಚಕ್ರ.

### ಶಿಕ್ಷಕರ ಪೂರ್ವಸಿದ್ಧತೆ

1. 2 ಪೇಪರ್ ತಟ್ಟೆಗಳನ್ನು ತೆಗೆದುಕೊಂಡು ಒಂದನ್ನು ಸಣ್ಣ ವೃತ್ತವಾಗುವಂತೆ ಕತ್ತರಿಸುವುದು.
2. ತಟ್ಟೆಗಳನ್ನು 7 ಸಮಭಾಗಗಳಾಗಿ ವಿಂಗಡಿಸಿ.
3. ಪ್ರತಿ ಭಾಗಕ್ಕೆ ಕಾಮನಬಿಲ್ಲಿನ ಬಣ್ಣಗಳನ್ನು ಅದೇ ಅನುಕ್ರಮದಲ್ಲಿ ತುಂಬುವುದು – ಕೆಂಪು, ಕೇಸರಿ, ಹಳದಿ, ಹಸಿರು, ನೀಲಿ, ಇಂಡಿಗೊ/ ಕಡುನೀಲಿ, ನೇರಳೆ. ಮಕ್ಕಳಿಗೆ ಇನ್ನೂ ಓದಲು ಸಾಧ್ಯವಾಗದಿರುವುದರಿಂದ, ಯಾವ ದಿನವೆಂದು ಗುರುತಿಸಲು ಚಕ್ರದಲ್ಲಿನ ಬಣ್ಣಗಳನ್ನು ಉಪಯೋಗಿಸಬಹುದು.
4. ತಟ್ಟೆಯ ಸುತ್ತಲೂ ದಿನಗಳ ಹೆಸರುಗಳನ್ನು ಅನುಕ್ರಮವಾಗಿ ಬರೆಯುವುದು.
5. ಚಿಕ್ಕ ತಟ್ಟೆಯು 2ನೆಯ ಪರಿಕಲ್ಪನೆಯನ್ನು ಮರುಪೀಕ್ಷಣೆ ಮಾಡುತ್ತದೆ– ನಿನ್ನೆ, ಇವತ್ತು, ನಾಳೆ
6. ಮೇಲಿನ ತಟ್ಟೆಯು ಸುತ್ತುವಂತೆ ಎರಡೂ ತಟ್ಟೆಗಳನ್ನು ಒಂದು ಪಿನ್ನಿನ ಸಹಾಯದಿಂದ ಜೋಡಿಸುವುದು.
7. "ಇವತ್ತು" ವಿಭಾಗದಲ್ಲಿ ಒಂದು ಬಾಣದ ಗುರುತು ಬರೆಯುವುದು.

### ಸೂಚನೆಗಳು

ಹಂತ 1

1. ಮಕ್ಕಳಿಗೆ ಕ್ಯಾಲೆಂಡರ್‌ನ್ನು ತೋರಿಸಿ ವಾರದ ಹೆಸರು ಎಲ್ಲಿದೆ ಎಂದು ಕೇಳುವುದು. ಅವರಿಗೆ ನೆನಪಿಲ್ಲದಿದ್ದರೆ, ಮತ್ತೊಮ್ಮೆ ತೋರಿಸುವುದು.
2. ವಾರದ ಮೊದಲನೆಯ ದಿನ ಯಾವುದೆಂದು ಗೊತ್ತಿದೆಯೇ ಎಂದು ಕೇಳುವುದು. ಅದು ರಜಾದಿನ ಮತ್ತು ಆದಿನ ಶಾಲೆ ಇರುವುದಿಲ್ಲವೆಂಬ ಸುಳಿವು ಕೊಡುವುದು. ಅವರಿಗೆ ಉತ್ತರಿಸಲು ಸಾಧ್ಯವಾಗದಿದ್ದರೆ ಭಾನುವಾರವು ವಾರದ ಮೊದಲನೆಯ ದಿನವೆಂದು ಹೇಳುವುದು.
3. ಭಾನುವಾರದ ನಂತರ ಯಾವ ವಾರ ಬರುವುದೆಂದು ಕೇಳುವುದು. ರಜಾ ದಿನದ ನಂತರ ಈ ದಿನ ಅವರು ಶಾಲೆಗೆ ಬರುತ್ತಾರೆ ಎಂಬ ಸುಳಿವು ಕೊಡುವುದು. ಅವರಿಗೆ ಉತ್ತರಿಸಲು ಸಾಧ್ಯವಾಗದಿದ್ದರೆ ಭಾನುವಾರದ ನಂತರ ಸೋಮವಾರ ಬರುವುದೆಂದು ಹೇಳುವುದು.
4. ಪ್ರತಿದಿನವೂ ಈ ದಿನ ಯಾವ ವಾರ ಮತ್ತು ಈ ದಿನ ಏನು ಮಾಡಲಿದ್ದೇವೆ ಎಂದು ಹೇಳುತ್ತಾ ಪ್ರಾರಂಭಿಸಿ. ಉದಾಹರಣೆಗೆ, "ಇಂದು ಮಂಗಳವಾರ, ನಾನು ಇಂದು ಒಂದು ಕಥೆ ಹೇಳಲಿದ್ದೇನೆ" ಎಂದು ಹೇಳುವುದು.
5. ವಾರದಲ್ಲಿ 7 ದಿನಗಳಿವೆ ಎಂದು ಹೇಳುವುದು. ಶನಿವಾರದ ನಂತರ ಭಾನುವಾರ ಮತ್ತು ಇನ್ನೊಂದು ವಾರವು ಪುನಃ ಪ್ರಾರಂಭವಾಗುತ್ತದೆ ಎಂದು ಹೇಳುವುದು.



Scanned with CamScanner

# ಕ್ಯಾಲೆಂಡರ್‌ನಲ್ಲಿ ದಿನಗಳು ಮತ್ತು ವಾರಗಳನ್ನು ಓದಲು ಕಲಿಯುವುದು



ಹಂತ 2

1. ವಾರದ ದಿನಗಳ ಹೆಸರು ಬರೆದಿರುವ ಚಕ್ರವನ್ನು ಮಕ್ಕಳಿಗೆ ತೋರಿಸಿ ಯಾವ ದಿನಕ್ಕೆ ಯಾವ ಬಣ್ಣ ಎಂದು ಹೇಳುವುದು.
2. ಬಾಣದ ಗುರುತು ಇಂದಿನ ದಿನವನ್ನು ತೋರಿಸುತ್ತದೆ ಹಾಗು ಅದರ ಎಡ, ಬಲಭಾಗಗಳಲ್ಲಿರುವುದು ಅನುಕ್ರಮವಾಗಿ ನಿನ್ನೆ ಮತ್ತು ನಾಳೆಯ ದಿನಗಳೆಂದು ಹೇಳುವುದು.
3. ಪ್ರತಿದಿನ, ಮೊದಲು ವಾರದ ಚಕ್ರವನ್ನು ತಿರುಗಿಸುವಂತೆ ಒಂದು ಮಗುವಿಗೆ (ಸರದಿಯಂತೆ ಒಬ್ಬೊಬ್ಬರಾಗಿ) ಹೇಳುವುದು. ಚಕ್ರ ತಿರುಗಿಸಿದ ಮೇಲೆ ಇಂದು ಯಾವ ವಾರ, ನಿನ್ನೆ ಯಾವ ವಾರವಾಗಿತ್ತು ಮತ್ತು ನಾಳೆ ಯಾವ ವಾರವೆಂದು ಹೇಳಲು ಅವರಿಗೆ ಹೇಳುವುದು.
4. ಕ್ಯಾಲೆಂಡರ್‌ನಲ್ಲಿ ಅಂದಿನ ದಿನಾಂಕದ ಸುತ್ತ ಒಂದು ವೃತ್ತ ಬರೆಯಲು ಅದೇ ಮಗುವಿಗೆ ಹೇಳುವುದು.

ಹಂತ 3

ನಿನ್ನೆ, ಇಂದು, ನಾಳೆ ಮತ್ತು ವಾರದ ದಿನಗಳನ್ನು ಪುನರುಚ್ಚರಿಸಲು ಈ ಹಾಡನ್ನು ಉಪಯೋಗಿಸಿ: ಖಾಲಿ ಬಿಟ್ಟ ಜಾಗದಲ್ಲಿ ಆಯಾ ದಿನದ ಹೆಸರನ್ನು ಹೇಳುತ್ತಾ ಇಡೀ ತರಗತಿಗೆ ಜೊತೆಯಲ್ಲಿ ಹಾಡಲು ಹೇಳುವುದು.

ಇಂದು __________ ವಾರ

ಇಂದು __________ ವಾರ

ಇಡೀ ದಿನ

ಇಡೀ ದಿನ

ನಿನ್ನೆ __________ ವಾರ

ನಾಳೆ __________ ವಾರ

ಓಹೋ ಏನು ಖುಷಿ!

ಓಹೋ ಏನು ಖುಷಿ!



Scanned with CamScanner

ಯೋಜನಾ ಕಾರ್ಯ 1

# ಒಂದು ಕ್ಯಾಲೆಂಡರ್ ಮಾಡುವುದು



## ಕಲಿಕಾ ಫಲಿತಗಳು

ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.

- ವಾರಗಳು ಸೇರಿ ತಿಂಗಳು ಆಗುತ್ತದೆ.
- ವಾರದ ದಿನಗಳು ಮತ್ತು ರಜಾದಿನಗಳು ಇರುತ್ತವೆ.




## ಕಲಿಕಾ ಸಾಮಗ್ರಿಗಳು

ಕ್ಯಾಲೆಂಡರ್ (ತಿಂಗಳ ಕೊನೆಯಲ್ಲಿ ಹೋಲಿಸುವುದಕ್ಕಾಗಿ ರಜಾದಿನಗಳನ್ನು -ಭಾನುವಾರಗಳನ್ನು ಕೆಂಪು ಬಣ್ಣದಿಂದ ಗುರುತಿಸಿರುವ ಕ್ಯಾಲೆಂಡರ್ ಅನ್ನು ಬಳಸಿಕೊಳ್ಳಿ), ಆ ತಿಂಗಳಿನಲ್ಲಿರುವ ಅಷ್ಟೂ ದಿನಗಳನ್ನು ಗುರುತಿಸಲು ಚಾರ್ಟ್ ಪೇಪರ್, ಪೋಸ್ಟ್ ಇಟ್ (ಅಂಟಿಸುವ ಚೀಟಿಗಳು), ಪೆನ್ಸಿಲ್‌ಗಳು, ಬಣ್ಣಕ್ಕಾಗಿ ಸ್ಕೆಚ್‌ಪೆನ್ನುಗಳು, ಕ್ರೇಯಾನ್‌ಗಳು

## ಶಿಕ್ಷಕರ ಪೂರ್ವಸಿದ್ಧತೆ

- ಒಂದು ಚಾರ್ಟ್ ಪೇಪರ್ ತೆಗೆದುಕೊಂಡು ಕ್ಯಾಲೆಂಡರ್‌ನ ಮೇಲ್ಭಾಗದಲ್ಲಿ ತಿಂಗಳಿನ ಹೆಸರು ಬರೆಯುವುದು.
- ಆಯಾ ತಿಂಗಳಿಗೆ ಅನುಗುಣವಾಗಿ 31 (ಅಥವಾ 28 ತಿಂಗಳಿಗನುಸಾರವಾಗಿ) ಚೌಕಗಳಿರುವಂತೆ ಒಂದು ಗ್ರಿಡ್ ಬರೆಯಿರಿ. ಈಗಿರುವ ತಿಂಗಳಿನ ಪ್ರಕಾರ, ಪ್ರತಿ ದಿನಾಂಕದ ಅಂಕೆಯನ್ನು ಆಯಾ ವಾರಕ್ಕನುಗುಣವಾಗಿ ಚೌಕದ ಮೂಲೆಯಲ್ಲಿ ಬರೆಯುವುದು. ಉದಾಹರಣೆಗೆ, ತಿಂಗಳಿನ ಮೊದಲ ದಿನ ಗುರುವಾರವಾದರೆ, ಗುರುವಾರವನ್ನು ಸೂಚಿಸುವ ಬಣ್ಣವಿರುವ ಚೌಕದ ಕೆಳಗೆ ಮೊದಲ ಪೋಸ್ಟ್ ಇಟ್ ಚೀಟಿಯನ್ನು ಅಂಟಿಸುವುದು.
- ಪ್ರತಿದಿನವೂ ದಿನಾಂಕವನ್ನು ಅನುಸರಿಸುವಂತೆ ಚುಕ್ಕಿ ಗೆರೆಗಳನ್ನು ಉಪಯೋಗಿಸಿ ಅಂಕೆಗಳನ್ನು ಬರೆಯುವುದು. ಮಕ್ಕಳಿಗೆ ಬರೆಯುವುದಕ್ಕಾಗಿ ಉಳಿದ ಪೋಸ್ಟ್ ಇಟ್‌ಗಳನ್ನು ಖಾಲಿ ಬಿಡುವುದು. ನಂತರ, ಪ್ರತಿಯೊಂದು ಸಾಲಿನ ಮೇಲ್ಭಾಗದಲ್ಲಿ ವಾರದ ದಿನಗಳನ್ನು ಬರೆಯುವುದು.
- ವಾರದ ದಿನಗಳನ್ನು 7 ಬೇರೆ ಬೇರೆ ಬಣ್ಣಗಳಿಂದ ತುಂಬುವುದು. ವಾರದ ಚಕ್ರದಲ್ಲಿರುವಂತೆ ಕಾಮನಬಿಲ್ಲಿನ ಬಣ್ಣಗಳಾಗಬಹುದು. ಚಟುವಟಿಕೆಯನ್ನು ಮಾಡುವ ಮೊದಲೇ ಈ ಕೆಳಗಿನ ಹಂತಗಳನ್ನು ಸರಿಯಾಗಿ ತಿಳಿದುಕೊಳ್ಳುವುದು.

## ಸೂಚನೆಗಳು

1. ಮುಖ್ಯ ವಿಷಯದಲ್ಲಿನ ಮೊದಲನೆಯ ದಿನದಿಂದ ಪ್ರಾರಂಭಿಸಿ ಒಂದು ಕ್ಯಾಲೆಂಡರ್ ಮಾಡಲು ಮಕ್ಕಳಿಗೆ ಸಹಾಯ ಮಾಡುವುದು.
2. ಪ್ರತಿದಿನದ ಪ್ರಾರಂಭದಲ್ಲಿ, ಅಂದಿನ ತಾರೀಕು ಕೇಳಿ ಅದನ್ನು ಪೋಸ್ಟ್ ಇಟ್‌ನಲ್ಲಿ ಬರೆಯಲು ಮಗುವಿಗೆ ಹೇಳುವುದು.
3. ದಿನದ ಕೊನೆಯಲ್ಲಿ, ಆ ಪೋಸ್ಟ್ ಇಟ್‌ನಲ್ಲಿ ಅಂದಿನ ಚಟುವಟಿಕೆಗಳನ್ನು ತೋರಿಸುವ ಚಿತ್ರವನ್ನು ಬರೆಯಲು ಒಂದು ಮಗುವಿಗೆ ಹೇಳುವುದು. ಅಂದು ಏನೇನು ಮಾಡಿದರು ಎಂಬದನ್ನು ನೆನಪಿಸಿಕೊಳ್ಳಲು ಇತರ ಮಕ್ಕಳು ಸಹಾಯ ಮಾಡಲು ಹೇಳುವುದು.

### ಹಂತ 1

1. ತಿಂಗಳಿನುದ್ದಕ್ಕೂ ಪ್ರತಿದಿನ ಶಾಲಾ ಅವಧಿಯಲ್ಲಿ ಕೆಲವು ನಿಮಿಷಗಳನ್ನು ತಾವು ಆಯಾ ದಿನ ಮಾಡಿದ ಚಟುವಟಿಕೆಗಳನ್ನು ನೆನಪಿಸಿಕೊಳ್ಳುವುದಕ್ಕೆ ಮೀಸಲಿರಿಸಬೇಕು.
2. ಕ್ಯಾಲೆಂಡರ್‌ನಿಂದ ಪೋಸ್ಟ್ ಇಟ್ ಚೀಟಿಯನ್ನು ತೆಗೆದು ಅದನ್ನು ಒಂದು ಮಗುವಿಗೆ ಕೊಟ್ಟು ಅವನಿ/ಳಿಗೆ ಅದರಲ್ಲಿರುವ ಚುಕ್ಕಿಚಿತ್ರದಲ್ಲಿಯ ಚುಕ್ಕಿಗಳನ್ನು ಸೇರಿಸಿ ಇಂದಿನ ದಿನಾಂಕವನ್ನು ಬರೆಯಲು ಹೇಳುವುದು.



Scanned with CamScanner

## ಒಂದು ಕ್ಯಾಲೆಂಡರ್ ಮಾಡುವುದು

3. ಅವನಿ/ಳಿಗೆ ಅಂದು ತರಗತಿಯಲ್ಲಿ ಕಲಿತ ಯಾವುದಾದರೊಂದು ವಿಷಯದ ಕುರಿತು ಚಿತ್ರ ಬಿಡಿಸಲು ಹೇಳುವುದು. ಅದನ್ನು ಅಲ್ಲಿಯೇ ಬಿಡಿಸಬಹುದು ಅಥವಾ ಮನೆಗೆ ತೆಗೆದುಕೊಂಡು ಹೋಗಿ ಬಿಡಿಸಬಹುದು (ಮಗುವನ್ನು ಕರೆದೊಯ್ಯಲು ಪೋಷಕರು ಬಂದರೆ, ಅವರೂ ಈ ಚಟುವಟಿಕೆಯಲ್ಲಿ ಭಾಗವಹಿಸಬಹುದೆಂದು ಹೇಳುವುದು).
4. ಮರುದಿನ, ವೃತ್ತ/ ಯೋಜನಾಕಾರ್ಯ/ ಸೃಜನಾತ್ಮಕ ಕೆಲಸ/ ಆಟದ ಅವಧಿಯಲ್ಲಿ ಮಗುವಿಗೆ ಅದು ಏನನ್ನು ಬರೆದಿದೆ ಎಂದು ವಿವರಿಸಿ ಅದನ್ನು ಕ್ಯಾಲೆಂಡರ್‌ನಲ್ಲಿ ಸರಿಯಾದ ಜಾಗದಲ್ಲಿ ಅಂಟಿಸಲು ಹೇಳುವುದು.
5. ಚಟುವಟಿಕೆಯನ್ನು ಪ್ರಾರಂಭಿಸುವ ಮೊದಲೇ ಕ್ಯಾಲೆಂಡರ್ ನೋಡಿ ವಾರ, ದಿನಾಂಕ ಮತ್ತು ತಿಂಗಳುಗಳ ಹೆಸರುಗಳನ್ನು ಹೇಳುವುದು. "ನಿನ್ನೆ ನಾವು ________ ಮಾಡಿದೆವು ಮತ್ತು ಅದನ್ನು ________ ಮಗುವು ಬರೆದಿದ್ದಾನೆ/ಳೆ (ಮಗುವಿನ ಹೆಸರು). ಇವತ್ತಿನ ಚಟುವಟಿಕೆಯನ್ನು ಯಾರು ಬರೆಯುತ್ತೀರಿ ಮತ್ತು ನಾಳೆ ಯಾರು ಹೇಳುತ್ತೀರಿ?" ಎಂದು ಕೇಳುವುದು.
6. ನಿರ್ದಿಷ್ಟ ದಿನದ ಕೆಳಗೆ ಪೋಸ್ಟ್ ಇಟ್ ಚೀಟಿಯನ್ನು ಏಕೆ ಅಂಟಿಸುತ್ತಾರೆಂದು ವಿವರಿಸುವುದು. ಯಾವ ಬಣ್ಣ ಯಾವ ದಿನವನ್ನು ಸೂಚಿಸುತ್ತದೆ ಎಂದು ಅವರಿಗೆ ಸ್ಪಷ್ಟವಾಗಿ ತಿಳಿದಿರಬೇಕು. ಪ್ರತಿದಿನವೂ ಪೋಸ್ಟ್ ಇಟ್ ಚೀಟಿಯನ್ನು ಅಂಟಿಸುವಾಗ ಇದನ್ನು ಪುನರಾವರ್ತಿಸುವುದು.
7. ತಿಂಗಳಿನ ಪ್ರತಿದಿನವೂ ಈ ಚಟುವಟಿಕೆಯನ್ನು ಮಾಡುವುದು ಮತ್ತು ಪ್ರತಿ ಮಗುವಿಗೂ ಪೋಸ್ಟ್ ಇಟ್ ಚೀಟಿಯಲ್ಲಿ ಬರೆಯುವ ಅವಕಾಶ ಕೊಡುವುದು. ಪೋಸ್ಟ್ ಇಟ್ ಚೀಟಿಯನ್ನು ಅಂಟಿಸುವಾಗ ಇಂದು ಯಾವ ದಿನ, ನಿನ್ನೆ ಯಾವ ದಿನ ಮತ್ತು ನಾಳೆ ಯಾವ ದಿನ ಎಂದು ಕೇಳುವುದು. ಅವರು ಕ್ಯಾಲೆಂಡರ್‌ನಲ್ಲಿ ದಿನದ ಬಣ್ಣ ನೋಡಿ ಉತ್ತರಿಸಬಹುದು. ಈ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಕಷ್ಟವಾಗಿರುವುದರಿಂದ ಮಕ್ಕಳಿಗೆ ಸಹಾಯ ಮಾಡುವುದು.
8. ರಜಾದಿನಗಳಿಗೆ X ಗುರುತುಹಾಕಿ ಹಿಂದಿನ ದಿನವೇ ಅದನ್ನು ಕ್ಯಾಲೆಂಡರ್‌ಗೆ ಅಂಟಿಸುವುದು.

### ಹಂತ 2

1. ಪ್ರತಿ ಒಂದು ವಾರ ಮುಗಿದ ಮೇಲೆ, ಅದನ್ನು ಮಕ್ಕಳ ಗಮನಕ್ಕೆ ತಂದು ಒಂದು ವಾರ ಇಲ್ಲಿಗೆ ಮುಗಿಯಿತು ಎಂದು ತಿಳಿಸುವುದು.
2. ವಾರದ ಕೊನೆಯಲ್ಲಿ, ಮಕ್ಕಳಿಗೆ ಕ್ಯಾಲೆಂಡರ್ ಅನ್ನು ಗಮನಿಸಲು ಹೇಳಿ ವಾರದ ದಿನಗಳನ್ನು ಮತ್ತು ವಾರಂತ್ಯದ ದಿನಗಳನ್ನು ತೋರಿಸುವುದು.
3. ತಿಂಗಳ ಕೊನೆಯಲ್ಲಿ ಮಕ್ಕಳಿಗೆ ತಾವು ಒಂದು ತಿಂಗಳಿನ ಕ್ಯಾಲೆಂಡರ್ ಅನ್ನು ಮಾಡಿದ್ದೀರಾ ಎನ್ನುವುದನ್ನು ಮಕ್ಕಳಿಗೆ ತಿಳಿಸುವುದು.
4. ಆ ತಿಂಗಳಿನ ಸರಿಯಾದ ಕ್ಯಾಲೆಂಡರ್ ಮತ್ತು ಅವರು ಮಾಡಿದ ಕ್ಯಾಲೆಂಡರಗಳನಿಟ್ಟುಕೊಂಡು ಹೋಲಿಸಲು ಹೇಳುವುದು.
5. ಮೊದಲು, ಏನೇನು ಹೋಲಿಕೆಗಳಿವೆ ಮತ್ತು ವ್ಯತ್ಯಾಸಗಳಿವೆ ಎಂದು ಅವರು ಗುರುತಿಸಲಿ.
6. ಕ್ಯಾಲೆಂಡರ್‌ನಲ್ಲಿರುವ ರಜಾದಿನಗಳೂ ಮತ್ತು ಅವರು X ಗುರುತುಹಾಕಿದ ರಜಾದಿನಗಳೂ ಹೊಂದಿಕೆಯಾಗುತ್ತವೆಯೇ ಎಂದು ಕೇಳುವುದು.
7. ಯಾವುದು ತಿಂಗಳ ಮೊದಲ ದಿನ ಹಾಗೂ ಯಾವುದು ತಿಂಗಳ ಕೊನೆಯ ದಿನ ಎಂದು ಕ್ಯಾಲೆಂಡರ್ ನೋಡಿ ಹೇಳಬಹುದೇ ಎಂದು ಕೇಳುವುದು. ಅವರು ಮೇಲೆ ಇರುವ ಬಣ್ಣ ನೋಡಿ ವಾರದ ದಿನವನ್ನು ಕಂಡುಹಿಡಿಯಬಹುದು.
8. ಯಾವುದಾದರೊಂದು ದಿನವನ್ನು ಆರಿಸಿ, ಅವರು ಮಾಡಿದ ಚಿತ್ರ ನೋಡಿ ಆ ದಿನ ಅವರು ಏನು ಮಾಡಿದ್ದಾರೆಂದು ನೆನಪಿದೆಯೇ ಎಂದು ಕೇಳುವುದು.
9. ಕೊನೆಯದಾಗಿ, ವಾರದ ದಿನಗಳನ್ನು, ತಿಂಗಳುಗಳ ಹೆಸರುಗಳನ್ನು ಮತ್ತು ಒಂದು ವರ್ಷದಲ್ಲಿ 12 ತಿಂಗಳುಗಳಿವೆ ಮತ್ತು ಒಂದು ವಾರದಲ್ಲಿ 7 ದಿನಗಳಿವೆ ಎಂದು ಮರುವೀಕ್ಷಿಸುವುದು.

**ಗಮನಿಸಿ:** ಈ ಚಟುವಟಿಕೆಯು ಇಡೀ ತಿಂಗಳಿನ ದೈನಂದಿನ ಚಟುವಟಿಕೆ ಹಾಗೂ ಇದು ಮುಂದಿನ ವಿಷಯದ ಕಲಿಕೆಯು ನಡೆಯುತ್ತಿದ್ದಾಗಲೂ ಮುಂದುವರಿಯಬೇಕು.



Scanned with CamScanner

## ಶಿಶುಗೀತೆಯ ಸೂಚನೆಗಳು

### ಕಲಿಕಾ ಫಲಿತಗಳು

"ನಾವು ಸುತ್ತುವೆವು ಮಾವಿನ ಗಿಡದ ಸುತ್ತ", "ಹಸಿರು ಎಲೆ", "ವರ್ಷದ ತಿಂಗಳುಗಳು" ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರ, ಮತ್ತು ಅಭಿನಯಗಳೊಂದಿಗೆ ಹಾಡುವ ಸಾಮರ್ಥ್ಯವನ್ನು ಹೊಂದುವುದು.

### ಕಲಿಕಾ ಸಾಮಗ್ರಿಗಳು

ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಪರಿಚಯಿಸಿಕೊಳ್ಳುವುದು. ಚಾರ್ಟ್ ಹಾಳೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಚಿತ್ರ ಸಹಿತವಾದ ಶಿಶುಗೀತೆಯನ್ನು ಒಂದು ಮೂಲೆಯಲ್ಲಿ ಬರೆಯುವುದು ಮತ್ತು ಮಕ್ಕಳು ನೋಡಲು ಸಾಧ್ಯವಾಗುವಂತೆ ಕಣ್ಣಿನ ನೇರಕ್ಕೆ ಇದನ್ನು ಪ್ರದರ್ಶಿಸುವುದು. ಮಕ್ಕಳು ಶಿಶುಗೀತೆಯನ್ನು ನೋಡಲಿ.

### ಸೂಚನೆಗಳು

1. ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದನ್ನು ಕುರಿತಾದದ್ದು ಎಂದು ಮಕ್ಕಳಿಗೆ ವಿವರಿಸುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ, ಭಾವಾಭಿನಯದೊಂದಿಗೆ ಹಾಗೂ ಧ್ವನಿಯ ಏರಿಳಿತಗಳೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ಶಿಕ್ಷಕರು ಹಾಡಿದ ನಂತರ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
4. ಪದಗಳಿಗೆ ಹೊಂದುವ ಅಭಿನಯವನ್ನು ಮಾಡಿ ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ಈಗ ಶಿಕ್ಷಕರ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಮಕ್ಕಳಿಗೆ ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.

ಗಮನಿಸಿ: ಎಲ್ಲಾ ಶಿಶುಗೀತೆಗಳನ್ನು 3 - 4 ಬಾರಿ ಹೇಳಿಸಬೇಕು ಹಾಗೂ "ದಿನಗಳು, ವಾರಗಳು ಮತ್ತು ತಿಂಗಳುಗಳು, ಹವಾಮಾನ ಮತ್ತು ಋತುಗಳು" ಮುಖ್ಯ ವಿಷಯದ ತರಗತಿಯುದ್ದಕ್ಕೂ ಇದನ್ನು ಪುನರಾವರ್ತಿಸಬೇಕು.



Scanned with CamScanner

ಶಿಶುಗೀತೆ 1

## ನಾವು ಸುತ್ತುವೆವು ಮಾವಿನ ಗಿಡದ ಸುತ್ತ

# ನಾವು ಸುತ್ತುವೆವು ಮಾವಿನ ಗಿಡದ ಸುತ್ತ

ಬೇಸಿಗೆ ರಜೆಯಲಿ ಸುತ್ತುವೆವು
ಮಾವಿನ ಗಿಡವನು ಹತ್ತುವೆವು!!
ಏಪ್ರಿಲ್ ಮೇ ತಿಂಗಳಲಿ ಹತ್ತುವೆವು ಸುತ್ತುವೆವು!!
ಬೇಸಿಗೆ ರಜೆಯನು ಕಳೆಯುವೆವು!! (3)

ಜೂನ್ ಮಳೆಯಲಿ ನೆನೆಯುವೆವು
ಶಾಲೆಯ ಕಡೆಗೆ ನಡೆಯುವೆವು ನಾವು ನಡೆಯುವೆವು
ನೆನೆಯುವೆವು ನಾವು ನಡೆಯುವೆವು!! (3)

ದಸರಾ ನೋಡಲು ಹೋಗುವೆವು
ಅಕ್ಟೋಬರ್ ರಜೆಯನು ಕಳೆಯುವೆವು
ಕಳೆಯುವೆವು ನಾವ್ ಕಳೆಯುವೆವು
ದಸರಾ ರಜೆಯನು ಕಳೆಯುವೆವು (3)





Scanned with CamScanner

ಶಿಶುಗೀತೆ 2

## ಹಸಿರು ಎಲೆ



# ಹಸಿರು ಎಲೆ

ಎಲೆ ಎಲೆ ಹಸಿರು ಎಲೆ
ತೋರಣ ಕಟ್ಟಲು ಮಾವಿನ ಎಲೆ
ಯುಗಾದಿ ಹಬ್ಬಕ್ಕೆ ಬೇವಿನ ಎಲೆ
ಯುಗಾದಿ ಹಬ್ಬಕ್ಕೆ ಬೇವಿನ ಎಲೆ
ಹಾರವ ಕಟ್ಟಲು ಪನ್ನೀರೆಲೆ
ಪೂಜೆಯ ಮಾಡಲು ತುಳಸಿ ಎಲೆ
ಊಟಕೆ ಹಾಕುವ ಬಾಳೆ ಎಲೆ
ಊಟದ ನಂತರ ವೀಳ್ಯದೆಲೆ



Scanned with CamScanner

ಶಿಶುಗೀತೆ 3

## 12 months in a year

# 12 Months in a Year

There are 12 months in a year
Let's sing them loud and clear
For all of us to hear

January, February, March and
April May, June, July and August
September, October, November December
These are the months of the year






Scanned with CamScanner

# ಅಂಜಲಿಯ ಹುಟ್ಟುಹಬ್ಬಕ್ಕೊಂದು ಅಚ್ಚರಿ



## ಕಲಿಕಾ ಫಲಿತಗಳು

ಮಕ್ಕಳು **"ಅಂಜಲಿಯ ಹುಟ್ಟುಹಬ್ಬಕ್ಕೊಂದು ಅಚ್ಚರಿ"** ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ. "ಏನು? ಏಕೆ? ಹೇಗೆ? ಮತ್ತು ಯಾವಾಗ?" ಎಂಬ ಸರಳವಾದ, ಗ್ರಹಿಕೆಯ ಮತ್ತು ನೆನಪಿಸಿಕೊಳ್ಳುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಉತ್ತರಿಸುತ್ತಾರೆ.

## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ

## ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಹಾಗೂ ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ನಿರೂಪಿಸುವುದನ್ನು ಅಭ್ಯಾಸ ಮಾಡಿಕೊಳ್ಳುವುದು.




Anjali's Birthday Surprise
ಅಂಜಲಿಯ ಹುಟ್ಟುಹಬ್ಬಕ್ಕೊಂದು ಅಚ್ಚರಿ

## ಕಥೆಯ ಸಂಕ್ಷಿಪ್ತ ರೂಪ

**ಅಂಜಲಿಯ ಹುಟ್ಟುಹಬ್ಬಕ್ಕೊಂದು ಅಚ್ಚರಿ**

ಅಂಜಲಿಯ ಹುಟ್ಟುಹಬ್ಬಕ್ಕೆ ಒಂದು ವಾರವಿತ್ತು. "ಪೂರ್ತಿಯಾಗಿ ಏಳು ದಿನಗಳಿವೆ!" "ನಿನ್ನ ಹುಟ್ಟುಹಬ್ಬಕ್ಕೆ ನಿನಗೆ ಒಂದು ಅಚ್ಚರಿಯ ಉಡುಗೊರೆ ಇದೆ" ಎಂದು ಅವಳ ತಾಯಿ ಹೇಳಿದರು. ಅದೇನಿರಬಹುದೆಂದು ಅಂಜಲಿಯು ಕೌತುಕಪಟ್ಟಳು. ಸೋಮವಾರ, "ಬಹುಶಃ ನನಗೆ ದೊಡ್ಡ ರೆಕ್ಕೆಗಳು ಸಿಗಬಹುದು ಮತ್ತು ನಾನು ಅದರಿಂದ ಹಕ್ಕಿಯ ಹಾಗೆ ಆಕಾಶದಲ್ಲಿ ಎತ್ತರಕ್ಕೆ ಹಾರಬಹುದು" ಎಂದು ಯೋಚಿಸಿದಳು. ಮಂಗಳವಾರ, "ಒಂದು ಮನೆಯಷ್ಟು ದೊಡ್ಡದಾದ ಹುಟ್ಟುಹಬ್ಬದ ಕೇಕ್ ಇರಬಹುದು" ಎಂದುಕೊಂಡಳು. ಬುಧವಾರ, "ಬಹುಶಃ ಚಂದ್ರನಲ್ಲಿಗೆ ಹಾರಲು ಒಂದು ರಾಕೆಟ್ ಸಿಗಬಹುದು" ಎಂದು ಯೋಚಿಸಿದಳು. ಗುರುವಾರ, "ಬಹುಶಃ ನನಗೆ ಮೀನಿನ ರೆಕ್ಕೆಗಳು ಸಿಗಬಹುದು ಮತ್ತು ನಾನು ಮೀನಿನಂತೆ ನೀರಿನೊಳಗೆ ಈಜಾಡಬಹುದು" ಎಂದು ಯೋಚಿಸಿದಳು. ಶುಕ್ರವಾರ, "ಬಹುಶಃ ನನಗೆ ಒಂದು ಕ್ರಿಕೆಟ್ ಬ್ಯಾಟ್ ಸಿಗಬಹುದು ಮತ್ತು ನಾನು ನೂರು ರನ್ ಹೊಡೆಯಬಹುದು" ಎಂದು ಯೋಚಿಸಿದಳು. ಶನಿವಾರ, "ತುಂಬಾ ಸಿಹಿತಿನಿಸುಗಳಿರುವ ಒಂದು ಪೆಟ್ಟಿಗೆಯ ಕೀಲಿಕೈ ಸಿಗಬಹುದು" ಎಂದು ಯೋಚಿಸಿದಳು. ಅಂತೂ ಕೊನೆಗೆ ಭಾನುವಾರ ಅಂಜಲಿಯ ಹುಟ್ಟುಹಬ್ಬದ ದಿನ ಬಂತು. ಅವಳ ತಾಯಿ ಅವಳನ್ನು ಕರೆದು "ಇಲ್ಲಿ ಬಂದು ಈ ಅಚ್ಚರಿಯನ್ನು ನೋಡು. ಇದು ಎಲ್ಲದಕ್ಕಿಂತ ಅತ್ಯುತ್ತಮವಾದ ಉಡುಗೊರೆ ನಿನಗೆ!" ಎಂದು ನಗುತ್ತಾ ಹೇಳಿದರು. ಅಂಜಲಿಯ ಅಣ್ಣ ಅರುಣ ಅವಳನ್ನು ಭೇಟಿಯಾಗಲು ದೂರದ ದೊಡ್ಡನಗರದಲ್ಲಿಯ ಕೆಲಸದಿಂದ ಬಿಡುವು ಮಾಡಿಕೊಂಡು ಬಂದಿದ್ದನು. ಅಂಜಲಿಯು ಅವನನ್ನು ನೋಡಿದ್ದೇ ಖುಷಿಯಿಂದ ಅಣ್ಣನ ಬಳಿಗೆ ಓಡಿ ಹೋದಳು ಮತ್ತು ಅಣ್ಣ ಅವಳನ್ನು ಎತ್ತಿ ಅಪ್ಪಿಕೊಂಡನು. ಅಂಜಲಿಗೆ ತುಂಬಾ ಸಂತೋಷವಾಯಿತು. ಅವಳ ಹುಟ್ಟುಹಬ್ಬದ ಉಡುಗೊರೆಯು ಅವಳು ಯೋಚಿಸಿದ್ದೆಲ್ಲದಕ್ಕಿಂತ ಹೆಚ್ಚು ಚೆನ್ನಾಗಿತ್ತು ಎಂದು ಯೋಚಿಸಿದಳು.



Scanned with CamScanner

## ಅಂಜಲಿಯ ಹುಟ್ಟುಹಬ್ಬಕ್ಕೊಂದು ಅಚ್ಚರಿ



### ಸೂಚನೆಗಳು

ಹಂತ 1: ಮೇಲಿನ ಕಥೆಯನ್ನು ಪರಿಚಯಿಸುವುದು (ಮಕ್ಕಳೊಂದಿಗೆ ವಿಷಯದ ಬಗ್ಗೆ ಚರ್ಚಿಸುತ್ತಾ ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು. ಪುಸ್ತಕದಲ್ಲಿಯ ಚಿತ್ರವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸುವುದು).

ಹಂತ 2: ಕಥೆಯನ್ನು ನಿಮ್ಮದೇ ಆದ ಪದಗಳಲ್ಲಿ ಸೂಕ್ತವಾದ ಹಾವಭಾವ ಹಾಗೂ ಧ್ವನಿಯ ಏರಿಳಿತಗಳೊಂದಿಗೆ ಹೇಳುವುದು.

ಹಂತ 3: ಕಥೆ ಓದುತ್ತಾ ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವುದು. ಕಥೆಯ ಮುಖ್ಯ ಅಂಶ ಅರ್ಥವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುವುದು. ಪ್ರತಿಧ್ವನಿ ಪ್ರಶ್ನೆಗಳಿಗೆ ಉದಾಹರಣೆಗಳು:

- "ಅಂಜಲಿಯ ಹುಟ್ಟುಹಬ್ಬಕ್ಕೆ ಒಂದು ವಾರವಿದೆ"– ಒಂದು ವಾರದಲ್ಲಿ ಯಾರ ಹುಟ್ಟುಹಬ್ಬವಿದೆ?
- "ಅಂಜಲಿಯ ಅಣ್ಣ ಅರುಣ ಅವಳನ್ನು ಭೇಟಿಯಾಗಲು ದೂರದ ದೊಡ್ಡನಗರದಲ್ಲಿಯ ಕೆಲಸದಿಂದ ಬಿಡುವು ಮಾಡಿಕೊಂಡು ಬಂದಿದ್ದನು."– ಭೇಟಿ ಮಾಡಲು ದೊಡ್ಡನಗರದಿಂದ ಯಾರು ಬಂದರು?

ಹಂತ 4: ಕಥೆಯ ಕೊನೆಯಲ್ಲಿ ಸರಳವಾದ, ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕೇಳುವುದು. ಸರಳವಾದ, ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳಿಗೆ ಉದಾಹರಣೆಗಳು.

- ತನಗೆ ರೆಕ್ಕೆಗಳ ಉಡುಗೊರೆ ಸಿಗಬಹುದು ಎಂದು ವಾರದ ಯಾವ ದಿನ ಅಂಜಲಿ ಯೋಚಿಸಿದಳು?
- ಸೋಮವಾರ ತನಗೆ ಯಾವ ಉಡುಗೊರೆ ಸಿಗಬಹುದೆಂದು ಅಂಜಲಿ ಯೋಚಿಸಿದಳು? ಇತರ ದಿನಗಳಿಗೂ ಇದೇ ಪ್ರಶ್ನೆಗಳನ್ನು ಕೇಳುವುದು.
- ತನ್ನ ಅಣ್ಣನನ್ನು ನೋಡಿದಾಗ ಅಂಜಲಿ ಏನು ಮಾಡಿದಳು?

ಹಂತ 5: ಊಹಿಸಲು ಅವಕಾಶವಿರುವ ಅಥವಾ "ಹೀಗಾಗಿದ್ದರೆ ಏನಾಗುತ್ತಿತ್ತು"ಪ್ರಶ್ನೆಗಳನ್ನು ಕೇಳುತ್ತಾ ಹೋಗುವುದು. ಅಂತಹ ಪ್ರಶ್ನೆಗಳಿಗೆ ಉದಾಹರಣೆಗಳು:

- ತನ್ನ ಅಣ್ಣನನ್ನು ನೋಡಿದಾಗ ಅಂಜಲಿಗೆ ಏನನ್ನಿಸಿತು?
- ನಿಮ್ಮ ಮನೆಗೆ ಅತಿಥಿಗಳು ಬಂದಾಗ ನಿಮಗೆ ಏನನ್ನಿಸುತ್ತದೆ?
- ನಿಮಗೆ ಏನು ಉಡುಗೊರೆ ಸಿಗಬಹುದೆಂದು ಕನಸು ಕಾಣುವಿರಿ?

ಹಂತ 6: ಕಥೆಯ ಪಾತ್ರಗಳೊಂದಿಗೆ ಮಕ್ಕಳು ಸಂವೇದನಾಶೀಲತೆಯನ್ನು ತೋರಲು ಅಗತ್ಯವಿರುವ ಸರಳವಾದ ಪ್ರಶ್ನೆಗಳನ್ನು ಕೇಳುವುದು.

- ಒಂದು ವಾರದಲ್ಲಿ ಎಷ್ಟು ದಿನಗಳಿವೆ?
- ಯಾವ ದಿನ ಅಂಜಲಿಯ ಹುಟ್ಟುಹಬ್ಬ?
- ಅಂಜಲಿಗೆ ಸಿಕ್ಕಿದ ಅಚ್ಚರಿಯ ಉಡುಗೊರೆ ಏನು? ಅವಳು ಕಲ್ಪಿಸಿಕೊಂಡ ಇತರ ಎಲ್ಲಾ ಉಡುಗೊರೆಗಳಿಗಿಂತ ಇದು ಏಕೆ ಚೆನ್ನಾಗಿತ್ತು?

ಹಂತ 7: ಮಕ್ಕಳಿಗೆ ತಮ್ಮ ಪದಗಳನ್ನು ಉಪಯೋಗಿಸಿಕೊಂಡು 2 – 4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ನೆರವು ನೀಡುವುದು.




Scanned with CamScanner

ಚಟುವಟಿಕೆ 1

## ನಾವು ಒಂದು ಸೂರ್ಯನನ್ನು ಮಾಡೋಣ

### ಕಲಿಕಾ ಸಾಮಗ್ರಿಗಳು

ಬಿಳಿಯ ಕಾಗದದ ತಟ್ಟೆ, ಬಣ್ಣಗಳು, ಕತ್ತರಿ, ಸ್ಟ್ರಾಗಳು, ಅಂಟು, ಚಮ್ಕಿ, ಹೊಳೆಯುವ ಮಣಿಗಳು



### ಶಿಕ್ಷಕರ ಪೂರ್ವಸಿದ್ಧತೆ

ಸ್ಟ್ರಾಗಳನ್ನು ಒಂದೇ ಉದ್ದಕ್ಕೆ ಕತ್ತರಿಸಿಕೊಳ್ಳುವುದು. ಎಲ್ಲಾ ವಸ್ತುಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು. ತರಗತಿಗೂ ಮೊದಲು ಈ ಚಟುವಟಿಕೆಯನ್ನು ಮಾಡಿ ನೋಡುವುದು. ಎಲ್ಲ ಮಕ್ಕಳಿಗೂ ಬೇಕಾಗುವಷ್ಟು ಸಾಮಗ್ರಿಗಳಿವೆ ಎಂದು ಖಚಿತಪಡಿಸಿಕೊಳ್ಳುವುದು.


### ಸೂಚನೆಗಳು

ಈ ಚಟುವಟಿಕೆಯನ್ನು ಹೇಗೆ ಮಾಡುವುದೆಂದು ಒಂದು ಬಾರಿ ಮಾಡಿ ತೋರಿಸುವುದು. ಅವರು ಇಷ್ಟಬಂದಂತೆ ಒಂದು ಸೂರ್ಯನನ್ನು ಮಾಡಲಿರುವಿರಿ ಎಂದು ಮಕ್ಕಳಿಗೆ ಹೇಳುವುದು. ಅವರಿಗೆ ಕಾಗದದ ತಟ್ಟೆ ಮತ್ತು ಬಣ್ಣಗಳನ್ನು ಕೊಡುವುದು. ಅವರಿಷ್ಟದಂತೆ ಕಾಗದದ ತಟ್ಟೆಯನ್ನು ಬಣ್ಣ ಹಚ್ಚಿ ಅಲಂಕರಿಸಲು ಹೇಳುವುದು. ಅಲಂಕರಿಸಿದ ಮೇಲೆ ಈ ಸೂರ್ಯನಿಗೆ ಕಿರಣಗಳಿಲ್ಲ, ಅವುಗಳನ್ನು ಅಂಟಿಸಬೇಕೆಂದು ಹೇಳುವುದು. ಈಗ ಸ್ಟ್ರಾಗಳನ್ನು ಕೊಟ್ಟು ಅವುಗಳನ್ನು ತಟ್ಟೆಯ ಸುತ್ತಲೂ ಅಂಟಿಸಲು ಹೇಳುವುದು. ತಟ್ಟೆಗಳಲ್ಲಿ ತೂತು ಮಾಡಿ ದಾರ ಕಟ್ಟಿ ಈ ಸೂರ್ಯನ ಚಿತ್ರಗಳನ್ನು ನೇತುಹಾಕಬಹುದು.

---

ಚಟುವಟಿಕೆ 2

## ಹರಳು ಕಲ್ಲುಗಳಿಗೆ ಬಣ್ಣ ಹಚ್ಚುವುದು.



### ಕಲಿಕಾ ಸಾಮಗ್ರಿಗಳು

ಹರಳು ಕಲ್ಲುಗಳು, ಬಣ್ಣಗಳು, ಬ್ರಶ್‌ಗಳು

### ಶಿಕ್ಷಕರ ಪೂರ್ವಸಿದ್ಧತೆ

- ಒಂದಿನ ದಿನವೇ ಬಣ್ಣಹಚ್ಚಲು ಬೇಕಾದ ಹರಳು ಕಲ್ಲುಗಳನ್ನು ಸಂಗ್ರಹಿಸಲು ಮಕ್ಕಳಿಗೆ ಹೇಳುವುದು. ಹರಳು ಕಲ್ಲುಗಳು ಕೈಯಲ್ಲಿ ಹಿಡಿದುಕೊಂಡು ಬಣ್ಣ ಹಚ್ಚುವಷ್ಟು ದೊಡ್ಡದಾಗಿರಬೇಕು ಮತ್ತು ನಯವಾಗಿರಬೇಕು.
- ಹರಳುಗಳನ್ನು ತೊಳೆದು ಬಿಸಿಲಿನಲ್ಲಿ ಒಣಗಲು ಬಿಡುವುದು.
- ಹರಳುಗಳಿಗೆ ಬಣ್ಣ ಹಚ್ಚಲು ಒಂದು ಜಾಗವನ್ನು ಅಣಿಗೊಳಿಸುವುದು. ಆ ಜಾಗದ ನೆಲ ಕೆಡದಿರಲು ಅದರ ಮೇಲೆ ಒಂದು ದಿನಪತ್ರಿಕೆಯನ್ನು ಹರಡುವುದು.

### ಸೂಚನೆಗಳು

ಮಕ್ಕಳಿಗೆ ಹರಳುಕಲ್ಲುಗಳು, ಬಣ್ಣಗಳು ಮತ್ತು ಬ್ರಶ್‌ಗಳನ್ನು ಕೊಟ್ಟು ಅವರಿಷ್ಟದಂತೆ ಬಣ್ಣ ಹಚ್ಚಲು ಹೇಳುವುದು. ರಾತ್ರಿಯಿಡೀ ಒಣಗಲು ಬಿಡಿ



Scanned with CamScanner

ಚಟುವಟಿಕೆ 1

## ತಿಂಗಳುಗಳು/ವಾರಗಳ ಹೆಸರುಗಳ ಆಟ




### ಕಲಿಕಾ ಸಾಮಗ್ರಿಗಳು

ಸೀಮೆಸುಣ್ಣ

### ಸೂಚನೆಗಳು

1. ನೆಲದ ಮೇಲೆ 1– 7 (ವಾರಗಳ ಆಟವಾದರೆ) ಅಥವಾ 1– 12 (ತಿಂಗಳುಗಳ ಆಟವಾದರೆ) ಕುಂಟೆ ಬಿಲ್ಲೆ ಆಟದ ಮನೆಗಳನ್ನು ಬರೆಯುವುದು.
2. ಈಗ ಮಕ್ಕಳಿಗೆ ವಾರದ ಅಥವಾ ತಿಂಗಳುಗಳ ಹೆಸರುಗಳನ್ನು ಅನುಕ್ರಮವಾಗಿ ಹೇಳುತ್ತಾ ಒಂದೊಂದೇ ಮನೆಗಳನ್ನು ಹಾರಲು ಹೇಳುವುದು. ಇದರಲ್ಲಿ ಹೆಸರನ್ನು ಅನುಕ್ರಮವಾಗಿ ಹೇಳಲು ತಪ್ಪಿದರೆ ಆ ಮಗುವು ಆಟದಿಂದ ಹೊರಗೆ ಬರುತ್ತಾನೆ.

ಚಟುವಟಿಕೆ 2

## ಪೆಟ್ಟಿಗೆ ಖಾಲಿ ಮಾಡಿ ಮತ್ತೆ ತುಂಬಿ

**ಕಲಿಕಾ ಸಾಮಗ್ರಿಗಳು**: ಪೆಟ್ಟಿಗೆ, ಮಣಿಗಳು, ಸ್ಟಾಪ್ ವಾಚ್

### ಸೂಚನೆಗಳು

1. ಈ ಆಟ ಹೇಗೆ ಆಡುವುದೆಂದು ಮಕ್ಕಳಿಗೆ ಸೂಚನೆ ಕೊಡುವುದು. ಒಂದು ಮಗುವನ್ನು ಮುಂದೆ ಬರಲು ಹೇಳುವುದು.
2. ಈ ಮಣಿಗಳನ್ನು ಮೊದಲು ಪೆಟ್ಟಿಗೆಗೆ ತುಂಬಲು ಮಗುವಿಗೆ ಹೇಳುವುದು. ನಂತರ ಅವನು ಅದನ್ನು ಖಾಲಿ ಮಾಡಬೇಕಾಗುತ್ತದೆ.
3. ಪೆಟ್ಟಿಗೆಯನ್ನು ತಲೆ ಕೆಳಗೆ ಮಾಡದೆ ಒಂದೊಂದೇ ಮಣಿಯನ್ನು ಎತ್ತಿ ತೆಗೆಯಬೇಕು. "ಯಾವುದು ಹೆಚ್ಚು ಸಮಯ ತೆಗೆದುಕೊಳ್ಳುವುದೆಂದು ನೋಡೋಣವೇ? ನನ್ನ ಗಡಿಯಾರದಲ್ಲಿ ನೋಡೋಣ" ಎಂದು ಹೇಳುವುದು.
4. ಈ ಎರಡೂ ಚಟುವಟಿಕೆಗಳು ತೆಗೆದುಕೊಂಡ ಸಮಯವನ್ನು ಸ್ಟಾಪ್ ವಾಚ್‌ನ ಸಹಾಯದಿಂದ ಗುರುತಿಸಿಕೊಳ್ಳುವುದು. ಯಾವುದು ಹೆಚ್ಚು ಅಥವಾ ಯಾವುದು ಕಡಿಮೆ ಸಮಯ ಎಂದು ಹೇಳುವುದರ ಮೂಲಕ ಫಲಿತಾಂಶವನ್ನು ಹೇಳುವುದು. ಅಂದರೆ, ಯಾರು ಕಡಿಮೆ ಸಮಯ ತೆಗೆದುಕೊಂಡರು, ಎಷ್ಟು ಸೆಕೆಂಡುಗಳು, ಯಾರು ಹೆಚ್ಚು ಸಮಯ ತೆಗೆದುಕೊಂಡರು, ಎಷ್ಟು ಸೆಕೆಂಡುಗಳು ಎಂದು. ವೇಗವಾಗಿ ಚಟುವಟಿಕೆ ಮುಗಿಸಿದವರಿಗೆ ಚಪ್ಪಾಳೆ ತಟ್ಟುವುದು ಬೇಡ, ಅದು ಸ್ಪರ್ಧೆಯಾಗಿರದೆ ಒಂದು ಮೋಜಿನ ಆಟವಾಗಿರಲಿ.
5. ಈ ಆಟವನ್ನು ಬೇರೆ ಬೇರೆ ಮಕ್ಕಳೊಡನೆ ಆಡಿಸಬಹುದು. ಇಬ್ಬರನ್ನು ಮುಂದೆ ಬರಲು ಹೇಳಿ ಒಬ್ಬೊಬ್ಬರೂ ಒಂದೊಂದು ಪೆಟ್ಟಿಗೆಯನ್ನು ತುಂಬಲು ಹೇಳುವುದು. ಯಾರು ಮೊದಲು ಪೆಟ್ಟಿಗೆಯನ್ನು ತುಂಬುತ್ತಾರೋ ಅವರು ವಿಜಯಿಗಳಾಗುತ್ತಾರೆ ಎಂದು ಹೇಳುವುದು. ಮಕ್ಕಳು ಮಣಿಗಳನ್ನು ಒಂದು ಚಮಚದ ಸಹಾಯದಿಂದ ಮತ್ತು ಒಂದೊಂದಾಗಿ ಪೆಟ್ಟಿಗೆಗೆ ತುಂಬಲು ಅವಕಾಶ ಕೊಡುವುದು. ಯಾವುದು ಹೆಚ್ಚು ಸಮಯ ತೆಗೆದುಕೊಳ್ಳುವುದೆಂದು ಊಹಿಸಲು ಮಕ್ಕಳಿಗೆ ಅವಕಾಶ ಕೊಡುವುದು ಮತ್ತು ಸಮಯವನ್ನು ಗುರುತುಹಾಕಿ ಕೊಳ್ಳುವುದು.



Scanned with CamScanner

## ಚಟುವಟಿಕೆ 3

## ವಾರದ ದಿನಗಳ ಆಟ

**ಕಲಿಕಾ ಸಾಮಗ್ರಿಗಳು**: ಸಂಗೀತ ಸಾಧನ (ಅಥವಾ ಕಾಲು ತಟ್ಟುವುದು ಅಥವಾ ಚಪ್ಪಾಳೆ ಹೊಡೆಯುವುದರ ಮೂಲಕ ಶಬ್ದ ಮಾಡುವುದು).

### ಸೂಚನೆಗಳು

1. ಮಕ್ಕಳನ್ನು 7 ಗುಂಪುಗಳಾಗಿ ವಿಂಗಡಿಸುವುದು. ಸಾಧ್ಯವಾದರೆ ಪ್ರತಿ ಗುಂಪಿನಲ್ಲಿ ಸಮನಾದ ಸಂಖ್ಯೆಯ ಮಕ್ಕಳಿರುವಂತೆ ನೋಡಿಕೊಳ್ಳುವುದು. ಪ್ರತಿ ಗುಂಪಿಗೂ ಒಂದೊಂದು ವಾರದ ದಿನಗಳ ಹೆಸರು ಕೊಡುವುದು. ಉದಾಹರಣೆಗೆ, 1ನೇ ಗುಂಪು ಸೋಮವಾರ, 2ನೇ ಗುಂಪು ಮಂಗಳವಾರ, 3ನೇ ಗುಂಪು ಬುಧವಾರ, 4ನೇ ಗುಂಪು ಗುರುವಾರ, 5ನೇ ಗುಂಪು ಶುಕ್ರವಾರ, 6ನೇ ಗುಂಪು ಶನಿವಾರ, 7ನೇ ಗುಂಪು ಭಾನುವಾರ.
2. ತಮ್ಮ ಗುಂಪಿನ ಹೆಸರು ಮಕ್ಕಳಿಗೆ ತಿಳಿದಿದೆ ಎಂದು ಖಚಿತಪಡಿಸಿಕೊಳ್ಳುವುದು. "ನಾನು ನಿಮ್ಮ ಗುಂಪಿನ ಹೆಸರು ಕೂಗಿದಾಗ, ಉದಾಹರಣೆಗೆ, ನಾನು ಮಂಗಳವಾರ ಎಂದು ಹೇಳಿದಾಗ, ಮಂಗಳವಾರದ ಗುಂಪಿನಲ್ಲಿರುವ ಎಲ್ಲಾ ಮಕ್ಕಳೂ ಜಿಗಿಯಬೇಕು. ಆದ್ದರಿಂದ ಎಲ್ಲರೂ ನಾನು ಯಾವ ಗುಂಪಿನ ಹೆಸರನ್ನು ಕೂಗುತ್ತೇನೆಂದು ಗಮನವಿಟ್ಟು ಕೇಳಿ" ಎಂದು ಮಕ್ಕಳಿಗೆ ಹೀಗೆ ಸೂಚನೆ ಕೊಡುವುದು.
3. ಎಲ್ಲಾ ಮಕ್ಕಳೂ ತಮ್ಮ ಗುಂಪಿನ ಹೆಸರುಗಳನ್ನು ನೆನಪಿಟ್ಟುಕೊಂಡು ಆಟದಲ್ಲಿ ಭಾಗವಹಿಸುವಂತೆ ವಾರದ ಹೆಸರುಗಳನ್ನು ಒಂದೊಂದಾಗಿ ಕೂಗುತ್ತಾ ಚಟುವಟಿಕೆಯನ್ನು ಪ್ರಾರಂಭಿಸುವುದು.
4. ಅದೇ ರೀತಿ, "ನಾನು ನಿಮ್ಮ ಗುಂಪಿನ ಹೆಸರನ್ನು ಕೂಗಿದಾಗ, ಉದಾಹರಣೆಗೆ, ನಾನು ಮಂಗಳವಾರ ಎಂದು ಹೇಳಿದಾಗ, ಮಂಗಳವಾರದ ಗುಂಪಿನಲ್ಲಿರುವ ಎಲ್ಲಾ ಮಕ್ಕಳೂ ತರಗತಿಯ ಮಧ್ಯಕ್ಕೆ ಬಂದು ಮತ್ತೆ ತಮ್ಮ ಜಾಗಕ್ಕೆ ಹೋಗಬೇಕು. ಆದ್ದರಿಂದ ಎಲ್ಲರೂ ನಾನು ಯಾವ ಗುಂಪಿನ ಹೆಸರನ್ನು ಕೂಗುತ್ತೇನೆಂದು ಗಮನವಿಟ್ಟು ಕೇಳಿ" ಎಂದು ಮಕ್ಕಳಿಗೆ ಹೇಳುವುದು.
5. ವಾರದ ಹೆಸರುಗಳನ್ನು ಕ್ರಮಬದ್ಧವಾಗಿ ಕೂಗದೆ, ಗುಂಪುಗಳನ್ನು ಆಯ್ಕೆ ಮಾಡುವ ವೇಗದಲ್ಲಿ ಹೆಚ್ಚು ಕಡಿಮೆ ಮಾಡುತ್ತಾ, ಒಮ್ಮೆಗೆ ಒಂದಕ್ಕಿಂತ ಹೆಚ್ಚು ಗುಂಪುಗಳನ್ನು ಆಯ್ಕೆ ಮಾಡುತ್ತಾ ಚಟುವಟಿಕೆಯನ್ನು ಹೆಚ್ಚು ಸವಾಲಿನಿಂದ ಕೂಡಿದ್ದಾಗಿಯೂ, ಮೋಜಿನದ್ದಾಗಿಯೂ ಇರುವಂತೆ ಮಾಡುವುದು.

---

## ಚಟುವಟಿಕೆ 4

## ಮೇಲೆ ಹೇಳಿದ ಆಟದ ಇನ್ನೊಂದು ವಿಧ: ನಡೆ ಮತ್ತು ನಿಲ್ಲು

### ಸೂಚನೆಗಳು

1. ಮಕ್ಕಳಿಗೆ ತರಗತಿಯಲ್ಲಿ ಇಚ್ಛಾನುಸಾರ ನಡೆಯಲು ಹೇಳುವುದು. ಯಾವುದಾದರೂ ಸಂಗೀತ ನುಡಿಸುವುದು ಮತ್ತು ಈ ಸಂಗೀತ ಕೇಳುತ್ತಿರುವವರೆಗೆ ನಡೆಯಬೇಕು ಹಾಗೂ ಸಂಗೀತ ನಿಂತ ತಕ್ಷಣ ತಾವಿದ್ದಲ್ಲೇ ವಿಗ್ರಹದ ರೀತಿ ಸ್ತಬ್ಧವಾಗಿ ನಿಂತುಕೊಳ್ಳಬೇಕು ಎಂದು ಮಕ್ಕಳಿಗೆ ಹೇಳುವುದು.
2. ಆಟ ಪ್ರಾರಂಭಿಸುವುದಕ್ಕೆ ಮೊದಲು ಮಕ್ಕಳಿಗೆ ಈ ಕೆಳಗಿನ ಸೂಚನೆಗಳನ್ನು ಕೊಡುವುದು – ವೃತ್ತಾಕಾರದಲ್ಲಿ ನಡೆಯಬೇಡಿ. ತರಗತಿಯ ಎಲ್ಲಾ ಜಾಗಗಳಲ್ಲೂ ನಿಮ್ಮಿಷ್ಟದಂತೆ ನಡೆಯಿರಿ.
   - ಯಾರನ್ನೂ ಮುಟ್ಟಬೇಡಿ, ಹಿಡಿದುಕೊಳ್ಳಬೇಡಿ, ತಳ್ಳಬೇಡಿ ಮತ್ತು ಘಾಸಿಗೊಳಿಸಬೇಡಿ.
   - ನಡೆಯುತ್ತಿರಿ, ಸಂಗೀತ ನಿಂತಾಗ ನೀವು ಇದ್ದಲ್ಲೇ ಸ್ತಬ್ಧವಾಗಿ ನಿಲ್ಲಿ.
   - ಸಂಗೀತ ನಿಂತಾಗ ನಿಮ್ಮ ಸ್ನೇಹಿತರ ಅಥವಾ ಶಿಕ್ಷಕರ ಬಳಿ ಸರಿಯಬೇಡಿ. ನೀವು ಇದ್ದಲ್ಲಿಯೇ ನಿಂತುಕೊಳ್ಳಿ.
3. ಸಂಗೀತವು ನಿಂತಾಗ, ವಾರದ ಒಂದು ದಿನದ ಹೆಸರು ಕೂಗುವುದು. ಉದಾಹರಣೆಗೆ, ಸೋಮವಾರ. ಸೋಮವಾರದ ಗುಂಪಿನಲ್ಲಿರುವ ಎಲ್ಲಾ ಮಕ್ಕಳು ಚಪ್ಪಾಳೆ ತಟ್ಟಿರಿ. (ಈಗ ನಿಂತಲ್ಲೇ ಚಪ್ಪಾಳೆ ಹೊಡೆಯುವುದು, ಅವರು ತಮ್ಮ ಗುಂಪಿನ ಇತರ ಮಕ್ಕಳ ಬಳಿಗೆ ಹೋಗಿ ಗುಂಪು ಮಾಡಬೇಕಾಗಿಲ್ಲ)
4. ಮತ್ತೆ ಸಂಗೀತ ಪ್ರಾರಂಭಿಸಿದಾಗ ಮಕ್ಕಳು ಮನಃ ನಡೆಯಲು ಪ್ರಾರಂಭಿಸುವುದು. ವಾರದ ಎಲ್ಲಾ ದಿನಗಳ ಹೆಸರು ಕೂಗಿ ಎಲ್ಲರಿಗೂ ಅವಕಾಶ ಸಿಗುವವರೆಗೆ ಇದನ್ನು ಮನರಾವರ್ತಿಸುವುದು. ಸಂಗೀತ ನಿಲ್ಲಿಸಿ ಮಕ್ಕಳು ಸ್ತಬ್ಧವಾಗಿ ನಿಂತಾಗ ಒಂದಕ್ಕಿಂತ ಹೆಚ್ಚು ದಿನಗಳ ಹೆಸರುಗಳನ್ನು ಕೂಗುವ ಮೂಲಕ ಆಟವನ್ನು ಹೆಚ್ಚು ಸವಾಲಿನಿಂದ ಕೂಡಿರುವ ಹಾಗೆ ಮಾಡುವುದು.



Scanned with CamScanner

ಚಟುವಟಿಕೆ 1

## 10 ಸೆಕೆಂಡುಗಳ ಓಟ



### ಕಲಿಕಾ ಸಾಮಗ್ರಿಗಳು

ವಾಚ್ ಅಥವಾ ಸ್ಟಾಪ್ ವಾಚ್

### ಸೂಚನೆಗಳು

1. ಈ ಆಟವನ್ನು ಹೇಗೆ ಆಡಬೇಕೆಂದು ಸೂಚನೆಗಳನ್ನು ಕೊಡುವುದು. ನೆಲದ ಮೇಲೆ ಒಂದು ಗೆರೆ ಎಳೆಯುವುದು.
2. ಎಲ್ಲಾ ಮಕ್ಕಳನ್ನೂ ಸಾಲಾಗಿ ನಿಲ್ಲಲು ಹೇಳುವುದು. ಶಿಕ್ಷಕರು ಪ್ರಾರಂಭಿಸಿ ಎಂದು ಹೇಳಿದ ತಕ್ಷಣ ಅವರು ಓಡಲು ಪ್ರಾರಂಭಿಸಬೇಕು ಎಂದು ಹೇಳುವುದು.
3. ನೀವು 10 ಸೆಕೆಂಡುಗಳವರೆಗೆ ಎಣಿಸುತ್ತಾ ಹೋಗುವಿರಿ ಮತ್ತು ಎಣಿಕೆ ಮುಗಿಯುವ ತನಕ ಅವರು ಓಡಬೇಕೆಂದು ಹೇಳುವುದು.
4. ನಿಮ್ಮ ಎಣಿಕೆ ಮುಗಿದ ತಕ್ಷಣ ಅವರು ಓಡುವುದನ್ನು ನಿಲ್ಲಿಸಿ ಇದ್ದಲ್ಲೇ ನಿಲ್ಲಬೇಕು. ಹೆಚ್ಚು ದೂರ ಓಡಿದವರು ವಿಜಯಿಗಳಾಗುತ್ತಾರೆ.
5. ಇದೇ ರೀತಿ 15 ಸೆಕೆಂಡು, 20 ಸೆಕೆಂಡುಗಳಿಗೆ ಆಟವನ್ನು ಮುಂದುವರಿಸಿ.

---

ಚಟುವಟಿಕೆ 2

## ಚೆಂಡು ಹಿಡಿಯುವುದು

### ಕಲಿಕಾ ಸಾಮಗ್ರಿಗಳು

ಚೆಂಡು

### ಸೂಚನೆಗಳು

1. ಮಕ್ಕಳು ವೃತ್ತಾಕಾರದಲ್ಲಿ ನಿಲ್ಲಲು ಹೇಳುವುದು.
2. ಆಟವನ್ನು ಮೊದಲು ಆಡಿ ತೋರಿಸುವುದು.
3. ಚೆಂಡನ್ನು ಯಾವುದಾದರೊಂದು ಮಗುವಿಗೆ ಎಸೆದು "ಜನವರಿ" ಎಂದು ಕೂಗುವುದು.
4. ಚೆಂಡು ಹಿಡಿದಿರುವ ಮಗುವಿಗೆ ಅದನ್ನು ಇನ್ನೊಂದು ಮಗುವಿನ ಕಡೆಗೆ ಎಸೆದು "ಫೆಬ್ರವರಿ" ಎಂದು ಕೂಗಲು ಹೇಳುವುದು.
5. ಈ ರೀತಿ, ತಿಂಗಳುಗಳ ಹೆಸರುಗಳನ್ನು ಸರಿಯಾದ ಕ್ರಮದಲ್ಲಿ ಹೇಳುತ್ತಾ ಚೆಂಡನ್ನು ಇನ್ನೊಬ್ಬರ ಕಡೆಗೆ ಎಸೆಯಬೇಕೆಂದು ಮಕ್ಕಳಿಗೆ ಹೇಳುವುದು.
6. ತಿಂಗಳಿನ ಹೆಸರನ್ನು ತಪ್ಪಿಸಿಕೊಂಡರೆ ಅಥವಾ ತಪ್ಪು ಹೇಳಿದರೆ ಅವರು ಆಟದಿಂದ ಹೊರಗೆ. ಇದನ್ನು ವಾರದ ದಿನಗಳಿಗೂ ಕೂಡಾ ಮಾಡಬಹುದು.



Scanned with CamScanner

## ವಾರ, ತಿಂಗಳು ಮತ್ತು ವರ್ಷ

### ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

1. Fan yourself
2. Shade your eyes
3. Open your umbrella

1. Fan yourself
2. Shade your eyes
3. Open your umbrella

1. Fan yourself
2. Shade your eyes
3. Open your umbrella

1. Shiver in the cold
2. Wear your coat
3. Warm your hands

1. Shiver in the cold
2. Wear your coat
3. Warm your hands

1. Shiver in the cold
2. Wear your coat
3. Warm your hands


1. Fan yourself
2. Shade your eyes
3. Open your umbrella
4. Shiver in the cold
5. Wear your coat
6. Warm your hands

1. Open your umbrella
2. Fan yourself
3. Shade your eyes
4. Warm your hands
5. Shiver in the cold
6. Wear your coat

Say
gesture
model



Scanned with CamScanner



## ದಿನಗಳು, ತಿಂಗಳುಗಳು ಮತ್ತು ಋತುಗಳು

# ಹವಾಮಾನ ಮತ್ತು ಋತುಗಳು

Scanned with CamScanner

# ಕಲಿಕಾ ಫಲಿತಗಳು

## ಉಪ ವಿಷಯ 8.3: ಹವಾಮಾನ ಮತ್ತು ಋತುಗಳು

### 3–4 ವರ್ಷಗಳು

1. ತಾಪಮಾನದ (ಬಿಸಿ, ತಂಪು) ಪರಿಕಲ್ಪನೆಯನ್ನು ಮತ್ತು ಋತುಗಳೊಡನೆ ಅದರ ಸಂಬಂಧವನ್ನು ಅರಿತುಕೊಳ್ಳುವುದು
2. ಹವಾಮಾನ ಮತ್ತು ಋತುಗಳ ನಡುವಿನ ಸಂಬಂಧವನ್ನು ಅರಿತುಕೊಳ್ಳುವುದು ಮತ್ತು ಹವಾಮಾನವನ್ನು ನಿರ್ದಿಷ್ಟ
3. ಋತುಗಳೊಂದಿಗೆ ಹೊಂದಿಸುವುದು. ಹವಾಮಾನ ಮತ್ತು ಅದಕ್ಕೆ ಸೂಕ್ತವಾದ ಬಟ್ಟೆಗಳನ್ನು ತಿಳಿದುಕೊಳ್ಳುವುದು–ಸ್ವೆಟರ್‌ಗಳು, ರೈನ್‌ಕೋಟ್‌ಗಳು ಮತ್ತು ಛತ್ರಿಗಳು ಮತ್ತು ತಂಪಾಗಿರಿಸುವ ಬಟ್ಟೆಗಳು.

### 4–5 ವರ್ಷಗಳು

1. ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಕಾಲಗಳನ್ನು ವಿವರಿಸುವ ಗುಣಲಕ್ಷಣಗಳನ್ನು ಗುರುತಿಸುವುದು.
2. ಯಾವ ತಿಂಗಳುಗಳಲ್ಲಿ ಯಾವ ಋತುಗಳು ಬರುತ್ತವೆ ಎಂಬ ಸಂಬಂಧಗಳನ್ನು ಅರಿತುಕೊಳ್ಳುವುದು.
3. ವಿವಿಧ ಋತುಗಳಲ್ಲಿ ಆರೋಗ್ಯ ಮತ್ತು ಸ್ವಚ್ಛತೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ತಿಳಿದುಕೊಳ್ಳುವುದು.

### 5–6 ವರ್ಷಗಳು

1. ಋತುಗಳಿಗನುಗುಣವಾಗಿ ಸ್ವಾಭಾವಿಕ ವಿದ್ಯಮಾನಗಳನ್ನು ಹೊಂದಿಸಿಕೊಳ್ಳುವುದು– ಹಣ್ಣು, ಹೂವು ಮತ್ತು ಬೆಳೆಗಳು.
2. ಸ್ಥಳೀಯ ಚಟುವಟಿಕೆಗಳಾದ ಹಬ್ಬಗಳು ಮತ್ತು ಕೃಷಿ ಕೆಲಸಗಳು ಮತ್ತು ಬೇಸಿಗೆ ರಜೆಗಳನ್ನು ಆಯಾ ಋತುಗಳಿಗನುಗುಣವಾಗಿ ತಿಳಿದುಕೊಳ್ಳುವುದು.
3. ವಿವಿಧ ಋತುಗಳಲ್ಲಿ ಪ್ರಾಣಿಗಳು, ಗಿಡಗಳು ಮತ್ತು ಮನೆಗಳನ್ನು ರಕ್ಷಿಸುವುದನ್ನು ವಿವರಿಸುವುದು.

Scanned with CamScanner

ಉಪವಿಷಯ 8.3

# ಹವಾಮಾನ ಮತ್ತು ಋತುಗಳು



## ಕಲಿಕಾ ಉದ್ದೇಶಗಳು

ಈ ಅಧ್ಯಾಯದ ಕೊನೆಯಲ್ಲಿ ಮಕ್ಕಳು ಈ ಕೆಳಗಿನ ಸಾಮರ್ಥ್ಯಗಳನ್ನು ಗಳಿಸಿರುತ್ತಾರೆ –

- ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಕಾಲಗಳನ್ನು ವಿವರಿಸುವ ಗುಣಲಕ್ಷಣಗಳನ್ನು ಗುರುತಿಸುವುದು.
- ಯಾವ ತಿಂಗಳುಗಳಲ್ಲಿ ಯಾವ ಋತುಗಳು ಬರುತ್ತವೆ ಎಂಬ ಸಂಬಂಧಗಳನ್ನು ಅರಿತುಕೊಳ್ಳುವುದು.
- ವಿವಿಧ ಋತುಗಳಲ್ಲಿ ಆರೋಗ್ಯ ಮತ್ತು ಸ್ವಚ್ಛತೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ತಿಳಿದುಕೊಳ್ಳುವುದು.



Scanned with CamScanner

## ಸಂಭಾಷಣೆ 1

## ಬೇಸಿಗೆ ಕಾಲ






### ಕಲಿಕಾ ಫಲಿತಗಳು

ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.

- ತಾಪಮಾನ, ಅದಕ್ಕೆ ಸಂಬಂಧಿಸಿದ ಹವಾಮಾನ ಮತ್ತು ಋತುಗಳ ನಡುವಿನ ಸಂಬಂಧಗಳನ್ನು ತಿಳಿದುಕೊಳ್ಳುವುದು
- ಬೇಸಿಗೆ ಕಾಲದ ಲಕ್ಷಣಗಳನ್ನು ವಿವರಿಸುವುದು ಮತ್ತು ತಿಂಗಳುಗಳನ್ನು ಅದಕ್ಕೆ ಹೊಂದಿಸುವುದು.
- ಬೇಸಿಗೆಯಲ್ಲಿ ಆರೋಗ್ಯ ಮತ್ತು ಸ್ವಚ್ಛತೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳನ್ನು ತಿಳಿದುಕೊಳ್ಳುವುದು.

### ಕಲಿಕಾ ಸಾಮಗ್ರಿಗಳು

- ಹವಾಮಾನ ಪಟ್ಟಿಯ ಪೋಸ್ಟರ್ **P8.3.1:** ಹವಾಮಾನದ ಪಟ್ಟಿ (1ನೇ ತರಗತಿಯ ನಲಿ ಕಲಿ ತರಗತಿಯ ಚಾರ್ಟ್‌ನ ಆಧಾರದಲ್ಲಿ ತಯಾರಿಸಿದ ಮಾದರಿ)
- ವಿವಿಧ ಋತುಗಳ ಪೋಸ್ಟರ್‌ಗಳ ಸರಣಿ **P8.3.2-1.** ಬೇಸಿಗೆ ಕಾಲ

### ಸೂಚನೆಗಳು

ಬಿಸಿ ಮತ್ತು ತಂಪು ತಾಪಮಾನಗಳ ಪರಿಕಲ್ಪನೆಗಳನ್ನು ಪರಿಚಯಿಸಲು ಒಂದು ಸರಳ ಚಟುವಟಿಕೆಯಿಂದ ಪ್ರಾರಂಭಿಸಿ.

---

**ಚಟುವಟಿಕೆ 1**

## ಬಿಸಿಯೋ ತಂಪೋ?

### ಕಲಿಕಾ ಸಾಮಗ್ರಿಗಳು

ಬೇರೆ ಬೇರೆ ತಾಪಮಾನಗಳಿರುವ ನೀರು, ಸ್ಟೀಲ್/ಪ್ಲಾಸ್ಟಿಕ್ ಬಟ್ಟಲುಗಳು

### ಸೂಚನೆಗಳು

1. ಬೇರೆ ಬೇರೆ ತಾಪಮಾನಗಳಿರುವ ನೀರನ್ನು ಬೇರೆ ಬೇರೆ ಸ್ಟೀಲ್/ ಪ್ಲಾಸ್ಟಿಕ್ ಬಟ್ಟಲುಗಳಿಗೆ ಹಾಕುವುದು.
2. ಮಕ್ಕಳು ಮುಟ್ಟಿನೋಡಿ ಬಿಸಿಯಾದ ಮತ್ತು ತಂಪಾದ ನೀರನ್ನು ಹೋಲಿಸಲು ಬಿಡುವುದು.
3. ಈ ಬಟ್ಟಲುಗಳನ್ನು ತುಂಬಾ ಬಿಸಿ, ಬಿಸಿ ಮತ್ತು ತಂಪಾದ ನೀರು– ಈ ಅನುಕ್ರಮದಲ್ಲಿ ಜೋಡಿಸಲು ಹೇಳುವುದು.

ಈಗ, ಈ ಕೆಳಗಿನ ಹಂತಗಳ ಪ್ರಕಾರ ಸಂಭಾಷಣೆಯನ್ನು ಮುಂದುವರಿಸುವುದು.



Scanned with CamScanner

**ಹಂತ 1: ತಾಪಮಾನ, ಸೂರ್ಯ ಮತ್ತು ಹವಾಮಾನಗಳ ನಡುವಿನ ಸಂಬಂಧಗಳನ್ನು ಪುನರಾವರ್ತಿಸುವುದು**

1. ಕಳೆದ ತಿಂಗಳು ಕಲಿಸಿದ ವಿಷಯನ್ನು ಮತ್ತೊಮ್ಮೆ ನೋಡುವುದು– ಗಾಳಿ ಮತ್ತು ನೀರಿನ ಗುಣಗಳನ್ನು ಅವರು ನೆನಪಿಸಿಕೊಳ್ಳಬಲ್ಲರೇ? ಗಾಳಿ ಅಥವಾ ನೀರನ್ನು ಬಿಸಿ ಇರುವ ಅಥವಾ ತಂಪಾದ ವಸ್ತುವಿನ ಹತ್ತಿರ ಇಟ್ಟಾಗ ಏನಾಗುತ್ತದೆ ಎಂದು ನೆನಪಿದೆಯೇ? ಗಾಳಿ ಮತ್ತು ನೀರು ತಮ್ಮ ಸುತ್ತಲಿನ ತಾಪಮಾನವನ್ನು ತೆಗೆದುಕೊಳ್ಳುತ್ತವೆ ಎಂದು ಕಲಿತಿರುವುದನ್ನು ಪುನರುಚ್ಚರಿಸುವುದು.
2. ಗಾಳಿ ಮತ್ತು ನೀರು ಹೇಗೆ ಬಿಸಿಯಾಗುತ್ತವೆ? ಕೆಲವು ಉದಾಹರಣೆಗಳನ್ನು ಕೊಡಲು ಮಕ್ಕಳಿಗೆ ಅವಕಾಶ ಕೊಡುವುದು – ಬೆಂಕಿಯಿಂದ ಬಿಸಿ ಮಾಡುವುದು, ಬಿಸಿಲಿನಲ್ಲಿಡುವುದು, ಇತ್ಯಾದಿ. ಸೂರ್ಯನು ತುಂಬಾ ಸುಡುತ್ತಿದ್ದಾಗ (ತುಂಬಾ ಬಿಸಿಲಿದ್ದಾಗ) ಏನಾಗುತ್ತದೆ? ಗಾಳಿ ಮತ್ತು ನೀರು ಬಿಸಿಯಾಗುತ್ತವೆ.
3. ಮಕ್ಕಳನ್ನು ಹೊರಗೆ ಕರೆದುಕೊಂಡು ಹೋಗಿ ಅವರಿಗೆ ಹೇಗನಿಸುತ್ತದೆ ಎಂದು ಕೇಳುವುದು. ಹವಾಮಾನವು ಬಿಸಿಯಾಗಿರಬಹುದು ಮತ್ತು ಮಕ್ಕಳು ಅದನ್ನು ವಿವರಿಸಲಿ. ಯಾವಾಗಲೂ ಇದು ಹೀಗೆಯೇ ಇರುತ್ತದೆಯೇ? ಬೆಳಗಿನ ಹೊತ್ತು ಇದು ಹೇಗಿರುತ್ತದೆ? ಬೆಳಗಿನ ಹವಾಮಾನ ಇಷ್ಟು ಬಿಸಿಯಾಗಿರುವುದಿಲ್ಲ. ಬೆಳಗಿನ ಜಾವದಿಂದ ಈ ಹೊತ್ತಿನವರೆಗೆ ಏನಾಗಿರಬಹುದೆಂದು ಅವರು ಯೋಚಿಸುತ್ತಾರೆ? ಅದು ಏಕೆ ಬಿಸಿಯಾಯಿತು? ಏನು ಬದಲಾವಣೆ ಆಯಿತು? ಈ ಕಾರಣಗಳನ್ನು ವಿವರಿಸಲು ಪ್ರಯತ್ನಿಸಲು ಮಕ್ಕಳಿಗೆ ಅವಕಾಶ ಕೊಡುವುದು.
4. ಹಗಲು ಹೊತ್ತಿನಲ್ಲಿ ಸೂರ್ಯನ ತಾಪವು ಹೆಚ್ಚುತ್ತದೆ ಮತ್ತು ಗಾಳಿ ಮತ್ತು ನೀರೂ ಕೂಡ ಬಿಸಿಯಾಗುತ್ತದೆ. ಮಧ್ಯಾಹ್ನದ ಹೊತ್ತಿಗೆ ಸೂರ್ಯನ ತಾಪವು ಅತ್ಯಂತ ಹೆಚ್ಚಾಗಿರುತ್ತದೆ ಮತ್ತು ನಮ್ಮ ಸುತ್ತಲಿನ ಗಾಳಿಯೂ ತುಂಬಾ ಬಿಸಿಯಾಗಿರುತ್ತದೆ. ಸಂಜೆಯ ಹೊತ್ತಿಗೆ ಸೂರ್ಯನು ಕೆಳಗಿಳಿಯುತ್ತಾನೆ ಮತ್ತು ತಾಪವು ಕಡಿಮೆಯಾಗುತ್ತದೆ ಮತ್ತು ರಾತ್ರಿಯಲ್ಲಿ ಸೂರ್ಯನು ಮುಳುಗಿದಾಗ ತಂಪಾಗುತ್ತದೆ ಎಂದು ವಿವರಿಸುವುದು.

**ಹಂತ 2: ತಾಪಮಾನ, ಹವಾಮಾನಗಳ ಮತ್ತು ಋತುಗಳ ನಡುವಿನ ಸಂಬಂಧ**

1. ವಾರಗಳಲ್ಲಿ ತಾಪಮಾನವನ್ನು ನಾವು ಗಮನಿಸಬಹುದೇ? ಅದು ನಿನ್ನೆ ಹೇಗಿತ್ತು? ಕಳೆದ ವಾರ ಹೇಗಿತ್ತು? ಇವತ್ತು ಹೇಗಿದೆ? ನಾಳೆ ಹೇಗಿರಬಹುದು?
2. "ಹವಾಮಾನ ಟ್ರ್ಯಾಕರ್" (weather tracker) ಚಾರ್ಟ್‌ನ್ನು ಶಾಲೆಯ ನಲಿ ಕಲಿ ತರಗತಿಯಿಂದ ಪಡೆದುಕೊಳ್ಳುವುದು. ಹವಾಮಾನದ ಚಾರ್ಟ್‌ನ್ನು ಮಕ್ಕಳಿಗೆ ತೋರಿಸಿ ಅವರು ಇಡೀ ತಿಂಗಳಿನ ಹವಾಮಾನವನ್ನು ನೋಡಲು ಬಿಡುವುದು. ಹೆಚ್ಚಿನ ದಿನಗಳಲ್ಲಿ ಸೂರ್ಯನು ಕಾಣಿಸುತ್ತಿರುವನೇ? ಮಳೆ ಬರುತ್ತಿತ್ತೇ?
3. "ಹವಾಮಾನ ಟ್ರ್ಯಾಕರ್" (weather tracker) ಚಾರ್ಟ್‌ನ್ನು ಉಪಯೋಗಿಸುತ್ತಾ, ತಾಪಮಾನಗಳು, ಮಳೆ ಮತ್ತು ಬಿಸಿಲು ಒಂದೇ ದಿನದಲ್ಲಿ ಬದಲಾಗುವುದಿಲ್ಲ. ನಾವು ಅನುಭವಿಸುವ ಬಿಸಿ, ಚಳಿ/ ತಂಪು, ಮಳೆಗಳು ಕೆಲವು ದಿನ, ವಾರ ಅಥವಾ ತಿಂಗಳುಗಳ ಕಾಲ ಮುಂದುವರಿಯುತ್ತವೆ. ತಾಪ ಅಥವಾ ಮಳೆ ಅಥವಾ ಮೋಡದ ದಿನವನ್ನು ಹವಾಮಾನ ಮತ್ತು ಒಂದು ಅವಧಿಯವರೆಗೆ ಬಿಸಿ, ತಂಪು ಅಥವಾ ಮಳೆ ಇದ್ದಾಗ ಅದನ್ನು ಋತು ಎನ್ನುತ್ತಾರೆ ಎಂದು ವಿವರಿಸುವುದು.
4. ಬೇಸಿಗೆ ಋತುವಿನ ನಂತರ ಮಳೆ ಏಕೆ ಬರುತ್ತದೆ ಎನ್ನುತ್ತಾ ಕಳೆದ ತಿಂಗಳು ಕಲಿತ ನೀರಿನ ಚಕ್ರವನ್ನು ಪುನರಾವರ್ತಿಸುವುದು.
5. ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲ ಎಂಬ ಮೂರು ಋತುಗಳಿವೆ ಎಂದು ಹೇಳುವುದು.

**ಹಂತ 3: ಬೇಸಿಗೆ ಕಾಲ**

1. ಪೋಸ್ಟರ್ **P8.3.2-1** ಅನ್ನು ತಂದು ಮಕ್ಕಳಿಗೆ ಅದನ್ನು ವಿವರಿಸಲು ಹೇಳುವುದು. ಚಿತ್ರದಲ್ಲಿನ ತಾಪಮಾನವನ್ನು ಅವರು ಊಹಿಸಬಹುದೇ? ಅದು ಬಿಸಿಯೇ, ಚಳಿಯೇ, ಅಥವಾ ಮಳೆಯೇ? ಅವರ ಏಕೆ ಹಾಗೆ ಯೋಚಿಸುತ್ತಾರೆ? ಮಕ್ಕಳ ಗುಂಪಿನ ಸಮೀಪದಲ್ಲಿ ನಡೆದಾಡುತ್ತಾ ಅದು ಬೇಸಿಗೆಯೆಂದು ಹೇಳಲು ಕಾರಣ ಕೊಡಿ ಎಂದು ಮಕ್ಕಳನ್ನು ಕೇಳುತ್ತಾ ಹೋಗುವುದು. ಮಕ್ಕಳು ಉತ್ತರ ನೀಡಲಿ. ಅದು ಬೇಸಿಗೆಯೆಂದು ಭಾವಿಸಲು ಚಿತ್ರದಲ್ಲಿ ಏನಿದೆ? ಮಕ್ಕಳು ಚಿತ್ರದಲ್ಲಿ ಕಾಣುತ್ತಿರುವುದೆಲ್ಲವನ್ನು ಸುಮ್ಮನೆ ಹೇಳುತ್ತಿರುವುದಲ್ಲ, ಬದಲಾಗಿ ಅವರು ಹವಾಮಾನ ಮತ್ತು ಋತುಗಳ ಸಂಬಂಧವನ್ನು ಅರ್ಥಮಾಡಿಕೊಂಡಿದ್ದಾರೆಂದು ಖಚಿತಪಡಿಸಿಕೊಳ್ಳುವುದು.



Scanned with CamScanner

## ಸಂಭಾಷಣೆ 1

## ಬೇಸಿಗೆ ಕಾಲ



2. ಕೆಲವು ಚಿತ್ರಗಳಿಗೆ ಮಕ್ಕಳು ಹವಾಮಾನಕ್ಕೆ ಹೋಲಿಕೆ ಮಾಡಿಕೊಂಡು ವಿವರಣೆ ನೀಡಿದ ನಂತರದಲ್ಲಿ ನೀಡಿದ ಉತ್ತರಗಳನ್ನು ಸಂಕ್ಷಿಪ್ತಗೊಳಿಸಿ ಕಾಲದ ಲಕ್ಷಣಗಳನ್ನು ಮಕ್ಕಳಿಗೆ ಹೇಳಿ.
3. ಈಗ ಕೆಲವು ಲಕ್ಷಣಗಳನ್ನು ತೋರಿಸಿ ಅವುಗಳಲ್ಲಿ ಏನಿವೆ ಎಂದು ವಿವರಿಸಲು ಮಕ್ಕಳಿಗೆ ಹೇಳುವುದು. ಅವುಗಳನ್ನು ಗಮನಿಸಿ ಚರ್ಚಿಸಲು ಹೇಳುವುದು
   - ಹವಾಮಾನ ಮತ್ತು ಅದರ ಅನುಭವ
   - ಏನು ತಿನ್ನುತ್ತಿದ್ದಾರೆ
   - ಧರಿಸಿದ ಉಡುಪುಗಳು
   - ಮಕ್ಕಳು ಆಡುತ್ತಿರುವ ಆಟಗಳು
4. ಚಿತ್ರವನ್ನು ನೋಡುತ್ತಾ ಮಕ್ಕಳು ಇವುಗಳನ್ನು ವಿವರಿಸುವುದು.

ಸಂಭಾಷಣೆಯ ಕೊನೆಯಲ್ಲಿ ಹವಾಮಾನ, ಆಹಾರ, ಉಡುಪು ಮತ್ತು ಬೇಸಿಗೆಯಲ್ಲಿ ಮಕ್ಕಳು ಆಡುವ ಆಟಗಳು, ಎಲ್ಲದರ ಸಾರಾಂಶ ಕೊಡುವುದು. ಗಮನಿಸಿ:

ಮಕ್ಕಳಿಗೆ ಉತ್ತರ ಹೇಳಲು ಸಾಧ್ಯವಾಗದಿದ್ದರೆ, ಚರ್ಚೆಯನ್ನು ಉತ್ತೇಜಿಸಲು ಈ ಕೆಳಗಿನ ಪ್ರಶ್ನೆಗಳನ್ನು ಉಪಯೋಗಿಸುವುದು.


- ಚಿತ್ರದಲ್ಲಿ ಆಕಾಶ ಕಾಣಿಸುತ್ತಿದೆಯೇ? ಅದು ಯಾವ ರೀತಿ ಕಾಣಿಸುತ್ತಿದೆಯೇ? ಬಿಸಿಲಿನಿಂದ ಕೂಡಿ ಪ್ರಕಾಶಮಾನವಾಗಿದೆಯೇ ಅಥವಾ ಕಪ್ಪಾದ ಮತ್ತು ಮೋಡಗಳಿಂದ ಕೂಡಿದೆಯೇ?
- ಬಿಸಿಲಿನಿಂದ ಕೂಡಿ ಪ್ರಕಾಶಮಾನವಾಗಿದ್ದರೆ ಹೇಗನಿಸುತ್ತದೆ? ನಿಮಗೆ ಸೆಖೆಯಾಗುತ್ತದೆಯೇ ಅಥವಾ ಚಳಿಯಾಗುತ್ತದೆಯೇ? ಬಿಸಿ, ತೇವ, ಬೆವರುವ– ಮುಂತಾದ ಪದಗಳ ಮೂಲಕ ಉತ್ತೇಜಿಸುವುದು. ವರ್ಷದ ಕೆಲವು ತಿಂಗಳುಗಳಲ್ಲಿ ನಮಗೆ ತುಂಬಾ ಸೆಖೆಯೆನಿಸುತ್ತದೆ. ಇದು ಫೆಬ್ರವರಿಯಿಂದ ಮೇ ತಿಂಗಳವರೆಗೆ (ಈ ತಿಂಗಳುಗಳನ್ನು ಕ್ರಮವಾಗಿ ಪಟ್ಟಿಮಾಡಿ).
- ಹೆಚ್ಚು ದಿನಗಳ ಕಾಲ ನಿಮಗೆ ಯಾಗ ರಜೆ ಸಿಗುತ್ತದೆ? ಬೇಸಿಗೆ ರಜೆಯಲ್ಲಿ ನೀವು ಏನು ಮಾಡಿತ್ತೀರಿ?
- ನಿಮ್ಮ ಊರಿನಲ್ಲಿ ಜಾತ್ರೆಗೆ ಹೋಗಿದ್ದೀರಾ? ಅಲ್ಲಿ ನೀವು ಏನು ಮಾಡುತ್ತೀರಿ? ಈ ಜಾತ್ರೆಗಳು ಯಾವಾಗ ನಡೆಯುತ್ತವೆ?
- ಬೇಸಿಗೆಯಲ್ಲಿ ಉಣ್ಣೆಯ ಸ್ವೆಟರ್ ಧರಿಸಲು ಸಾಧ್ಯವೇ? ಏಕೆ ಸಾಧ್ಯವಿಲ್ಲ? ಬೇಸಿಗೆಯಲ್ಲಿ ಯಾವ ಉಡುಪು/ ಬಟ್ಟೆ ಧರಿಸುತ್ತೀರಿ?
- ಮಾರಾಟಗಾರರು ಏನು ಮಾರುತ್ತಿದ್ದಾರೆ? ಮಾವಿನ ಹಣ್ಣು ವರ್ಷವಿಡೀ ಸಿಗುತ್ತದೆಯೇ? ಬೇಸಿಗೆಯಲ್ಲಿ ಬೇರೆ ಯಾವ ಹಣ್ಣುಗಳು ಸಿಗುತ್ತವೆ? ಬೇಸಿಗೆಯಲ್ಲಿ ಸಿಗುವ ಹಣ್ಣುಗಳು ಮತ್ತು ಇತರ ಆಹಾರ ಪದಾರ್ಥಗಳ ಪಟ್ಟಿ ಮಾಡುವುದು.
- ಮಕ್ಕಳು ಏನು ಮಾಡುತ್ತಿದ್ದಾರೆ? ಅವರು ನೀರಿನಲ್ಲಿ ಆಟವಾಡುತ್ತಿದ್ದಾರೆ–ಏಕೆ? –ಅವರಿಗೆ ಸೆಖೆಯಾಗುತ್ತಿದೆ ಮತ್ತು ಅವರು ತಂಪಾಗಿಸಿಕೊಳ್ಳಲು ಬಯಸುತ್ತಾರೆ.
- ತುಂಬಾ ಬಿಸಿಲಿರುವಾಗ ನೀವು ಹೊರಗೆ ಆಟ ಆಡಲು ಇಷ್ಟಪಡುವಿರಾ ಅಥವಾ ಒಳಗೆ ಆಟ ಆಡಲು ಇಷ್ಟಪಡುವಿರಾ?
- ಬೇಸಿಗೆಯಲ್ಲಿ ನೀವು ಯಾವ ರೀತಿಯ ಒಳಾಂಗಣ ಆಟಗಳನ್ನು ಆಡುತ್ತೀರಿ?
- ಬಿಸಿಲಿನಲ್ಲಿ ತುಂಬಾ ಹೊತ್ತು ಆಟವಾಡಿದರೆ ನಿಮಗೆ ಹೇಗನಿಸಬಹುದು? ಸೆಖೆಯಾದಾಗ ಆರಾಮವೆನಿಸಲು ನೀವು ಏನೇನು ಮಾಡುವಿರಿ?
- ನಿಮಗೆ ಸೆಖೆಯಾದಾಗ ಮತ್ತು ಬೆವರುವಂತಾದಾಗ ಏನು ಕುಡಿಯುವಿರಿ? ಬೇಸಿಗೆಯಲ್ಲಿ ತಂಪಾಗಿಸಲು ನಾವು ಯಾವ ರೀತಿಯ ಜ್ಯೂಸ್ ಅಥವಾ ದ್ರವಗಳನ್ನು ಕುಡಿಯುತ್ತೇವೆ? ನಿಮಗೆ ಐಸ್‌ಕ್ರೀಮ್ ಮತ್ತು ಎಳನೀರು ಇಷ್ಟವೇ? ಅವುಗಳನ್ನು ಯಾವಾಗ ತಿನ್ನುತ್ತೇವೆ? ಬೇಸಿಗೆಯಲ್ಲಿ ನೀವು ಇನ್ನೇನನ್ನು ತಿನ್ನುವಿರಿ? ಬೇಸಿಗೆಯಲ್ಲಿ ನಾವು ದೇಹದಲ್ಲಿ ನೀರಿನ ಅಂಶವನ್ನು ಕಾಪಾಡಿಕೊಳ್ಳಬೇಕಾದುದು ಅತಿ ಅವಶ್ಯಕ ಎಂದು ಮಕ್ಕಳಿಗೆ ಹೇಳುವುದು. ತಂಪು ಪಾನೀಯ ಮತ್ತು ಕೋಲಾಗಳಿಗಿಂತ ಹಣ್ಣಿನ ರಸ, ಎಳನೀರು ಕುಡಿಯುವುದರ ಬಗ್ಗೆ ಅವರ ಜೊತೆ ಮಾತನಾಡುವುದು.
- ಬೇಸಿಗೆಯಲ್ಲಿನ ತಮ್ಮ ಅನುಭವಗಳ ಬಗ್ಗೆ ಮಾತಾಡಲು ಮಕ್ಕಳನ್ನು ಪ್ರೋತ್ಸಾಹಿಸುವುದು.



Scanned with CamScanner

## ಸಂಭಾಷಣೆ 2

## ಮಳೆಗಾಲ




### ಕಲಿಕಾ ಫಲಿತಗಳು

ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.

- ಮಳೆಗಾಲದ ಲಕ್ಷಣಗಳನ್ನು ತಿಳಿದುಕೊಳ್ಳುವುದು ಮತ್ತು ಮಳೆಗಾಲದ ತಿಂಗಳುಗಳೊಡನೆ ಹೊಂದಿಸುವುದು- ಜೂನ್‌ನಿಂದ ಸೆಪ್ಟೆಂಬರ್‌ವರೆಗೆ.
- ಮಳೆಗಾಲದಲ್ಲಿ ಆರೋಗ್ಯ ಮತ್ತು ಸ್ವಚ್ಛತೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳನ್ನು ತಿಳಿದುಕೊಳ್ಳುವುದು.

### ಕಲಿಕಾ ಸಾಮಗ್ರಿಗಳು

ವಿವಿಧ ಋತುಗಳ ಪೋಸ್ಟರ್‌ಗಳ ಸರಣಿ **P8.3.2–2**. ಮಳೆಗಾಲ

### ಸೂಚನೆಗಳು

1. ಪೋಸ್ಟರ್ **P8.3.2–2** ಅನ್ನು ತಂದು ಮಕ್ಕಳಿಗೆ ಅದನ್ನು ವಿವರಿಸಲು ಹೇಳುವುದು.
2. ಚಿತ್ರದಲ್ಲಿನ ಋತುವನ್ನು ಅವರು ಊಹಿಸಬಹುದೇ? ಅದು ಬಿಸಿಯೇ, ಚಳಿಯೇ, ಅಥವಾ ಮಳೆಯೇ? ಅವರ ಏಕೆ ಹಾಗೆ ಯೋಚಿಸುತ್ತಾರೆ? ಗುಂಪಿನ ಸುತ್ತಲೂ ಸುತ್ತುತ್ತಾ ಅದಕ್ಕೆ ಕಾರಣ ಕೊಡಿ ಎಂದು ಮಕ್ಕಳನ್ನು ಕೇಳುವುದು. ಮಕ್ಕಳು ಉತ್ತರ ಸೂಚಿಸಲಿ. ಅದು ಮಳೆಗಾಲವೆಂದು ಭಾವಿಸಲು ಚಿತ್ರದಲ್ಲಿ ಏನಿದೆ? ಮಕ್ಕಳು ಚಿತ್ರದಲ್ಲಿ ಕಾಣುತ್ತಿರುವುದೆಲ್ಲವನ್ನು ಸುಮ್ಮನೆ ಹೇಳುತ್ತಿರುವುದಲ್ಲ, ಬದಲಾಗಿ ಅವರು ಹವಾಮಾನ ಮತ್ತು ಋತುಗಳ ಸಂಬಂಧವನ್ನು ಅರ್ಥಮಾಡಿಕೊಂಡಿದ್ದಾರೆಂದು ಖಚಿತಪಡಿಸಿಕೊಳ್ಳುವುದು.
3. ಕೆಲವು ಚಿತ್ರಗಳಿಗೆ ಮಕ್ಕಳು ಹವಾಮಾನಕ್ಕೆ ಹೋಲಿಕೆ ಮಾಡಿಕೊಂಡು ವಿವರಣೆ ನೀಡಿದ ನಂತರದಲ್ಲಿ ನೀಡಿದ ಉತ್ತರಗಳನ್ನು ಸಂಕ್ಷಿಪ್ತಗೊಳಿಸಿ ಕಾಲದ ಲಕ್ಷಣಗಳನ್ನು ಮಕ್ಕಳಿಗೆ ಹೇಳಿ.
4. ಈಗ ಕೆಲವು ಲಕ್ಷಣಗಳನ್ನು ತೋರಿಸಿ ಅವುಗಳಲ್ಲಿ ಏನಿವೆ ಎಂದು ವಿವರಿಸಲು ಮಕ್ಕಳಿಗೆ ಹೇಳುವುದು. ಅವುಗಳನ್ನು ಗಮನಿಸಿ ಚರ್ಚಿಸಲು ಹೇಳುವುದು
   - ಹವಾಮಾನ ಮತ್ತು ಅದರ ಅನುಭವ
   - ಏನು ತಿನ್ನುತ್ತಿದ್ದಾರೆ
   - ಧರಿಸಿದ ಉಡುಪುಗಳು
   - ಮಕ್ಕಳು ಆಡುತ್ತಿರುವ ಆಟಗಳು
5. ಚಿತ್ರವನ್ನು ನೋಡುತ್ತಾ ಮಕ್ಕಳು ಇವುಗಳನ್ನು ವಿವರಿಸುವುದು.
6. ಸಂಭಾಷಣೆಯ ಕೊನೆಯಲ್ಲಿ ಹವಾಮಾನ, ಆಹಾರ, ಉಡುಪು ಮತ್ತು ಮಳೆಗಾಲದಲ್ಲಿ ಮಕ್ಕಳು ಆಡುವ ಆಟಗಳು, ಎಲ್ಲದರ ಸಾರಾಂಶ ಕೊಡುವುದು.
7. ಚರ್ಚೆಯನ್ನು ಮುಂದುವರಿಸಲು ಈ ಕೆಳಗಿನ ಪ್ರಶ್ನೆಗಳನ್ನು ಉಪಯೋಗಿಸಬಹುದು. ಆದರೆ ವಿವರವಾದ ಚರ್ಚೆಯನ್ನು ಪ್ರಾರಂಭಿಸುವ ಮೊದಲು ಚಿತ್ರವನ್ನು ಸರಿಯಾಗಿ ಗಮನಿಸಿ ವ್ಯಾಖ್ಯಾನಿಸಲು ಮಕ್ಕಳಿಗೆ ಅವಕಾಶ ಕೊಡುವುದು.
   - ಚಿತ್ರದಲ್ಲಿ ಆಕಾಶ ಕಾಣಿಸುತ್ತಿದೆಯೇ? ಅದು ಯಾವ ರೀತಿ ಕಾಣಿಸುತ್ತಿದೆಯೇ? ಬಿಸಿಲಿನಿಂದ ಕೂಡಿ ಪ್ರಕಾಶಮಾನವಾಗಿದೆಯೇ ಅಥವಾ ಕಪ್ಪಾದ ಮತ್ತು ಮೋಡಗಳಿಂದ ಕೂಡಿದೆಯೇ?
   - ಜನರು ಏನು ಹಿಡಿದುಕೊಂಡಿದ್ದಾರೆ? ಏಕೆ ಹಿಡಿದುಕೊಂಡಿದ್ದಾರೆ? ನೀವು ಛತ್ರಿ ಉಪಯೋಗಿಸಿದ್ದೀರಾ?
8. ಮಳೆಯು ಯಾವಾಗಲೂ ಕಾಣಿಸಿಗುತ್ತದೆಯೇ? ಮಳೆ ಯಾವಾಗ ಬರುತ್ತದೆ? ಮುಂಗಾರು ಋತುವನ್ನು ಪರಿಚಯಿಸುವುದು ಮತ್ತು ವರ್ಷದ ಕೆಲವು ತಿಂಗಳುಗಳಲ್ಲಿ – ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆ ಬರುತ್ತದೆ ಎಂದು ಹೇಳುವುದು (ತಿಂಗಳುಗಳನ್ನು ಅನುಕ್ರಮವಾಗಿ ಹೇಳಲು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವುದು)



Scanned with CamScanner

ಸಂಭಾಷಣೆ 2

## ಮಳೆಗಾಲ



- ನೀವು ಎಂದಾದರೂ ಮಳೆಯಲ್ಲಿ ನೆನೆದಿದ್ದೀರಾ? ನಿಮಗೆ ಹೇಗನಿಸಿತ್ತು? ನಿಮಗೆ ಖುಷಿಯಾಗಿತ್ತೇ ಅಥವಾ ಅತ್ತಿದ್ದೀರಾ? ಮಳೆಯಲ್ಲಿ ನೆನೆದ ಮೇಲೆ ಏನು ಮಾಡಿದಿರಿ?
- ಮಳೆ ಬರುವಾಗ ಯಾವ ಆಟ ಆಡುವಿರಿ? ನೀವು ಹೊರಗೆ ಆಡುತ್ತೀರಾ ಅಥವಾ ಒಳಗೆ ಆಡುತ್ತೀರಾ? ಇಲ್ಲಿ ಮಕ್ಕಳು ಆಟವಾಡುತ್ತಿರುವುದು ಕಾಣಿಸುತ್ತಿದೆಯೇ? ಅವರು ಯಾವುದರಲ್ಲಿ ಆಟವಾಡುತ್ತಿದ್ದಾರೆ? ನೀವು ಎಂದಾದರೂ ಅದನ್ನು ಮಾಡಿದ್ದೀರಾ?
- ಮಳೆಯಿಂದ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಏನನ್ನು ಉಪಯೋಗಿಸುತ್ತೇವೆ? ಮಳೆಯಲ್ಲಿ ಹೊರಗೆ ಹೋಗುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಮಕ್ಕಳೊಡನೆ ಮಾತನಾಡುವುದು. ಅವರು ಮಳೆಯಲ್ಲಿ ಹೊರಗೆ ಹೋಗುವಾಗ ಯಾವಾಗಲೂ ಛತ್ರಿ ಮತ್ತು ರೈನ್‌ಕೋಟ್‌ಗಳನ್ನು ಉಪಯೋಗಿಸಬೇಕೆಂದು ಹೇಳುವುದು. ಮುಂಗಾರು ಋತುವಿನಲ್ಲಿ ಸೊಳ್ಳೆಗಳಿರುತ್ತವೆ. ಆದ್ದರಿಂದ ಅವರು ಸೊಳ್ಳೆಪರದೆ ಮತ್ತು ಸೊಳ್ಳೆ ನಿಯಂತ್ರಕಗಳನ್ನು ಮನೆಯಲ್ಲಿ ಉಪಯೋಗಿಸಬೇಕು ಎಂದು ಹೇಳುವುದು.
- ನೀವು ಮಳೆಯಲ್ಲಿ ನೆನೆದು ಒದ್ದೆಯಾದರೆ ಏನಾಗಬಹುದು?- ಮಳೆಯಲ್ಲಿ ಆಟವಾಡುವುದು ಅಪಾಯಕಾರಿ ಮತ್ತು ಅದರಿಂದ ಅವರಿಗೆ ಅನಾರೋಗ್ಯ ಉಂಟಾಗಬಹುದು ಎಂದು ಹೇಳುವುದು. ನಿಮಗೆ ಅನಾರೋಗ್ಯವಾದರೆ ನಿಮ್ಮ ತಾಯಿ/ತಂದೆ ನಿಮ್ಮನ್ನು ಹೇಗೆ ನೋಡಿಕೊಳ್ಳುವರು?
- ಇಲ್ಲಿರುವ ರಸ್ತೆಗಳು ಕಾಣಿಸುತ್ತಿವೆಯೇ? ಅವು ಹೇಗೆ ಕಾಣಿಸುತ್ತವೆ? ಅವುಗಳು ಒಣಗಿವೆಯೇ ಅಥವಾ ಒದ್ದೆಯಾಗಿವೆಯೇ? ಮಳೆ ಬರುವಾಗ ರಸ್ತೆಯಲ್ಲಿ ನಡೆಯುವಾಗ ಏಕೆ ಜಾಗರೂಕರಾಗಿರಬೇಕು? ಅವರು ಕೆಲವು ಉತ್ತರಗಳನ್ನು ಕೊಡಲಿ. ರಸ್ತೆಗಳು ಜಾರುತ್ತಿರಬಹುದು ಮತ್ತು ಅಲ್ಲಿ ನೀರಿನಿಂದ ತುಂಬಿದ ಗುಂಡಿಗಳಿರಬಹುದು, ಆದ್ದರಿಂದ ಮಳೆ ಬರುವಾಗ ರಸ್ತೆಯಲ್ಲಿ ಓಡಾಡುವಾಗ ಜಾಗರೂಕರಾಗಿರಬೇಕು ಎಂದು ಹೇಳುತ್ತಾ ಉಪಸಂಹಾರ ಮಾಡುವುದು.
- ಇಲ್ಲಿ ಕಾಮನಬಿಲ್ಲು ಕಾಣಿಸುತ್ತಿದೆಯೇ? ಅದರಲ್ಲಿ ಎಷ್ಟು ಬಣ್ಣಗಳಿವೆ? ಅದರಲ್ಲಿ ಎಷ್ಟು ಬಣ್ಣಗಳಿವೆ? ಅದು ಪ್ರತಿದಿನವೂ ಕಾಣಿಸುತ್ತದೆಯೇ? ಅದು ಯಾವಾಗ ಕಾಣಿಸುತ್ತದೆ?
- ಕಾಮನಬಿಲ್ಲಿನ ಹಾಡು ಹಾಡುವುದು.
- ಮಳೆಗಾಲದ ಅವರ ಅನುಭವಗಳನ್ನು ವಿವರಿಸಲು ಪ್ರೋತ್ಸಾಹಿಸುವುದು.

ಕಾಮನ ಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ

ಬಣ್ಣಗಳೇಳನು ತೋರಣ ಮಾಡಿದೆ
ಕಂದನ ಕಣ್ಣಿಗೆ ಚಂದವನೂಡಿದೆ

ಹಣ್ಣಿನ ಹೂವಿನ ಹೊನ್ನನು ಕೂಡಿದೆ
ಮಕ್ಕಳಗೋಕುಳ ಆಟವನಾಡಿದೆ

ತೆಂಗಿನ ತೋಟದ ಬುಡದಲಿ ಮೂಡಿದೆ
ಭೂಮಿಗೆ ಬಾನಿಗೆ ಸೇತುವೆ ಹೂಡಿದೆ

ಕಾಮನ ಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ



Scanned with CamScanner

## ಸಂಭಾಷಣೆ 3

## ಚಳಿಗಾಲ



### ಕಲಿಕಾ ಫಲಿತಗಳು

ಈ ಸಂಭಾಷಣೆಯ ಅಂತ್ಯದಲ್ಲಿ ಮಕ್ಕಳು ಈ ಕೆಳಗಿನವುಗಳನ್ನು ಅರಿತಿರುತ್ತಾರೆ.

- ಚಳಿಗಾಲದ ಲಕ್ಷಣಗಳನ್ನು ತಿಳಿದುಕೊಳ್ಳುವುದು ಮತ್ತು ಚಳಿಗಾಲದ ತಿಂಗಳುಗಳೊಡನೆ ಹೊಂದಿಸುವುದು – ಅಕ್ಟೋಬರ್‌ನಿಂದ ಜನವರಿಯವರೆಗೆ.
- ಮಳೆಗಾಲದಲ್ಲಿ ಆರೋಗ್ಯ ಮತ್ತು ಸ್ವಚ್ಛತೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳನ್ನು ತಿಳಿದುಕೊಳ್ಳುವುದು.




### ಕಲಿಕಾ ಸಾಮಗ್ರಿಗಳು

ವಿವಿಧ ಋತುಗಳ ಪೋಸ್ಟರ್‌ಗಳ ಸರಣಿ **P8.3.2-3**. ಚಳಿಗಾಲ

### ಸೂಚನೆಗಳು

1. ಪೋಸ್ಟರ್ **P8.3.2-3** ಅನ್ನು ತಂದು ಮಕ್ಕಳಿಗೆ ಅದನ್ನು ವಿವರಿಸಲು ಹೇಳುವುದು. ಚಿತ್ರದಲ್ಲಿನ ತಾಪಮಾನವನ್ನು ಅವರು ಊಹಿಸಬಹುದೇ? ಅದು ಬಿಸಿಯೇ, ಚಳಿಯೇ, ಅಥವಾ ಮಳೆಯೇ? ಅವರ ಏಕೆ ಹಾಗೆ ಯೋಚಿಸುತ್ತಾರೆ? ಮಕ್ಕಳ ಗುಂಪಿನ ಸಮೀಪದಲ್ಲಿ ನಡೆದಾಡುತ್ತಾ ಅದು ಬೇಸಿಗೆಯೆಂದು ಹೇಳಲು ಕಾರಣ ಕೊಡಿ ಎಂದು ಮಕ್ಕಳನ್ನು ಕೇಳುತ್ತಾ ಹೋಗುವುದು. ಮಕ್ಕಳು ಉತ್ತರ ನೀಡಲಿ. ಅದು ಬೇಸಿಗೆಯೆಂದು ಭಾವಿಸಲು ಚಿತ್ರದಲ್ಲಿ ಏನಿದೆ? ಮಕ್ಕಳು ಚಿತ್ರದಲ್ಲಿ ಕಾಣುತ್ತಿರುವುದೆಲ್ಲವನ್ನು ಸುಮ್ಮನೆ ಹೇಳುತ್ತಿರುವುದಲ್ಲ, ಬದಲಾಗಿ ಅವರು ಹವಾಮಾನ ಮತ್ತು ಋತುಗಳ ಸಂಬಂಧವನ್ನು ಅರ್ಥಮಾಡಿಕೊಂಡಿದ್ದಾರೆಂದು ಖಚಿತಪಡಿಸಿಕೊಳ್ಳುವುದು.
2. ಕೆಲವು ಚಿತ್ರಗಳಿಗೆ ಮಕ್ಕಳು ಹವಾಮಾನಕ್ಕೆ ಹೋಲಿಕೆ ಮಾಡಿಕೊಂಡು ವಿವರಣೆ ನೀಡಿದ ನಂತರದಲ್ಲಿ ನೀಡಿದ ಉತ್ತರಗಳನ್ನು ಸಂಕ್ಷಿಪ್ತಗೊಳಿಸಿ ಕಾಲದ ಲಕ್ಷಣಗಳನ್ನು ಮಕ್ಕಳಿಗೆ ಹೇಳಿ.
3. ಈಗ ಕೆಲವು ಲಕ್ಷಣಗಳನ್ನು ತೋರಿಸಿ ಅವುಗಳಲ್ಲಿ ಏನಿವೆ ಎಂದು ವಿವರಿಸಲು ಮಕ್ಕಳಿಗೆ ಹೇಳುವುದು. ಅವುಗಳನ್ನು ಗಮನಿಸಿ ಚರ್ಚಿಸಲು ಹೇಳುವುದು
   - ಹವಾಮಾನ ಮತ್ತು ಅದರ ಅನುಭವ
   - ಏನು ತಿನ್ನುತ್ತಿದ್ದಾರೆ
   - ಧರಿಸಿದ ಉಡುಪುಗಳು
   - ಮಕ್ಕಳು ಆಡುತ್ತಿರುವ ಆಟಗಳು
4. ಚಿತ್ರವನ್ನು ನೋಡುತ್ತಾ ಮಕ್ಕಳು ಇವುಗಳನ್ನು ವಿವರಿಸುವುದು.
5. ಸಂಭಾಷಣೆಯ ಕೊನೆಯಲ್ಲಿ ಹವಾಮಾನ, ಆಹಾರ, ಉಡುಪು ಮತ್ತು ಮಳೆಗಾಲದಲ್ಲಿ ಮಕ್ಕಳು ಆಡುವ ಆಟಗಳು, ಎಲ್ಲದರ ಸಾರಾಂಶ ಕೊಡುವುದು.
6. ಮಕ್ಕಳು ಗಮನಿಸಿ ನೋಡಿದ ಮೇಲೆ ಚರ್ಚೆಯನ್ನು ಮುಂದುವರಿಸಲು ಸಹಾಯಕವಾಗಲು ಹೆಚ್ಚು ನಿರ್ದಿಷ್ಟವಾದ ಪ್ರಶ್ನೆಗಳನ್ನು ಕೇಳುವುದು.



Scanned with CamScanner

## ಸಂಭಾಷಣೆ 3



### ಚಳಿಗಾಲ

- ಈ ಜನರು ಎಲ್ಲಿ ಕುಳಿತಿದ್ದಾರೆ? – ಬೆಂಕಿಯ ಸುತ್ತ. ಅವರು ಅಲ್ಲಿ ಏಕೆ ಕುಳಿತಿರಬಹುದು? ಅವು ತಮ್ಮ ಕೈಗಳಿಂದ ಏನು ಮಾಡುತ್ತಿದ್ದಾರೆ? ಅವರು ಏಕೆ ಅದನ್ನು ಮಾಡುತ್ತಿದ್ದಾರೆ?
- ನಿಮಗೆ ಯಾವಾಗಲಾದರೂ ಚಳಿಯಾಗಿದೆಯೇ? ವರ್ಷವಿಡೀ ನಿಮಗೆ ಚಳಿಯಾಗುತ್ತದೆಯೇ? ನಿಮಗೆ ಯಾವಾಗ ಚಳಿಯಾಗುತ್ತದೆ?
- ಚಳಿಗಾಲದ ಪರಿಕಲ್ಪನೆಯನ್ನು ಪರಿಚಯಮಾಡುವುದು.
- ವರ್ಷದ ಕೆಲವು ತಿಂಗಳುಗಳಲ್ಲಿ – ಅಕ್ಟೋಬರ್‌ನಿಂದ ಜನವರಿಯವರೆಗೆ ತುಂಬಾ ಚಳಿಯಿರುತ್ತದೆ ಮತ್ತು ಈ ಅವಧಿಯನ್ನು ಚಳಿಗಾಲವೆಂದು ಕರೆಯುತ್ತಾರೆ ಎಂದು ಹೇಳುವುದು.
- ಈ ಜನರು ಎಂತಹ ಉಡುಪು ಧರಿಸಿದ್ದಾರೆ? ಏಕೆ? ಚಳಿಯಾದಾಗ ನೀವು ಏನನ್ನು ಧರಿಸುತ್ತೀರಿ?
- ಚಳಿಗಾಲದಲ್ಲಿ ಸೂಕ್ತ ಉಡುಪು ಧರಿಸಿ ಬೆಚ್ಚಗಾಗಿರುವುದು ಅವಶ್ಯಕ ಎಂದು ಮಕ್ಕಳಿಗೆ ಹೇಳುವುದು.
- ಇವರು ಏನು ಕುಡಿಯುತ್ತಿದ್ದಾರೆ? ನಿಮಗೆ ಚಳಿಯಾದಾಗ ನೀವು ಏನನ್ನು ತಿನ್ನುತ್ತೀರಿ ಮತ್ತು ಕುಡಿಯುತ್ತೀರಿ? ಚಳಿಗಾಲದಲ್ಲಿ ನೀವು ಐಸ್‌ಕ್ರೀಮ್ ತಿನ್ನುತ್ತೀರಾ? –ಆಹಾರ ಪದಾರ್ಥಗಳಾದ ಬಿಸಿ ನೀರು, ಚಹಾ, ಸೂಪ್/ ಕಷಾಯಗಳನ್ನು ಸೇವಿಸುವುದರಿಂದ ದೇಹವನ್ನು ಬೆಚ್ಚಗಾಗಿಡಬಹುದು ಎಂದು ಹೇಳುವುದು.
- ತುಂಬಾ ಚಳಿಯಿರುವಾಗ ನೀವು ಹೊರಗೆ ಆಡುತ್ತೀರಾ ಅಥವಾ ಒಳಗೆ ಆಡುತ್ತೀರಾ?
- ಚಳಿಗಾಲದಲ್ಲಿ ಎಂತಹ ಒಳಾಂಗಣ ಆಟಗಳನ್ನು ಆಡುತ್ತೀರಿ?
- ಚಳಿಗಾಲದ ಬಗ್ಗೆ ತಮ್ಮ ಅನುಭವಗಳ ಬಗ್ಗೆ ಮಾತಾಡಲು ಮಕ್ಕಳನ್ನು ಪ್ರೋತ್ಸಾಹಿಸುವುದು.

---

ಚಟುವಟಿಕೆ

## ಋತುಗಳನ್ನು ಹೊಂದಿಸುವುದು




### ಕಲಿಕಾ ಸಾಮಗ್ರಿಗಳು

ಪೆಟ್ಟಿಗೆಗಳು, ವಿವಿಧ ಋತುಗಳ ಪೋಸ್ಟರ್‌ಗಳು **P8.3.2-1**. ಬೇಸಿಗೆ ಕಾಲ, 2. ಮಳೆಗಾಲ,

ಚಳಿಗಾಲ, ಋತುಗಳಿಗೆ ಸಂಬಂಧಿಸಿದ ಮಿಂಚುಪಟ್ಟಿಗಳು–**F8.3.1** - 1. ಸೂರ್ಯ, 2. ಕಲ್ಲಂಗಡಿ ಹಣ್ಣು, ಮಾವಿನ ಹಣ್ಣು, ಎಳನೀರು, 3. ಶರ್ಟ್ ಮತ್ತು ಚಡ್ಡಿಗಳು, ಫ್ರಾಕ್‌ಗಳು, ಟೊಪ್ಪಿಗಳು, 4. ಮೋಡ, ಮಿಂಚುಗಳಿಂದ ಕೂಡಿದ ಮಳೆ, 5. ಛತ್ರಿ ಮತ್ತು ರೈನ್‌ಕೋಟ್‌ಗಳು, 6. ಕಾಮನಬಿಲ್ಲು, 7. ಸ್ವೆಟರ್, ಸಾಕ್ಸ್‌ಗಳು ಸ್ಕಾರ್ಫ್‌ಗಳು, 8. ಬೆಂಕಿಯ ಸುತ್ತ ಕುಳಿತಿರುವ ಜನರು, 9. ಬಿಸಿ ಪಾನೀಯಗಳು, ಬಟ್ಟಲಿನಲ್ಲಿ ಸೂಪ್

### ಸೂಚನೆಗಳು

1. ಪೋಸ್ಟರ್‌ಗಳನ್ನು ಅಕ್ಕಪಕ್ಕದಲ್ಲಿಟ್ಟು ಅವುಗಳ ಎದುರು ಪೆಟ್ಟಿಗೆಗಳನ್ನಿಡುವುದು.
2. ಮಿಂಚುಪಟ್ಟಿಗಳನ್ನು ತರಗತಿಯಲ್ಲಿ ಬಚ್ಚಿಡುವುದು.
3. ಮಿಂಚುಪಟ್ಟಿಗಳನ್ನು ಹುಡುಕಿ ಅವುಗಳನ್ನು ಸರಿಯಾದ ಋತುವಿನ ಪೆಟ್ಟಿಗೆಯಲ್ಲಿ ಹಾಕಲು ಮಕ್ಕಳಿಗೆ ಹೇಳುವುದು. ಉದಾಹರಣೆಗೆ, ಒಂದು ಮಗುವಿಗೆ ಮಾವಿನ ಹಣ್ಣಿನ ಚಿತ್ರ ಸಿಕ್ಕಿದರೆ ಅವನು ಅದನ್ನು ಬೇಸಿಗೆ ಕಾಲದ ಪೋಸ್ಟರ್‌ನ ಎದುರು ಇರುವ ಪೆಟ್ಟಿಗೆಗೆ ಹಾಕಬೇಕು.



Scanned with CamScanner

## ಯೋಜನಾ ಕಾರ್ಯ 1

## ಒಂದು ಕಡ್ಡಿ ಗೊಂಬೆ ಮಾಡಿ ಅದಕ್ಕೆ ಉಡುಪು ಹಾಕುವುದು

### ಕಲಿಕಾ ಫಲಿತಗಳು

ಈ ಯೋಜನಾ ಕಾರ್ಯದ ಕೊನೆಯಲ್ಲಿ ಮಕ್ಕಳು ಋತುಗಳಿಗೆ ಸೂಕ್ತವಾದ ಉಡುಪುಗಳನ್ನು ಹೊಂದಿಸುವರು.

### ಕಲಿಕಾ ಸಾಮಗ್ರಿಗಳು

ಕಾಗದ, ಉಣ್ಣೆ, ಹತ್ತಿ, ಪಾಲಿಯೆಸ್ಟರ್ ಬಟ್ಟೆಯ ತುಂಡುಗಳು, ಮತ್ತು ಛತ್ರಿಯ ಕಟ್‌ಔಟ್‌ಗಳು, ಐಸ್‌ಕ್ರೀಮ್ ಕಡ್ಡಿಗಳು, ಅಂಟು.

### ಶಿಕ್ಷಕರ ಪೂರ್ವಸಿದ್ಧತೆ

- ಮುಖ ಮಾಡಲು ಸಾಕಷ್ಟು ವೃತ್ತಾಕಾರದ ತುಂಡುಗಳನ್ನು ಮತ್ತು ಛತ್ರಿಗಳ ಕಟ್‌ಔಟ್‌ಗಳನ್ನು ಕತ್ತರಿಸಿಕೊಳ್ಳುವುದು. ಹಳೆಯ ಹತ್ತಿ, ಉಣ್ಣೆ, ಪಾಲಿಯೆಸ್ಟರ್ ಬಟ್ಟೆಯ ತುಂಡುಗಳನ್ನು ಸಂಗ್ರಹಿಸಿ ಅವುಗಳಲ್ಲಿ ಲಂಗ, ಫ್ರಾಕ್, ಪ್ಯಾಂಟ್, T–ಶರ್ಟ್, ಸ್ವೆಟರ್ ಮತ್ತು ಟೊಪ್ಪಿಗಳ ಆಕಾರಗಳನ್ನು ಕತ್ತರಿಸುವುದು. ಬೇರೆ ಬೇರೆ ಗುಂಪುಗಳಿಗೆ ಕೊಡಲು ಸಾಕಷ್ಟು ತುಂಡುಗಳನ್ನು ಕತ್ತರಿಸುವುದು. ಪ್ರತಿ ಗುಂಪಿಗೂ ಒಂದು ಗೊಂಬೆ ಮಾಡಲು ಬೇಕಾಗುವಷ್ಟು ಸಾಮಗ್ರಿಗಳು ಇರಬೇಕು.
- ತರಗತಿಗೆ ಮೊದಲೇ ಕಡ್ಡಿಗೊಂಬೆ ಮಾಡುವುದನ್ನು ಪ್ರಯತ್ನಿಸುವುದು.

### ಸೂಚನೆಗಳು

ಈ ಚಟುವಟಿಕೆಯನ್ನು ಹೇಗೆ ಮಾಡುವುದೆಂದು ತೋರಿಸುವುದು. ಅಗತ್ಯವಿದ್ದರೆ ಮಕ್ಕಳಿಗೆ ಸಹಾಯ ಮಾಡುವುದು.

1. ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿ ಅವರಿಗೆ ಕಾಗದದ ವೃತ್ತಾಕಾರದ ತುಂಡುಗಳನ್ನು ಕೊಡುವುದು. ಅದರಲ್ಲಿ ಕಣ್ಣು, ಮೂಗು ಬಾಯಿಯ ಚಿತ್ರ ಬರೆಯಲು ಹೇಳುವುದು.
2. ಈ ಮುಖವನ್ನು ಐಸ್‌ಕ್ರೀಮ್ ಕಡ್ಡಿಯ ಮೇಲ್ಭಾಗದಲ್ಲಿ ಅಂಟಿಸಲು ಹೇಳುವುದು.
3. ತಮ್ಮ ಗೊಂಬೆಗೆ ಯಾವ ಋತುವಿಗೆ ತಕ್ಕಂತೆ ಉಡುಗೆ ತೊಡಿಸುವುದೆಂದು ತಮ್ಮಲ್ಲೇ ಚರ್ಚಿಸಬಹುದೆಂದು ಹೇಳುವುದು.
4. ಲಂಗ, ಫ್ರಾಕ್, ಪ್ಯಾಂಟ್, T–ಶರ್ಟ್‌ಗಳ ತುಂಡುಗಳನ್ನು ಶಿಕ್ಷಕರ ಮೇಜಿನ ಮೇಲಿರಿಸುವುದು ಮತ್ತು ಪ್ರತಿ ಗುಂಪಿನಿಂದ ಒಬ್ಬರನ್ನು ಕಳುಹಿಸಿ ಅವರ ಗೊಂಬೆಗೆ ಬೇಕಾದ ಬಟ್ಟೆಯನ್ನು ಪಡೆದುಕೊಳ್ಳಲು ಹೇಳುವುದು. ಪ್ರತಿ ಗುಂಪಿಗೂ ಒಂದು ಗೊಂಬೆ ಮಾಡಲು ಬೇಕಾಗುವಷ್ಟು ಸಾಮಗ್ರಿಗಳು ಇದೆಯೆಂದು ಖಚಿತಪಡಿಸಿಕೊಳ್ಳುವುದು. ಗುಂಪುಗಳು ಒಂದೇ ರೀತಿಯ ಗೊಂಬೆ ಮಾಡಲು ಬಯಸಿದ್ದರೆ ಅವರಿಗೆ ಬೇರೆ ಬೇರೆ ಗೊಂಬೆ ಮಾಡಲು ಹೇಳುವುದು.
5. ಅವರು ಆಯ್ಕೆ ಮಾಡಿದ ಋತುವಿನ ಆಧಾರದ ಮೇಲೆ ಉಡುಪನ್ನು ಐಸ್‌ಕ್ರೀಮ್ ಕಡ್ಡಿಯ ಕೆಳಭಾಗಕ್ಕೆ ಅಂಟಿಸಲು ಹೇಳುವುದು.
6. ಚಟುವಟಿಕೆಯನ್ನು ಮುಗಿಸಿದ ಮೇಲೆ ಅವರು ಯಾವ ಋತುವಿನ ಉಡುಗೆಯನ್ನು ಗೊಂಬೆಗೆ ತೊಡಿಸಿದ್ದಾರೆ ಮತ್ತು ಏಕೆ ಎಂದು ವಿವರಿಸಲು ಹೇಳುವುದು.



Scanned with CamScanner

## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

**"ಬೇಸಿಗೆ ಕಾಲ ಬಂದಿತ್ತು", "ಮಳೆ ಬಂತು ಮಳೆ", "ಗುಡುಗು ಕೇಳಿಸುತ್ತಿದೆ"** ಶಿಶುಗೀತೆಗಳನ್ನು ಸರಿಯಾದ ಪದಗಳು, ಉಚ್ಚಾರ, ಮತ್ತು ಅಭಿನಯಗಳೊಂದಿಗೆ ಹಾಡುವ ಸಾಮರ್ಥ್ಯವನ್ನು ಹೊಂದುವುದು.

### ಕಲಿಕಾ ಸಾಮಗ್ರಿಗಳು

ಸಚಿತ್ರ ವಿವರಣೆ ಇರುವ ಶಿಶುಗೀತೆಗಳ ಮುದ್ರಿತ ಪ್ರತಿ.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ಪರಿಚಯಿಸಿಕೊಳ್ಳುವುದು. ಚಾರ್ಟ್ ಹಾಳೆಯ ಮೇಲೆ ದೊಡ್ಡ ಅಕ್ಷರಗಳಲ್ಲಿ ಚಿತ್ರ ಸಹಿತವಾದ ಶಿಶುಗೀತೆಯನ್ನು ಒಂದು ಮೂಲೆಯಲ್ಲಿ ಬರೆಯುವುದು ಮತ್ತು ಮಕ್ಕಳಿಗೆ ಕಣ್ಣಿನ ಎತ್ತರಕ್ಕೆ ಸರಿಹೊಂದುವಂತೆ ಪ್ರದರ್ಶಿಸುವುದು. ಮಕ್ಕಳು ಶಿಶುಗೀತೆಯನ್ನು ನೋಡಲಿ.

### ಸೂಚನೆಗಳು

1. ಶಿಶುಗೀತೆಯನ್ನು ಲಯಬದ್ಧವಾಗಿ, ಭಾವಾಭಿನಯದೊಂದಿಗೆ ಹಾಗೂ ಧ್ವನಿಯ ಏರಿಳಿತಗಳೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
2. ಗೀತೆಯ ಪ್ರತಿಯೊಂದು ಸಾಲನ್ನೂ ಶಿಕ್ಷಕರು ಹಾಡಿದ ನಂತರ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವುದು.
3. ಪದಗಳಿಗೆ ಹೊಂದುವ ಅಭಿನಯವನ್ನು ಮಾಡಿ ತೋರಿಸಿ, ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
4. ಈಗ ಶಿಕ್ಷಕರ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಮಕ್ಕಳಿಗೆ ಹೇಳುವುದು.
5. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.

ಗಮನಿಸಿ: ಎಲ್ಲಾ ಶಿಶುಗೀತೆಗಳನ್ನು 3 – 4 ಬಾರಿ ಹೇಳಿಸಬೇಕು ಹಾಗೂ "ದಿನಗಳು, ವಾರಗಳು ಮತ್ತು ತಿಂಗಳುಗಳು, ಹವಾಮಾನ ಮತ್ತು ಋತುಗಳು" ಮುಖ್ಯ ವಿಷಯದ ತರಗತಿಯುದ್ದಕ್ಕೂ ಇದನ್ನು ಪುನರಾವರ್ತಿಸಬೇಕು.



Scanned with CamScanner

ಶಿಶುಗೀತೆ 1

## ಬೇಸಿಗೆ ಕಾಲ ಬಂದಿತು

# ಬೇಸಿಗೆ ಕಾಲ ಬಂದಿತು



ಬೇಸಿಗೆ ಕಾಲ ಬಂದಿತು
ಮಾವಿನ ಹಣ್ಣು ತಂದಿತು



ಮಳೆಗಾಲ ಬಂದಿತು
ನೇರಳೆ ಹಣ್ಣು ತಂದಿತು



ಚಳಿಗಾಲ ಬಂದಿತು
ಸೀತಾಫಲ ತಂದಿತು




Scanned with CamScanner


ಶಿಶುಗೀತೆ 2

ಮಳೆ ಬಂತು ಮಳೆ

# ಮಳೆ ಬಂತು ಮಳೆ



ಮಳೆ ಬಂತು ಮಳೆ
ಕೊಡೆ ಹಿಡಿದು ನಡೆ
ಮಣ್ಣಿನಲ್ಲಿ ಜಾರಿ ಬಿದ್ದು
ಬಟ್ಟೆಯೆಲ್ಲಾ ಕೊಳೆ




ಬಿಸಿಲು ಬಂತು ಬಿಸಿಲು
ಕೋಟು ಟೋಪಿ ತೆಗೆ
ಬಾವಿಯಲ್ಲಿ ನೀರು ಸೇದಿ
ಸೋಪು ಹಾಕಿ ಒಗೆ

ಶಿಶುಗೀತೆ 3

## Are you sleeping

# Are you sleeping

Are you sleeping?
Are you sleeping?
Wake up soon
Wake up soon
Morning bells are ringing
Morning bells are ringing
It's time for school



Scanned with CamScanner

ಶಿಶುಗೀತೆ 4

## ಗುಡುಗು ಕೇಳಿಸುತ್ತಿದೆ



# ಗುಡುಗು ಕೇಳಿಸುತ್ತಿದೆ

ಗುಡುಗುಡು ಗುಡುಗು ಗುಡುಗುಡು ಗುಡುಗು
ಕೇಳುತ ನಡುಗು ಗಡಗಡ ನಡುಗು
ಚಿಟಪಟ ಮಳೆಹನಿ ಚಿಟಪಟ ಮಳೆಹನಿ
ಮಳೆಯಲಿ ನೀ ನೆನಿ //ಗುಡುಗುಡು//

ಸುಂಯ್‌ಸುಂಯ್ ಗಾಳಿ ಬೀಸುವ ಗಾಳಿ
ಕಾಣದೆ ನಿನಗೆ ಗಾಳಿಯ ದಾಳಿ
ಎಲೆಗಳ ಥಕಥೈ ಕುಣಿಯುವ ಥೈಥೈ
ಕಣ್ಣಿಗೆ ಕಾಣದ ದೂರದಿ ಹಾರಿದೆ
ಗಾಳಿಗೆ ಹಾರಿದ ಗಾಳಿಪಟ //ಸುಂಯ್//

ಗುಡುಗುಡು ಗುಡುಗು ಗಡಗಡ ನಡುಗು



Scanned with CamScanner

## ಛತ್ರಿ ಮತ್ತು ಗಡಿಯಾರ




### ಕಲಿಕಾ ಫಲಿತಗಳು

ಮಕ್ಕಳು **"ಛತ್ರಿ ಮತ್ತು ಗಡಿಯಾರ"** ಕಥೆಯನ್ನು ಅರ್ಥಮಾಡಿಕೊಳ್ಳುತ್ತಾರೆ. "ಏನು? ಏಕೆ? ಹೇಗೆ? ಮತ್ತು ಯಾವಾಗ?" ಎಂಬ ಸರಳವಾದ, ಗ್ರಹಿಕೆಯ ಮತ್ತು ನೆನಪಿಸಿಕೊಳ್ಳುವ ಪ್ರಶ್ನೆಗಳನ್ನು ಅರ್ಥಮಾಡಿಕೊಂಡು ಉತ್ತರಿಸುತ್ತಾರೆ.

**ಕಲಿಕಾ ಸಾಮಗ್ರಿಗಳು:** ಕಥೆ ಪುಸ್ತಕ

### ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಹಾಗೂ ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ನಿರೂಪಿಸುವುದನ್ನು ಅಭ್ಯಾಸಮಾಡಿಕೊಳ್ಳುವುದು.




### ಕಥೆಯ ಸಂಕ್ಷಿಪ್ತ ರೂಪ

**ಛತ್ರಿ ಮತ್ತು ಗಡಿಯಾರ**

"ಇಂದು ಭಾನುವಾರ, ಅಂದರೆ ಶಾಲೆಗೆ ರಜೆ" ಎಂದು ಪ್ರಿಯಾ ಖುಷಿಯಿಂದ ಕೂಗಿದಳು. ಅದು ಒಂದು ಮೋಡ ಕವಿದ ದಿನವಾಗಿತ್ತು ಮತ್ತು ಪ್ರಿಯಾಳು ತನ್ನ ಎದ್ದುಕಾಣುವ ಹೊಸ ಛತ್ರಿಯನ್ನು ಹಿಡಿದುಕೊಂಡು ಸಂತೆಗೆ ಹೋದಳು. ಅದು ತುಂಬಾ ಅಂದವಾದ ಛತ್ರಿ. ಅದು ಕೆಂಪು ಬಣ್ಣದ್ದಾಗಿತ್ತು ಮತ್ತು ಅದರಲ್ಲಿ ಚಿನ್ನದ ಬಣ್ಣದ ನಕ್ಷತ್ರಗಳಿದ್ದವು.

ಅವಳು ಒಂದು ಪಕೋಡದ ಅಂಗಡಿಯನ್ನು ನೋಡಿದಳು, ಅವಳಿಗೆ ಪಕೋಡ ತಿನ್ನುವ ಆಸೆಯಾಯಿತು. ಇದ್ದಕ್ಕಿದ್ದಂತೆ ಜೋರಾದ ಗಾಳಿ ಬೀಸಲು ಪ್ರಾರಂಭವಾಯಿತು. ಪ್ರಿಯಾಳಿಗೆ ತನ್ನ ಛತ್ರಿಯನ್ನು ಹಿಡಿದುಕೊಳ್ಳಲಾಗಲಿಲ್ಲ, ಮತ್ತು ಅದು ಅವಳ ಕೈಯಿಂದ ಹಾರಿ ಹೋಯಿತು. ಅದು ಪಕೋಡದ ಅಂಗಡಿಯ ಮೇಲೆ ಹಾರಿತು. ಪ್ರಿಯಾಳು, "ಅದನ್ನು ಹಿಡಿದುಕೊಳ್ಳಿ" ಎಂದು ಕೂಗುತ್ತಾ ಅದರ ಹಿಂದೆ ಓಡಿದಳು. ಅದು ಮರಗಳ ಮೇಲೆ ಹಾರಿತು, ಪ್ರಿಯಾಳು ಅದರ ಹಿಂದೆ ಓಡಿದಳು. ನಂತರ ಅದು ಗಡಿಯಾರದ ಗೋಪುರದ ಕಡೆಗೆ ಹಾರಿತು. ಅಲ್ಲಿ ಅದು ಗಡಿಯಾರದ ಮುಳ್ಳಿನಲ್ಲಿ ಸಿಕ್ಕಿ ಹಾಕಿಕೊಂಡು ನೇತಾಡತೊಡಗಿತು.

ಅಲ್ಲಿ ಓಡಾಡುತ್ತಿದ್ದ ಜನರು ಗಡಿಯಾರವನ್ನು ನೋಡಿ ಸೋಜಿಗಗೊಂಡರು – ಗಡಿಯಾರಕ್ಕೆ ಮೂರನೆಯ ಮುಳ್ಳು ಎಲ್ಲಿಂದ ಬಂತು? ಕೂಡಲೇ ಮೂರು ಮುಳ್ಳುಗಳಿರುವ ಹೊಸ ಗಡಿಯಾರವನ್ನು ನೋಡಲು ಜನರ ಗುಂಪು ಸೇರಿತು. ಇದ್ದಕ್ಕಿದ್ದಂತೆ ಗಾಳಿ ಜೋರಾಗಿ ಬೀಸಿ ಛತ್ರಿ ಕೆಳಗೆ ಪ್ರಿಯಾಳ ಪಕ್ಕದಲ್ಲಿ ಬಿದ್ದಿತು.

ಗಡಿಯಾರದಲ್ಲಿ ಮೂರು ಮುಳ್ಳು ಏಕೆ ಇತ್ತು ಎಂದು ತಿಳಿದಾಗ ಜನರು ನಕ್ಕರು.

ಅವಳು ತನ್ನ ಛತ್ರಿ ತೆಗೆದುಕೊಂಡು ಸಂತೋಷದಿಂದ ಮನೆಗೆ ಹೋದಳು.



Scanned with CamScanner

## ಛತ್ರಿ ಮತ್ತು ಗಡಿಯಾರ



### ಸೂಚನೆಗಳು

**ಹಂತ 1:** ಮೇಲಿನ ಕಥೆಯನ್ನು ಪರಿಚಯಿಸುವುದು (ಮಕ್ಕಳೊಂದಿಗೆ ವಿಷಯದ ಬಗ್ಗೆ ಚರ್ಚಿಸುತ್ತಾ ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು. ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸುವುದು).

**ಹಂತ 2:** ಕಥೆಯನ್ನು ನಿಮ್ಮದೇ ಆದ ಪದಗಳಲ್ಲಿ ಸೂಕ್ತವಾದ ಹಾವಭಾವ ಹಾಗೂ ಧ್ವನಿಯ ಏರಿಳಿತಗಳೊಂದಿಗೆ ಹೇಳುವುದು.

**ಹಂತ 3:** ಕಥೆ ಓದುತ್ತಾ ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವುದು. ಕಥೆಯ ಮುಖ್ಯ ಅಂಶ ಅರ್ಥವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುವುದು. ಪ್ರತಿಧ್ವನಿ ಪ್ರಶ್ನೆಗಳಿಗೆ ಉದಾಹರಣೆಗಳು:

1. "ಇಂದು ಭಾನುವಾರ. ಅಂದರೆ ಶಾಲೆಗೆ ರಜೆ" ಎಂದು ಪ್ರಿಯಾ ಖುಷಿಯಿಂದ ಕೂಗಿದಳು. ಪ್ರಿಯಾ ಏನೆಂದು ಕೂಗಿದಳು?
2. "ಪ್ರಿಯಾ ಪಕೋಡ ತಿನ್ನಲು ಬಯಸಿದಳು" – ಪ್ರಿಯಾಳು ಏನನ್ನು ತಿನ್ನಲು ಬಯಸಿದಳು?
3. "ಪ್ರಿಯಾಳು ತನ್ನ ಎದ್ದುಕಾಣುವ ಹೊಸ ಛತ್ರಿಯನ್ನು ಹಿಡಿದುಕೊಂಡು ಹೊರಗಡೆ ಹೋದಳು"– ಪ್ರಿಯಾಳು ಹೊರಗೆ ಹೊರಟಾಗ ಏನನ್ನು ತೆಗೆದುಕೊಂಡು ಹೊರಟಳು?

**ಹಂತ 4:** ಕಥೆಯ ಕೊನೆಯಲ್ಲಿ ಸರಳವಾದ, ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕೇಳುವುದು. ಸರಳವಾದ, ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳಿಗೆ ಉದಾಹರಣೆಗಳು.

1. ಪ್ರಿಯಾಳ ಛತ್ರಿಯ ಬಣ್ಣ ಮತ್ತು ವಿನ್ಯಾಸ ಏನಾಗಿತ್ತು? ಹೇಗಿತ್ತು?
2. ಛತ್ರಿಯು ಮೊದಲು ಎಲ್ಲಿಗೆ ಹಾರಿತು? ನಂತರ ಎಲ್ಲಿಗೆ ಹಾರಿತು? ಕೊನೆಗೆ ಎಲ್ಲಿಗೆ ಹಾರಿತು?
3. ಅದು ಎಲ್ಲಿ ಸಿಕ್ಕಿಹಾಕಿಕೊಂಡು ನೇತಾಡುತ್ತಿತ್ತು?
4. ಜನರು ಏಕೆ ಗಡಿಯಾರದ ಕಡೆಗೆ ನೋಡುತ್ತಿದ್ದರು?
5. ಛತ್ರಿ ಹೇಗೆ ಕೆಳಗೆ ಬಂದಿತು?

**ಹಂತ 5:** ಊಹಿಸಲು ಅವಕಾಶವಿರುವ ಪ್ರಶ್ನೆಗಳನ್ನು ಕೇಳುವುದು. ಅಂತಹ ಪ್ರಶ್ನೆಗಳಿಗೆ ಉದಾಹರಣೆಗಳು:

1. ಅಂದು ಭಾನುವಾರವೆಂದು ಪ್ರಿಯಾಳಿಗೆ ಏಕೆ ಖುಷಿಯಾಯಿತು? ನಿಮಗೆ ಭಾನುವಾರವೆಂದರೆ ಇಷ್ಟವೇ? ಏಕೆ?
2. ಛತ್ರಿಯು ಅವಳ ಕೈಯಿಂದ ಹಾರಿ ಹೋದಾಗ ಪ್ರಿಯಾ ಏನು ಭಾವಿಸಿರಬಹುದೆಂದು ನೀವು ಯೋಚಿಸುತ್ತೀರಿ?

**ಹಂತ 6:** ಕಥೆಯ ಪಾತ್ರಗಳೊಂದಿಗೆ ಮಕ್ಕಳು ಸಂವೇದನಾಶೀಲತೆಯನ್ನು ತೋರಲು ಅಗತ್ಯವಿರುವ ಸರಳವಾದ ಪ್ರಶ್ನೆಗಳನ್ನು ಕೇಳುವುದು.

1. ಭಾನುವಾರವೆಂದರೆ ಏಕೆ ಶಾಲೆ ಇಲ್ಲ? – (ಏಕೆಂದರೆ ಅದು ರಜಾದಿನ)
2. ಪ್ರಿಯಾ ಬಿಸಿ ಬಿಸಿ ಪಕೋಡ ತಿನ್ನಬೇಕೆಂದು ಏಕೆ ಬಯಸಿದಳು ಎಂದು ನೀವು ಯೋಚಿಸುತ್ತೀರಿ? ಮಳೆ ಬರುತ್ತಿರುವಾಗ ನೀವು ಏನು ತಿನ್ನಬೇಕೆಂದು ಬಯಸುತ್ತೀರಿ?
3. ಪ್ರಿಯಾ ಛತ್ರಿಯನ್ನು ಏಕೆ ತೆಗೆದುಕೊಂಡು ಹೊರಟಳು?
4. ಪ್ರಿಯಾಳಿಗೆ ಛತ್ರಿಯನ್ನು ಹಿಡಿದುಕೊಳ್ಳಲು ಏಕೆ ಸಾಧ್ಯವಾಗಲಿಲ್ಲ?
5. ಗಡಿಯಾರಕ್ಕೆ ಮೂರು ಮುಳ್ಳುಗಳಿದ್ದವೇ? ಏಕೆ?

**ಹಂತ 7:** ಮಕ್ಕಳಿಗೆ ತಮ್ಮ ಪದಗಳನ್ನು ಉಪಯೋಗಿಸಿಕೊಂಡು 2–4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ನೆರವು ನೀಡುವುದು.



Scanned with CamScanner

ಚಟುವಟಿಕೆ 1

## ಸೂರ್ಯನ ಚಿತ್ರ ಬರೆಯುವುದು

### ಕಲಿಕಾ ಸಾಮಗ್ರಿಗಳು

ನೋಟ್ ಪುಸ್ತಕಗಳು/ಕಾಗದದ ಹಾಳೆ, ಪೆನ್ಸಿಲ್‌ಗಳು, ರೇಖಾಚಿತ್ರಗಳು

### ಸೂಚನೆಗಳು

1. ಸೂರ್ಯನ ಚಿತ್ರ ಬರೆಯಲು ಮಕ್ಕಳಿಗೆ ಹೇಳುವುದು.
2. ಅದು ಹೇಗಿರಬೇಕೆಂದು ಸೂಚನೆ ಕೊಡಬೇಡಿ.
3. ಅವರಿಷ್ಟದಂತೆ ಬರೆಯಲು ಪ್ರೋತ್ಸಾಹಿಸುವುದು.

---

ಚಟುವಟಿಕೆ 2

## ಕೊಲಾಜ್ ಮಾಡುವುದು

### ಕಲಿಕಾ ಸಾಮಗ್ರಿಗಳು

ದಿನಪತ್ರಿಕೆಗಳು, ಹಳೆಯ ಪತ್ರಿಕೆಗಳು, ಅಂಟು, ಚಾರ್ಟ್ ಪೇಪರ್


### ಸೂಚನೆಗಳು

1. ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ಅವರಿಗೆ ದಿನಪತ್ರಿಕೆ ಮತ್ತು ಹಳೆಯ ಪತ್ರಿಕೆಗಳನ್ನು ಕೊಡುವುದು.
2. ಋತುಗಳಿಗೆ ಸಂಬಂಧಿಸಿದ ಚಿತ್ರಗಳನ್ನು (ಉಡುಪುಗಳು, ಆಹಾರ, ಪಾನೀಯಗಳು) ಹುಡುಕಿ ಅವುಗಳನ್ನು ಚಾರ್ಟ್ ಪೇಪರ್ ಮೇಲೆ ಅಂಟಿಸಲು ಹೇಳುವುದು.

---

ಚಟುವಟಿಕೆ 3

## ಕಾಮನಬಿಲ್ಲಿಗೆ ಬಣ್ಣ ಹಚ್ಚುವುದು




### ಕಲಿಕಾ ಸಾಮಗ್ರಿಗಳು

ಚಟುವಟಿಕೆಯ ಹಾಳೆ WS8.3.1 – ಕಾಮನಬಿಲ್ಲಿನ ರೇಖಾಚಿತ್ರ, ರೇಖಾಚಿತ್ರಗಳು, ಬಣ್ಣಗಳು, ಬಣ್ಣದ ಪೆನ್ಸಿಲ್‌ಗಳು

### ಸೂಚನೆಗಳು

1. ಪ್ರತಿಯೊಬ್ಬರಿಗೂ ಕಾಮನಬಿಲ್ಲಿನ ಒಂದೊಂದು ರೇಖಾಚಿತ್ರಗಳನ್ನು ಕೊಟ್ಟು ಅದಕ್ಕೆ ಬಣ್ಣಹಚ್ಚಲು ಹೇಳುವುದು.
2. ಸರಿಯಾದ ಬಣ್ಣ ಹಚ್ಚಬೇಕೆಂದು ಹೇಳದೆ ಅವರಿಗಿಷ್ಟವಾದಂತೆ ಬಣ್ಣ ಹಚ್ಚಲು ಅವಕಾಶ ಕೊಡುವುದು.



Scanned with CamScanner

## ಚಟುವಟಿಕೆ 1

## ಕನ್ನಡಿ

### ಸೂಚನೆಗಳು

1. ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಲು ಹೇಳುವುದು.
2. ಚಟುವಟಿಕೆ ಮಾಡಿ ತೋರಿಸುವುದಕ್ಕಾಗಿ ಒಂದು ಮಗುವನ್ನು ಕರೆಯುವುದು.
3. ಆ ಮಗುವಿಗೆ ಚಳಿಯಾದಾಗ/ಗಾಳಿ ಊದುವಂತೆ/ ಛತ್ರಿ ಹಿಡಿದು ಕೋಡಿರುವಂತೆ ನಟನೆ/ಶಬ್ದ ಮಾಡಲು ಹೇಳುವುದು. ಮೊದಲ ಮಗು ಮಾಡಿದ ನಟನೆ/ಅಥವಾ ಶಬ್ದವನ್ನು ನಕಲು ಮಾಡುವುದು. ಮಧ್ಯದಲ್ಲಿರುವ ಮಗು ಮಾಡಿರುವ ನಟನೆಗಳನ್ನು ನಕಲು ಮಾಡಲು ಉಳಿದ ಮಕ್ಕಳಿಗೆ ಹೇಳುವುದು. ಪ್ರತಿ ನಟನೆಯ ನಂತರ ಮಗು ಯಾವ ಋತುವನ್ನು ತೋರಿಸಲು ಪ್ರಯತ್ನಿಸುತ್ತಿದೆಯೆಂದು ಕೇಳುವುದು.

---

## ಚಟುವಟಿಕೆ 2

## ದಾರ ಪೋಣಿಸುವ ಚಟುವಟಿಕೆ

### ಕಲಿಕಾ ಸಾಮಗ್ರಿಗಳು

ಮಳೆಗಾಲ, ಬೇಸಿಗೆ ಕಾಲ, ಚಳಿಗಾಲಗಳಿಗೆ ಸಂಬಂಧಿಸಿದ ವಸ್ತುಗಳ ಚಿತ್ರಗಳು, ಕಾರ್ಡ್‌ಬೋರ್ಡ್, ತೂತುಮಾಡುವ ಉಪಕರಣ, ದಾರ

### ಶಿಕ್ಷಕರ ಪೂರ್ವಸಿದ್ಧತೆ

ಪತ್ರಿಕೆಗಳಿಂದ ಅಥವಾ ದಿನಪತ್ರಿಕೆಗಳಿಂದ ಋತುಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಹುಡುಕಿ ಕತ್ತರಿಸಿ ಇಟ್ಟುಕೊಳ್ಳುವುದು. ರೇಖಾಚಿತ್ರಗಳನ್ನು ಮಾಡಿ ಅವುಗಳಿಗೆ ಬಣ್ಣ ಹಚ್ಚಲು ಹೇಳಬಹುದು. ಚಿತ್ರಗಳನ್ನು ಕಾರ್ಡ್‌ಬೋರ್ಡ್‌ಗೆ ಅಂಟಿಸಿ, ಕತ್ತರಿಸಿ, ಅದರಲ್ಲಿ ತೂತು ಮಾಡಿ ಸಿದ್ಧಪಡಿಸಿಟ್ಟುಕೊಳ್ಳುವುದು.

### ಸೂಚನೆಗಳು

1. ದಾರ ಮತ್ತು ತೂತು ಮಾಡಿದ ಚಿತ್ರಗಳನ್ನು ಮಕ್ಕಳಿಗೆ ಕೊಡುವುದು.
2. ಗುಂಪಾಗಿ ಕೆಲಸ ಮಾಡಲು ಹೇಳುವುದು.
3. ದಾರವನ್ನು ತೂತಿನ ಮೂಲಕ ಹಾಕಿ ಕಟ್ಟಲು ಹೇಳುವುದು.
4. ದಾರ ಕಟ್ಟಿದ ನಂತರ ಅದನ್ನು ಬಿಚ್ಚಿ ಚಿತ್ರವನ್ನು ಇನ್ನೊಂದು ಗುಂಪಿನ ಜೊತೆ ಬದಲಾಯಿಸಿಕೊಳ್ಳಲು ಹೇಳುವುದು.



Scanned with CamScanner

**ಚಟುವಟಿಕೆ 1**

## ಓಟ



### ಸೂಚನೆಗಳು

1. ಮಕ್ಕಳನ್ನು ಸಾಲಾಗಿ ಒಬ್ಬರ ಹಿಂದೆ ಒಬ್ಬರಾಗಿ ಜೊತೆಯಾಗಿ ನಿಲ್ಲಲು ಹೇಳುವುದು. ಪ್ರತಿ ಜೋಡಿಗೂ ಒಂದು ಋತುವಿಗೆ ಸಂಬಂಧಿಸಿದ ವಸ್ತುವಿನ ಹೆಸರು ಕೊಡುವುದು.
2. ವಸ್ತುಗಳ ಹೆಸರುಗಳನ್ನು ಒಂದೊಂದಾಗಿ ಹೇಳುವುದು. ಉದಾಹರಣೆಗೆ, ಛತ್ರಿ ಎಂದು ಹೇಳಿದರೆ, ಆ ಹೆಸರಿರುವ ಜೋಡಿಗಳು ಓಡುತ್ತಾ ಹೋಗಿ ಮುಕ್ತಾಯದ ಗೆರೆಯನ್ನು ಮುಟ್ಟಬೇಕು.
3. ಇತರ ವಸ್ತುಗಳಿಗೂ ಇದೇ ವಿಧಾನವನ್ನು ಅನುಸರಿಸಬೇಕು.

**ಚಟುವಟಿಕೆ 2**

## ಚೆಂಡಿನಿಂದ ಗುರಿಯಿಟ್ಟು ಹೊಡೆಯುವುದು

### ಕಲಿಕಾ ಸಾಮಗ್ರಿಗಳು

ಚೆಂಡು, ಸ್ವಲ್ಪ ದೂರದಿಂದ ಚೆಂಡಿನಿಂದ ಹೊಡೆಯಬಹುದಾದ ವಸ್ತುಗಳು ಉದಾ: ಗೊಂಬೆ, ಬಾಟಲಿ ಇತ್ಯಾದಿ.

### ಸೂಚನೆಗಳು

1. ಒಂದು ಗೆರೆ ಎಳೆದು ಅದರ ಹಿಂದೆ ಬಾಟಲಿ, ಗೊಂಬೆ ಅಥವಾ ಯಾವುದಾದರೂ ದೊಡ್ಡ ವಸ್ತುವನ್ನು ಅದರ ಹಿಂದೆ ಇಡುವುದು.
2. ಮೊದಲನೆಯ ಗೆರೆಗಿಂತ ಸ್ವಲ್ಪ ದೂರದಲ್ಲಿ ಇನ್ನೊಂದು ಗೆರೆ ಎಳೆದು ಮಕ್ಕಳನ್ನು ಅದರ ಹಿಂದೆ ನಿಲ್ಲಲು ಹೇಳುವುದು.
3. ಅವರು ನಿಂತಿರುವ ಜಾಗದಿಂದ ಒಬ್ಬೊಬ್ಬರಾಗಿ ಆ ವಸ್ತುವಿಗೆ ಚೆಂಡಿನಿಂದ ಹೊಡೆದು ಬೀಳಿಸಲು ಹೇಳುವುದು.



Scanned with CamScanner

## ಹವಾಮಾನ ಮತ್ತು ಋತುಗಳು

### ಕಲಿಕಾ ಫಲಿತಗಳು

ಮೊದಲ ತಿಂಗಳಿನ ಕೊನೆಯಲ್ಲಿ ಮಕ್ಕಳು ಈ ಕೆಳಗಿನ 6 ಇಂಗ್ಲೀಷ್ ಸರಳ ಸೂಚನೆಗಳಿಗೆ ಪ್ರತಿಕ್ರಿಯಿಸಲು ಮತ್ತು ಅವನ್ನು ಅನುಸರಿಸಲು ಸಮರ್ಥರಾಗುತ್ತಾರೆ.

1. Start the car
2. Drive slowly
3. Drive fast

1. Start the car
2. Drive slowly
3. Drive fast

1. Start the car
2. Drive slowly
3. Drive fast

1. Drive faster
2. Slow down
3. Stop

1. Drive faster
2. Slow down
3. Stop

1. Drive faster
2. Slow down
3. Stop


Say
gesture
model

1. Start the car
2. Drive slowly
3. Drive fast
4. Drive faster
5. Slow down
6. Stop

1. Stop
2. Start the car
3. Drive slowly
4. Drive fast
5. Drive faster
6. Slow down



Scanned with CamScanner



ಸಮಯ

# ಪರಿಕಲ್ಪನೆ ಹಾಗೂ ನಿರ್ವಹಣೆ






Scanned with CamScanner

# ಕಲಿಕಾ ಫಲಿತಗಳು

## ಸಮಯ: ಪರಿಕಲ್ಪನೆ ಹಾಗೂ ನಿರ್ವಹಣೆ

### 3–4 ವರ್ಷಗಳು

1. ದಿನನಿತ್ಯದ ಮಾತಿನಲ್ಲಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿ ಎಂದು ಸಮಯಕ್ಕೆ ಸಂಬಂಧಿಸಿದ ಭಾಷೆಯನ್ನು ಬಳಸುವುದು.

2. ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಯ ಸಮಯಗಳಲ್ಲಿ ಮಾಡುವ ಚಟುವಟಿಕೆಗಳನ್ನು ವಿಂಗಡಿಸುವುದು ಅಥವಾ ಹೊಂದಿಸುವುದು.

3. ಶಾಲೆಗೆ ಹೋಗುವುದು, ಊಟ ಮಾಡುವುದು, ಸ್ನಾನ ಮಾಡುವುದು ಮೊದಲಾದ ಪ್ರತಿದಿನದ ಚಟುವಟಿಕೆಗಳನ್ನು 3 ಹಂತಗಳವರೆಗೆ ಅನುಕ್ರಮವಾಗಿ ಜೋಡಿಸುವುದು (ಚಿತ್ರದ ಕಾರ್ಡುಗಳನ್ನು ಬಳಸಿ).

4. ಸಮಯ/ಅವಧಿಯ ಪರಿಕಲ್ಪನೆಯನ್ನು ಸಮಸ್ಯಾ ಪರಿಹಾರ ಚಟುವಟಿಕೆಗೆ ಅನ್ವಯಿಸುವುದು.
   - ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಗಳನ್ನು ಒಳಗೊಂಡ ದಿನದ ವಿವಿಧ ಭಾಗಗಳನ್ನು ಮತ್ತು ಅವುಗಳು ಸಂಭವಿಸುವ ಅನುಕ್ರಮವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ವಿವರಿಸುವುದು.
   - ನೈಸರ್ಗಿಕ ವಿದ್ಯಮಾನಗಳನ್ನು (ಸೂರ್ಯ ಮತ್ತು ಚಂದ್ರ, ಮಿಂಚು ಮತ್ತು ಗುಡುಗು) ಮತ್ತು ದಿನದ ಪ್ರತಿಯೊಂದು ಭಾಗಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ವಿವರಿಸುವುದು.

### 4–5 ವರ್ಷಗಳು

1. ದೈನಂದಿನ ಭಾಷೆಯಲ್ಲಿ ಉದಾಹರಣೆಗಳೊಂದಿಗೆ ಈಗ, ಮುಂಚೆ, ಹಿಂದಿನ ಮತ್ತು ಆಮೇಲೆ ಎಂಬ ಪರಿಕಲ್ಪನೆಗಳನ್ನು ವಿವರಿಸುವುದು.

2. ದಿನದ ವಿವಿಧ ಸಮಯಗಳಲ್ಲಿ ಮಾಡುವ ಅಥವಾ ಒಂದು ನಿರ್ದಿಷ್ಟ ಹೊತ್ತಿಗೆ ಮೊದಲು ಮಾಡುವ ಚಟುವಟಿಕೆಗಳನ್ನು ವಿಂಗಡಿಸುವುದು ಅಥವಾ ಹೊಂದಿಸುವುದು.

3. ದೈನಂದಿನ ಚಟುವಟಿಕೆಗಳ ಹಂತಗಳನ್ನು ಅನುಕ್ರಮವಾಗಿ ಜೋಡಿಸುವುದು.

4. ಸಮಯದ ಪರಿಕಲ್ಪನೆಯನ್ನು ಬಳಸಿ ಸರಳ ಸಮಸ್ಯೆಗಳನ್ನು ಬಿಡಿಸುವುದು.

### 5–6 ವರ್ಷಗಳು

1. ಕಡಿಮೆ/ ಹೆಚ್ಚು ಸಮಯ, ಚುರುಕಾಗಿ/ ವೇಗ, ಮುಂಚಿತವಾಗಿ/ ತಡವಾಗಿ ಎಂಬ ಪದಗಳನ್ನು ಬಳಸಿ ಸಮಯಾಧಾರಿತ ಚಟುವಟಿಕೆಗಳನ್ನು ಮಾಡುವುದು.

2. ಘಂಟೆ ಮತ್ತು ಅರ್ಧಘಂಟೆಯ ಸಮಯವನ್ನು ಗಡಿಯಾರದಲ್ಲಿ ನೋಡಲು ಪರಿಚಯಿಸುವುದು.

3. ಮೊದಲನೆಯ ಮತ್ತು ಕೊನೆಯ ಎನ್ನುವ ಪರಿಕಲ್ಪನೆಗೆ ಹೋಲಿಕೆಯಾಗುವಂತೆ ಗಡಿಯಾರದ ಮುಖವಿರುವ ಚಿತ್ರದ ಕಾರ್ಡುಗಳನ್ನು ಅನುಕ್ರಮವಾಗಿ ಜೋಡಿಸುವ ಚಟುವಟಿಕೆಯನ್ನು ಮಾಡಿಸುವುದು.


4. ತೋರಿಸಿದ ಸಮಯಕ್ಕೆ ತಕ್ಕಂತೆ ಗಡಿಯಾರದ ಮುಖಗಳನ್ನು ಅನುಕ್ರಮವಾಗಿ ಜೋಡಿಸುವುದು/ಹಿಮ್ಮುಖ ಸರಣಿಯ ಆಧಾರದ ಮೇಲೆ ಚಿತ್ರಗಳನ್ನು ಹೊಂದಿಸುವುದು.

5. ಗಡಿಯಾರವನ್ನು ಬಳಸಿ ಮುಂಚಿತವಾಗಿ, ತಡವಾಗಿ ಮತ್ತು ಸಮಯಕ್ಕೆ ಸರಿಯಾಗಿ ಎಂಬ ಪರಿಕಲ್ಪನೆಗಳನ್ನು ಅನ್ವಯಿಸುವುದು.

Scanned with CamScanner

ಸಮಯ

## ಪರಿಕಲ್ಪನೆ ಹಾಗೂ ನಿರ್ವಹಣೆ



### ಕಲಿಕಾ ಉದ್ದೇಶಗಳು

- ದೈನಂದಿನ ಭಾಷೆಯಲ್ಲಿ ಉದಾಹರಣೆಗಳೊಂದಿಗೆ ಈಗ, ಮುಂಚೆ, ಹಿಂದಿನ ಮತ್ತು ಆಮೇಲೆ ಎಂಬ ಪರಿಕಲ್ಪನೆಗಳನ್ನು ವಿವರಿಸುವುದು.
- ದಿನದ ವಿವಿಧ ಸಮಯಗಳಲ್ಲಿ ಮಾಡುವ ಅಥವಾ ಒಂದು ನಿರ್ದಿಷ್ಟ ಹೊತ್ತಿಗೆ ಮೊದಲು ಮಾಡುವ ಚಟುವಟಿಕೆಗಳನ್ನು ವಿಂಗಡಿಸುವುದು ಅಥವಾ ಹೊಂದಿಸುವುದು.
- ದೈನಂದಿನ ಚಟುವಟಿಕೆಗಳ ಹಂತಗಳನ್ನು ಅನುಕ್ರಮವಾಗಿ ಜೋಡಿಸುವುದು.
- ಸಮಯದ ಪರಿಕಲ್ಪನೆಯನ್ನು ಬಳಸಿ ಸರಳ ಸಮಸ್ಯೆಗಳನ್ನು ಬಿಡಿಸುವುದು.




Scanned with CamScanner


# ಈಗ, ನಂತರ, ಮುಂಚೆ ಮತ್ತು ಆಮೇಲೆ (ಮೊದಲು, ಮುಂದಿನ ಮತ್ತು ಕೊನೆಯ) ಎಂಬ ಪರಿಕಲ್ಪನೆಗಳನ್ನು ಪರಿಚಯಿಸುವುದು

## ಕಲಿಕಾ ಫಲಿತಗಳು

- ಸಂದರ್ಭಕ್ಕೆ ತಕ್ಕ ಹಾಗೆ ಮುಂಚೆ, ನಂತರ, ಹಿಂದಿನ, ಆಮೇಲೆ, ಮೊದಲ, ಮುಂದಿನ ಮತ್ತು ಕೊನೆಯ ಎಂಬ ಪದಗಳನ್ನು ಆಲಿಸುವುದು.
- ಈಗ, ನಂತರ, ಹಿಂದಿನ, ಮೊದಲ ಮತ್ತು ಮುಂದಿನ ಎಂಬುವುಗಳನ್ನು ಅರ್ಥ ಮಾಡಿಕೊಳ್ಳುವುದು.









## ಕಲಿಕಾ ಸಾಮಗ್ರಿಗಳು

1. ನಾಲ್ಕು ಭಾಗಗಳಾಗಿ ವಿಂಗಡಿಸಿದ ಕಥೆಯ ಕಾರ್ಡ್
2. ಆಟಿಕೆಗಳು ಮತ್ತು ಬಟ್ಟೆಗಳು ತುಂಬಿದ ಒಂದು ಬುಟ್ಟಿಯನ್ನು ತೋರಿಸುವ ಮಿಂಚುಪಟ್ಟಿ **CF8.1-1**
3. ಕಥೆ, ಮಿಂಚುಪಟ್ಟಿ **CF8.1-2** ರಿಂದ **5**
   - ಬೆಳಿಗ್ಗೆ – ಏಳುವುದು, ಹಲ್ಲುಜ್ಜುವುದು, ತಿಂಡಿ ತಿನ್ನುವುದು, ಶಾಲೆಗೆ ಹೋಗುವುದು
   - ಮಧ್ಯಾಹ್ನ – ಆಟ ಆಡುವುದು, ಮನೆಗೆ ಹೋಗುವುದು
   - ಸಂಜೆ – ತಂದೆ ತಾಯಿಯರಿಗೆ ಸಹಾಯ ಮಾಡುವುದು
   - ರಾತ್ರಿ – ಮಲಗುವುದು

## ಶಿಕ್ಷಕರ ಪೂರ್ವಸಿದ್ಧತೆ

1. ಕಥೆಯನ್ನು ಓದಿ, ಅದರಲ್ಲಿರುವ ಘಟನೆಗಳ ಅನುಕ್ರಮವನ್ನು ಸರಿಯಾಗಿ ತಿಳಿದುಕೊಳ್ಳುವುದು.
2. ಕಥೆಯನ್ನು ಹೇಳುವ ಮೊದಲು ಚಿತ್ರದ ಕಾರ್ಡಿನ ಸಹಾಯದಿಂದ ಕಥೆಯನ್ನು ಅಭ್ಯಾಸ ಮಾಡಿಕೊಳ್ಳುವುದು.

**ಸೂಚನೆ: ಕಥೆಯನ್ನು ಹೇಳಿ**

**ಕಥೆ: ಬಿಡುವಿಲ್ಲದ ದಿನ**

ಈಗ ಮಧ್ಯಾಹ್ನವಾಗುತ್ತಿದೆ. ಪುಟ್ಟ ಮೊಲ ಬೆಳಗ್ಗಿನಿಂದ ಸಮುದ್ರದಲ್ಲಿರುವ ಒಂದು ಹಡಗಿನ ಚಿತ್ರಪಟವನ್ನು ಮಾಡುವುದರಲ್ಲಿ ನಿರತವಾಗಿತ್ತು. ಅದು ಬೆಳಗಿನ ತಿಂಡಿ ತಿಂದ ಕೂಡಲೇ ಈ ಚಟುವಟಿಕೆಯನ್ನು ಪ್ರಾರಂಭಿಸಿ, ಇನ್ನೂ ಅದರಲ್ಲಿಯೇ ನಿರತವಾಗಿದೆ. ಅದರ ಸುತ್ತಲೂ ಬಣ್ಣದ ಪೆನ್ಸಿಲ್‌ಗಳು, ದಿನಪತ್ರಿಕೆ, ಅಂಟು, ಕಾಗದದ ತುಣುಕುಗಳು, ಪೆನ್ಸಿಲ್‌ಗಳು, ಬಣ್ಣಗಳು ಮತ್ತು ಕುಂಚಗಳು ಹಾಗೂ ಒಂದು ಅಂಟಿನ ಬಾಟಲಿ ಹರಡಿಕೊಂಡಿರುವುದನ್ನು ನೀವು ಚಿತ್ರದಲ್ಲಿ ಕಾಣಬಹುದು.

ಕೊನೆಗೂ ಚಿತ್ರಪಟ ಮಾಡುವ ಕೆಲಸ ಮುಗಿಯಿತು. ಪುಟ್ಟ ಮೊಲ ಚಿತ್ರಪಟ ಹಾರದಂತೆ ಅದರ ನಾಲ್ಕು ಮೂಲೆಗಳ ಮೇಲೂ ಭಾರವನ್ನಿರಿಸಿ ಅದನ್ನು ಫ್ಯಾನಿನ ಕೆಳಗೆ ಇರಿಸಿತು. ಈಗ ಪುಟ್ಟ ಮೊಲ ಮಧ್ಯಾಹ್ನದ ಊಟ ಮಾಡಲು ತಯಾರಾಯಿತು. "ಪುಟ್ಟಾ ನೀನು ಊಟ ಮಾಡುವ ಮೊದಲು ಹರಡಿರುವುದನ್ನೆಲ್ಲಾ ಸ್ವಚ್ಛಗೊಳಿಸು" ಎಂದು ತಾಯಿ ಮೊಲ ಹೇಳಿತು. "ಊಟ ಮಾಡಿದ ಮೇಲೆ ನಾನು ಇದನ್ನು ಸ್ವಚ್ಛಗೊಳಿಸುತ್ತೇನೆ" ಎಂದು ಪುಟ್ಟ ಮೊಲ ಹೇಳಿತು. ಆದರೆ ಊಟದ ನಂತರ ಪುಟ್ಟ ಮೊಲಕ್ಕೆ ಬಹಳ ನಿದ್ದೆ ಬರಲಾರಂಭಿಸಿತು. ಸ್ವಚ್ಛ ಮಾಡುವೆ ಎಂದು ಹೇಳಿದ್ದೆಯಲ್ಲಾ ಎಂದು ತಾಯಿ ಮೊಲ ನೆನಪಿಸಿದಾಗ, "ಆಮೇಲೆ, ನಾನು ಮಲಗಿ ಎದ್ದ ನಂತರ ಮಾಡುತ್ತೇನೆ" ಎಂದು ಹೇಳಿತು. ಅದು ಮಧ್ಯಾಹ್ನದ ನಿದ್ದೆಯಿಂದ ಎದ್ದ ಮೇಲೆ "ಪುಟ್ಟಾ ಹರಡಿರುವುದನ್ನೆಲ್ಲಾ ಈಗಲೇ ಸ್ವಚ್ಛಗೊಳಿಸು" ಎಂದು ತಾಯಿ ಮೊಲ ಹೇಳಿದಾಗ "ಆಮೇಲೆ, ನಾನು ಆಟವಾಡಿ ಬಂದ ನಂತರ ಮಾಡುತ್ತೇನೆ" ಎಂದು ಪುಟ್ಟ ಮೊಲ ಓಡಿ ಹೋಯಿತು.





Scanned with CamScanner

## ಈಗ, ನಂತರ, ಮುಂಚೆ ಮತ್ತು ಆಮೇಲೆ (ಮೊದಲು, ಮುಂದಿನ ಮತ್ತು ಕೊನೆಯ) ಎಂಬ ಪರಿಕಲ್ಪನೆಗಳನ್ನು ಪರಿಚಯಿಸುವುದು

ಆಟವಾಡಿ ಮುಗಿಸಿದ ಮೇಲೆ ಪುಟ್ಟಮೊಲದ ರಾತ್ರಿ ಊಟಕ್ಕೆ ಸಮಯವಾಗಿತ್ತು. "ಪುಟ್ಟಾ, ನೀನು ಊಟ ಮಾಡುವ ಮೊದಲು ಇಲ್ಲಿ ಹರಡಿರುವುದನ್ನು ಸ್ವಚ್ಛಗೊಳಿಸು" ಎಂದು ತಾಯಿ ಮೊಲ ಹೇಳಿದ್ದಕ್ಕೆ "ಆಮೇಲೆ, ಊಟ ಮಾಡಿದ ತಕ್ಷಣ ನಾನು ಮಲಗುವ ಮೊದಲು ಮಾಡುತ್ತೇನೆ" ಎಂದು ಪುಟ್ಟ ಮೊಲ ಹೇಳಿತು.

ಆದರೆ ಊಟವಾಗುತ್ತಿದ್ದಂತೆ ಪುಟ್ಟಮೊಲ ತುಂಬಾ ದಣಿದಿದ್ದರಿಂದ ಅದು ಮಲಗಲು ಹೋಯಿತು. ತಾಯಿ ಮೊಲ ಒಂದು ಬುಟ್ಟಿಯನ್ನು ತಂದು ಅದರಲ್ಲಿ ಪುಟ್ಟ ಮೊಲ ಮಾಡಿದ ಚಿತ್ರಪಟ, ಎಲ್ಲಾ ಕಾಗದಗಳು, ಪೆನ್ಸಿಲ್‌ಗಳು, ಬಣ್ಣಗಳು ಮತ್ತು ಕುಂಚಗಳು ಹಾಗೂ ಅದರ ಬಟ್ಟೆಗಳು ಎಲ್ಲವನ್ನೂ ಅದರಲ್ಲಿ ತುಂಬಿತು.

ಪುಟ್ಟ ಮೊಲ ಬೆಳಿಗ್ಗೆ ಎದ್ದು ತನ್ನ ಚಿತ್ರಪಟಕ್ಕಾಗಿ ಹುಡುಕಾಡಿತು. ಅದಕ್ಕೆ ನಿಜವಾಗಲೂ ಚಿಂತೆಯಾಗಿತ್ತು. ಚಿತ್ರಪಟ ಬುಟ್ಟಿಯ ಅಡಿಯಲ್ಲಿ ಸೇರಿಕೊಂಡಿತ್ತು. ಅದನ್ನು ಹೊರಗೆಳೆಯಲು ನೀವು ಸಹಾಯ ಮಾಡಿವಿರಾ?

### ಸೂಚನೆಗಳು

1. ಮುಂಚೆ, ನಂತರ, ಈಗ ಮುಂತಾದ ಪದಗಳಿರುವ ವಾಕ್ಯಗಳಿಗೆ ಒತ್ತು ಕೊಡುತ್ತಾ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುತ್ತಾ ಕಥೆಯನ್ನು ಹೇಳುವುದು.
    - ಈಗ ಮಧ್ಯಾಹ್ನವಾಗುತ್ತಿದೆ. ಪುಟ್ಟಮೊಲ ಬೆಳಗ್ಗಿನಿಂದ ಸಮುದ್ರದಲ್ಲಿರುವ ಹಡಗಿನ ಒಂದು ಚಿತ್ರಪಟವನ್ನು ಮಾಡುವುದರಲ್ಲಿ ನಿರತವಾಗಿತ್ತು. ಈಗ ಸಮಯವೆಷ್ಟು? ಪುಟ್ಟ ಮೊಲ ಯಾವ ಸಮಯದಿಂದ ಕಾರ್ಯನಿರತವಾಗಿತ್ತು?
    - ಅದು ಈಗ ಮಧ್ಯಾಹ್ನದ ಊಟ ಮಾಡಲು ತಯಾರಾಯಿತು. ಪುಟ್ಟಮೊಲ ಏನು ಮಾಡಲು ಸಿದ್ಧವಾಗಿದೆ?
    - "ಪುಟ್ಟಾ ನೀನು ಊಟ ಮಾಡುವ ಮೊದಲು ಹರಡಿರುವುದನ್ನೆಲ್ಲಾ ಸ್ವಚ್ಛಗೊಳಿಸು" ಎಂದು ತಾಯಿ ಮೊಲ ಹೇಳಿತು. ಹರಡಿರುವುದನ್ನೆಲ್ಲಾ ಯಾವಾಗ ಸ್ವಚ್ಛಗೊಳಿಸಲು ತಾಯಿ ಮೊಲ ಬಯಸಿತು? (ಮಧ್ಯಾಹ್ನದ ಊಟದ ಮೊದಲು)
    - "ಊಟ ಮಾಡಿದ ಮೇಲೆ ನಾನು ಇದನ್ನು ಸ್ವಚ್ಛಗೊಳಿಸುತ್ತೇನೆ" ಎಂದು ಪುಟ್ಟಮೊಲ ಹೇಳಿತು. ಆಮೇಲೆ ಎಂದರೆ ಪುಟ್ಟಮೊಲಕ್ಕೆ ಯಾವಾಗ? (ಊಟ ಮಾಡಿದ ಮೇಲೆ)
    - ಸ್ವಚ್ಛಗೊಳಿಸುವೆ ಎಂದು ಹೇಳಿದ್ದೆಯೆಲ್ಲಾ ಎಂದು ತಾಯಿ ಮೊಲ ನೆನಪಿಸಿದಾಗ, "ಆಮೇಲೆ, ನಾನು ಮಲಗಿ ಎದ್ದ ನಂತರ ಮಾಡುತ್ತೇನೆ" ಎಂದು ಹೇಳಿತು. ಯಾವಾಗ ಸ್ವಚ್ಛಗೊಳಿಸುವೆ ಎಂದು ಅದು ಮಾತು ಕೊಟ್ಟಿತು? (ಅದು ಎದ್ದ ಮೇಲೆ)
2. ಕಥೆಯ ಕೊನೆಯಲ್ಲಿ ಘಟನೆಗಳನ್ನು ಅನುಕ್ರಮವಾಗಿ ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಮೊದಲು ಏನಾಗುತ್ತದೆ? ನಂತರ ಏನಾಗುತ್ತದೆ? ಆನಂತರ ಏನಾಗುತ್ತದೆ? ಕೊನೆಯಲ್ಲಿ ಏನಾಗುತ್ತದೆ? ಎಂದು ಮಕ್ಕಳನ್ನು ಕೇಳುವುದು.
3. ಕಥೆಗೆ ಸಂಬಂಧಿಸಿದಂತೆ ಈಗ ಮತ್ತು ಆಮೇಲೆ ಎಂದು ಉತ್ತರಿಸುವ ಕೆಲವು ಪ್ರಶ್ನೆಗಳನ್ನು ಕೇಳುವುದು. ಉದಾಹರಣೆಗೆ– ಹರಡಿರುವುದನ್ನೆಲ್ಲಾ 'ಈಗಲೇ' ಸ್ವಚ್ಛಗೊಳಿಸು ಎಂದು ಅದರ ಅಮ್ಮ ಪ್ರತಿ ಸಲ ಹೇಳಿದಾಗ ಪುಟ್ಟಮೊಲ ಏನೆಂದು ಉತ್ತರಿಸುತ್ತಿತ್ತು? ("ಆಮೇಲೆ" ಎಂದು ಹೇಳುತ್ತಿತ್ತು)
4. ಈಗ, ನಂತರ, ಮುಂಚೆ, ಮತ್ತು ಆಮೇಲೆ ಎಂಬ ಮುಖ್ಯವಾದ ಪದಗಳನ್ನು ಅವರು ಸ್ವಚ್ಛಗೊಳಿಸುವ ಸನ್ನಿವೇಶಗಳಿಗೆ ಹೊಂದಿಸುತ್ತಾ ಮಕ್ಕಳ ಜೊತೆ ಚರ್ಚಿಸುವುದು.



Scanned with CamScanner

## ಈಗ, ನಂತರ, ಮೊದಲು, ಮುಂದಿನ, ಮತ್ತು ಕೊನೆಯ ಎಂಬ ಪದಗಳನ್ನು ದಿನದ ಉದ್ದಕ್ಕೂ ಮಾಡುವ ದೈನಂದಿನ ಚಟುವಟಿಕೆಗಳ ಮೂಲಕ ಸಮಯದ ಪರಿಕಲ್ಪನೆಯನ್ನು ಊಹಿಸುವುದು

### ಕಲಿಕಾ ಫಲಿತಗಳು

- ಸಮಯದ ಪರಿಕಲ್ಪನೆಯನ್ನು (ಈಗ, ಆಮೇಲೆ, ಮೊದಲ, ಮುಂದಿನ, ಕೊನೆಯ) ಅವರ ಪ್ರತಿದಿನದ ಜೀವನದಲ್ಲಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ರಾತ್ರಿ ಹೇಗೆ ಆಗುತ್ತವೆಯೋ ಆ ಸಂದರ್ಭಗಳ ಕುರಿತು ಪ್ರತಿಫಲನಾತ್ಮಕವಾಗಿ ಯೋಚಿಸಿ ತೀರ್ಮಾನಕ್ಕೆ ಬರಲು ಸಹಾಯ ಮಾಡುವುದು.

### ಕಲಿಕಾ ಸಾಮಗ್ರಿಗಳು

1. ಚಿತ್ರದ ರೂಪದಲ್ಲಿರುವ ದಿನದ ವೇಳಾಪಟ್ಟಿ
2. ಮಿಂಚುಪಟ್ಟಿಗಳು – ಬೆಳಿಗ್ಗೆ ಏಳುವುದು, ಹಲ್ಲುಜ್ಜುವುದು, ತಿಂಡಿ ತಿನ್ನುವುದು, ಶಾಲೆಗೆ ಹೋಗಲು ತಯಾರಾಗುವುದು, ಶಾಲೆಗೆ ಹೋಗುವುದು, ಶಾಲೆಯಲ್ಲಿ ಕಲಿಯುವುದು, ಮಧ್ಯಾಹ್ನ ಊಟ ಮಾಡುವುದು, ಆಟ ಆಡುವುದು, ಮನೆಗೆ ಹೋಗುವುದು, ತಂದೆ ತಾಯಿಗೆ ಸಹಾಯ ಮಾಡುವುದು, ಸಾಯಂಕಾಲ, ರಾತ್ರಿ ಊಟ ಮಾಡುವುದು, ಮಲಗುವ ಚಿತ್ರಗಳಿರುವ ಮಿಂಚುಪಟ್ಟಿಗಳು.

### ಶಿಕ್ಷಕರ ಪೂರ್ವಸಿದ್ಧತೆ

ನೀವು ಮಾಡಲು ಯೋಚಿಸುವ ಚಟುವಟಿಕೆಗಳನ್ನು ಮಾಡಿಸುವ ಮೊದಲು ಓದಿಕೊಳ್ಳುವುದು.

### ಚಟುವಟಿಕೆ 1: ಗುಂಪು ಚಟುವಟಿಕೆ

**ವೃತ್ತದ ಸಮಯ: ಬೆಳಿಗ್ಗೆ, ಮಧ್ಯಾಹ್ನ ಮೊದಲಾದ ಚಟುವಟಿಕೆಗಳ ಪರಿಕಲ್ಪನೆಯನ್ನು ಪುನರಾವರ್ತಿಸುವುದು.**

1. ಬೆಳಿಗ್ಗೆಯಿಂದ ರಾತ್ರಿಯವರೆಗೆ ಏನೆಲ್ಲಾ? ಮಾಡುತ್ತೀರೆಂದು ಮಕ್ಕಳನ್ನು ಕೇಳುವುದು. ಪ್ರತಿಕ್ರಿಯೆಗಳನ್ನು ಪಡೆಯುವುದು. ಮಕ್ಕಳಿಂದ ಬಂದ ವಿವಿಧ ಉತ್ತರಗಳನ್ನು ಒಪ್ಪಿಕೊಳ್ಳುವುದು.
2. ಈಗ ಮಕ್ಕಳನ್ನು, ತಾವು ಮಾಡಿದ ಚಟುವಟಿಕೆಯನ್ನು ಅಭಿನಯದ ಮೂಲಕ ತೋರಿಸಲು ಹೇಳುವುದು. ಉದಾಹರಣೆಗೆ: ಏಳುವ ಚಟುವಟಿಕೆಯನ್ನು ತೋರಿಸಲು ಮೈಮುರಿಯುವ ಮತ್ತು ಆಕಳಿಸುವ ಅಭಿನಯವನ್ನು ಮಾಡುವುದು.
3. ಈ ರೀತಿಯ ಪ್ರಶ್ನೆಗಳನ್ನು ಕೇಳುತ್ತಾ ಮಕ್ಕಳಿಂದ ಉತ್ತರವನ್ನು ಪಡೆದುಕೊಳ್ಳುವುದು:
   - ನೀವು ಎದ್ದ ಮೇಲೆ ಏನು ಮಾಡುತ್ತೀರಿ?
   - ನೀವು ಹಲ್ಲುಜ್ಜಿದ ಮೇಲೆ ಏನು ಮಾಡುತ್ತೀರಿ?
   - ನೀವು ತಿಂಡಿ ತಿಂದ ಮೇಲೆ ಏನು ಮಾಡುತ್ತೀರಿ? ಇತ್ಯಾದಿ
4. ದಿನದಲ್ಲಿ ಮಾಡುವ ಚಟುವಟಿಕೆಗಳನ್ನು ಅನುಕ್ರಮವಾಗಿ ಅಭಿನಯದ ಮೂಲಕ ಜೋಡಿಸುವುದು– ಬೆಳಿಗ್ಗೆ ಏಳುವುದು, ಹಲ್ಲುಜ್ಜುವುದು, ತಿಂಡಿ ತಿನ್ನುವುದು, ಶಾಲೆಗೆ ಹೋಗಲು ತಯಾರಾಗುವುದು, ಶಾಲೆಗೆ ಹೋಗುವುದು, ಶಾಲೆಯಲ್ಲಿ ಕಲಿಯುವುದು, ಮಧ್ಯಾಹ್ನ ಊಟ ಮಾಡುವುದು, ಆಟ ಆಡುವುದು, ಮನೆಗೆ ಹೋಗುವುದು, ತಂದೆ ತಾಯಿಯರಿಗೆ ಸಹಾಯ ಮಾಡುವುದು, ಸಾಯಂಕಾಲ, ರಾತ್ರಿ ಊಟ ಮಾಡುವುದು, ಮಲಗುವುದು.
5. ಬೆಳಿಗ್ಗೆಯ ಕುರಿತಾದ ಮಿಂಚುಪಟ್ಟಿಗಳನ್ನು ಉಪಯೋಗಿಸಿ ಸೂರ್ಯ ಹುಟ್ಟುತ್ತಿರುವುದನ್ನು ತೋರಿಸಿ ಮಕ್ಕಳಿಗೆ ಬೆಳಿಗ್ಗೆ ಮಾಡುವ ಚಟುವಟಿಕೆಗಳನ್ನು ಹೆಸರಿಸುವುದು– ಬೆಳಿಗ್ಗೆ ಏಳುವುದು, ಹಲ್ಲುಜ್ಜುವುದು, ತಿಂಡಿ ತಿನ್ನುವುದು, ಶಾಲೆಗೆ ಹೋಗಲು ತಯಾರಾಗುವುದು,ಶಾಲೆಗೆ ಹೋಗುವುದು, ಶಾಲೆಯಲ್ಲಿ ಕಲಿಯುವುದು ಇತ್ಯಾದಿ.
   - ಅದೇ ರೀತಿ ಮಧ್ಯಾಹ್ನದ ಮಿಂಚುಪಟ್ಟಿಗಳನ್ನು ಉಪಯೋಗಿಸಿ ಸೂರ್ಯ ಆಕಾಶದಲ್ಲಿ ಮೇಲಿರುವುದನ್ನು ತೋರಿಸುವುದು. ಸಾಯಂಕಾಲ ಸೂರ್ಯ ಮುಳುಗುತ್ತಿರುವುದನ್ನು ಮತ್ತು ರಾತ್ರಿ ಆಕಾಶದಲ್ಲಿ ಚಂದ್ರ ಮತ್ತು ನಕ್ಷತ್ರಗಳು ಇರುವುದನ್ನೂ ತೋರಿಸುತ್ತಾ ಆಯಾ ಹೊತ್ತಿನಲ್ಲಿ ಮಾಡುವ ಚಟುವಟಿಕೆಗಳ ಹೆಸರುಗಳನ್ನು ಹೇಳುವುದು.



Scanned with CamScanner

## ಚಟುವಟಿಕೆ 2: ಒಳಾಂಗಣ ಆಟ

**ವೃತ್ತದ ಸಮಯ: ಇವತ್ತು, ನಿನ್ನೆ ಮತ್ತು ನಾಳೆಯ ಪರಿಕಲ್ಪನೆಗಳನ್ನು ಪುನರಾವರ್ತಿಸುವುದು**

1. ಮಕ್ಕಳಿಗೆ ಈ ರೀತಿಯ ಪ್ರಶ್ನೆಗಳನ್ನು ಕೇಳುವುದು
   - ನಾವು ಈಗ ಏನು ಮಾಡುತ್ತಿದ್ದೇವೆ?
   - ನೀವು ಈ ದಿನ ಬೆಳಿಗ್ಗೆ ಏನು ತಿಂಡಿ ತಿಂದಿರಿ?
   - ನಾವು ಈ ದಿನ ಏನು ಕಲಿಯುತ್ತಿದ್ದೇವೆ?
2. ಪ್ರಸ್ತುತ ದಿನಕ್ಕೆ 'ಇವತ್ತು' ಎಂದು ಹೇಳುತ್ತೇವೆ ಎಂದು ಮಕ್ಕಳಿಗೆ ವಿವರಿಸುವುದು.
3. ಮಕ್ಕಳಿಗೆ ಈ ರೀತಿಯ ಪ್ರಶ್ನೆಗಳನ್ನು ಕೇಳುವುದು
   - ನೀವು ನಿನ್ನೆ ಏನು ಮಾಡಿದಿರಿ?
   - ನಿನ್ನೆ ರಾತ್ರಿ ಏನು ಊಟ ಮಾಡಿದಿರಿ?
   - ನಿನ್ನೆ ಶಾಲೆಯಲ್ಲಿ ನಾವು ಏನು ಕಲಿತೆವು?
4. ಇವತ್ತಿನ ಹಿಂದಿನ ದಿನಕ್ಕೆ 'ನಿನ್ನೆ' ಎನ್ನುತ್ತೇವೆ ಎಂದು ಮಕ್ಕಳಿಗೆ ಹೇಳುವುದು.
5. ಮಕ್ಕಳಿಗೆ ಈ ರೀತಿಯ ಪ್ರಶ್ನೆಗಳನ್ನು ಕೇಳುವುದು
   - ನಾಳೆ ನೀವು ಏನು ಮಾಡಬೇಕೆಂದು ಇದ್ದೀರಿ?
   - ನಾಳೆ ತಿಂಡಿಗೆ ನೀವು ಏನನ್ನು ತಿನ್ನಲು ಬಯಸುತ್ತೀರಿ?
6. ಇವತ್ತಿನ ದಿನವಾದ ಮೇಲೆ ಬರುವ ದಿನಕ್ಕೆ ನಾಳೆ ಎನ್ನುತ್ತೇವೆ ಎಂದು ಮಕ್ಕಳಿಗೆ ಹೇಳುವುದು.

## ಚಟುವಟಿಕೆ 3

**ವೃತ್ತದ ಸಮಯ: ಈಗ, ನಂತರ, ಮುಂಚೆ ಮತ್ತು ಆಮೇಲೆ ಇವುಗಳನ್ನು ಪರಿಚಯಿಸುವುದು**

1. ಮಕ್ಕಳನ್ನು ವೃತ್ತಾಕಾರವಾಗಿ ಕುಳಿತುಕೊಳ್ಳಲು ಹೇಳುವುದು ಮತ್ತು ಕ್ರಿಯೆಗಳನ್ನು ಚಿತ್ರ ಮತ್ತು ಚಿಹ್ನೆಗಳ ರೂಪದಲ್ಲಿ ತೋರಿಸಿರುವ ವೇಳಾಪಟ್ಟಿಯನ್ನು ತೆಗೆಯುವುದು.
2. ಈಗ ನಾವು ಏನು ಮಾಡುತ್ತಿದ್ದೇವೆ ಎಂದು ಮಕ್ಕಳನ್ನು ಕೇಳುವುದು. ಅವರು ಉತ್ತರಿಸಿದ ಮೇಲೆ ಅದಕ್ಕೆ ಸಂಬಂಧಿಸಿದ ಚಿತ್ರವನ್ನು ವೇಳಾಪಟ್ಟಿಯಲ್ಲಿ ನೋಡಲು ಬಿಡುವುದು. ಹೌದು "ಈಗ" ನಾವು ವೃತ್ತದ ಸಮಯದಲ್ಲಿ ಇದ್ದೇವೆ ಎಂದು ಮತ್ತೆ ಹೇಳುವುದು. ಪ್ರತಿದಿನ ವೃತ್ತದ ಸಮಯ ಇದೇ ವೇಳೆಗೆ ಇರುತ್ತದೆಯೇ? ನಾಳೆ ಇದೇ ವೇಳಗೆ ವೃತ್ತದ ಸಮಯ ಇರುತ್ತದೆಯೇ? ಎಂದು ಕೇಳುವುದು.
3. 'ಇದಕ್ಕೆ ಮುಂಚೆ ನೀವೆಲ್ಲರೂ ಏನು ಮಾಡಿದಿರಿ?' ಎಂದು ಕೇಳುವುದು. ನಾವು ವೃತ್ತದ ಸಮಯಕ್ಕೂ ಮುಂಚೆ ಏನು ಮಾಡುತ್ತೇವೆ? ನಿನ್ನೆ ಇದೇ ವೇಳೆಗೆ ಮುಕ್ತ ಆಟವನ್ನು ಆಡಿದೆವೋ? ಇವತ್ತಿನ ನಂತರ ನಮಗೆ ಮುಕ್ತ ಆಟ ಯಾವಾಗ ಇದೆ?
4. ನಿನ್ನೆ ಮತ್ತು ನಾಳೆಯ ಬಗ್ಗೆ ಮಕ್ಕಳನ್ನು ಕೇಳಿದ ನಂತರ ಅವರು ಏನೇನು ಮಾಡುತ್ತಾರೆ ಎಂದು ಕೇಳುವುದು.
5. ಮಧ್ಯಾಹ್ನ ಊಟ ಮತ್ತು ನಿದ್ದೆಯ ಬಳಿಕ ದಿನದ ಉಳಿದ ಭಾಗದಲ್ಲಿ ಮಕ್ಕಳು ಏನು ಮಾಡುತ್ತಾರೆ ಎಂಬುದರ ಬಗ್ಗೆ ಕೇಳುವುದು. ಅವರು ಕೊಟ್ಟ ಉತ್ತರಗಳ ಸಾರಾಂಶವನ್ನು ಈಗ, ಮುಂಚೆ, ಮುಂದಿನ, ಆಮೇಲೆ ಮತ್ತು ನಂತರ ಈ ಪದಗಳನ್ನು ಉಪಯೋಗಿಸಿ ಹೇಳುವುದು.
6. ಅವರು ತರಗತಿಯಲ್ಲಿ ಏನೇನು ಮಾಡುತ್ತಾರೆ ಎಂಬುದನ್ನು ವೇಳಾಪಟ್ಟಿಯು ತೋರಿಸುತ್ತದೆ ಎಂದು ಅವರು ಕೊಟ್ಟ ಉತ್ತರಗಳ ಸಾರಾಂಶವನ್ನು ಪ್ರತಿದಿನ, ಯಾವಾಗಲೂ, ಹಾಗೂ ಮಾಡುವುದಿಲ್ಲ ಮತ್ತು ಆಗಾಗ ಎಂಬ ಪದಗಳನ್ನು ಉಪಯೋಗಿಸಿ ವಿವರಿಸುವುದು.



Scanned with CamScanner

## ವರ್ಗೀಕರಣ, ವಿಂಗಡಿಸುವುದು ಮತ್ತು ಹೊಂದಿಸುವುದು

### ಕಲಿಕಾ ಫಲಿತಗಳು

- ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿಗಳ ನಡುವಿನ ಹಾಗೂ ಆ ಹೊತ್ತಿನಲ್ಲಿ ಮಾಡುವ ಚಟುವಟಿಕೆಗಳ ನಡುವಿನ ವ್ಯತ್ಯಾಸವನ್ನು (ವಿಂಗಡಿಸುವುದು ಮತ್ತು ಹೊಂದಿಸುವುದು) ತಿಳಿಯಲು ಮಕ್ಕಳಿಗೆ ಸಹಾಯ ಮಾಡುವುದು.

### ಕಲಿಕಾ ಸಾಮಗ್ರಿಗಳು

ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿ ಇವುಗಳ ಮಿಂಚುಪಟ್ಟಿಗಳು. ಬೆಳಿಗ್ಗೆ ಏಳುವುದು, ಹಲ್ಲುಜ್ಜುವುದು, ತಿಂಡಿ ತಿನ್ನುವುದು, ಶಾಲೆಗೆ ಹೋಗಲು ತಯಾರಾಗುವುದು, ಶಾಲೆಗೆ ಹೋಗುವುದು, ಶಾಲೆಯಲ್ಲಿ ಕಲಿಯುವುದು, ಮಧ್ಯಾಹ್ನ ಊಟ ಮಾಡುವುದು, ಆಟ ಆಡುವುದು, ಮನೆಗೆ ಹೋಗುವುದು, ತಂದೆ ತಾಯಿಯರಿಗೆ ಸಹಾಯ ಮಾಡುವುದು, ಸಾಯಂಕಾಲ, ರಾತ್ರಿ ಊಟ ಮಾಡುವುದು, ಮಲಗುವುದು ಇವುಗಳ ಮಿಂಚುಪಟ್ಟಿಗಳು.

### ಶಿಕ್ಷಕರ ಪೂರ್ವಸಿದ್ಧತೆ

ಮಕ್ಕಳು ಗುಂಪುಗಳಲ್ಲಿ ಕೆಲಸ ಮಾಡುವುದರಿಂದ ತರಗತಿ ಪ್ರಾರಂಭವಾಗುವ ಮೊದಲು ಸಾಮಗ್ರಿಗಳನ್ನು ಪ್ರತ್ಯೇಕಿಸಲ್ಪಟ್ಟ ಗುಂಪುಗಳಾಗಿ ವಿಂಗಡಿಸುವುದು. ಮಕ್ಕಳನ್ನು ಗುಂಪುಗಳನ್ನಾಗಿ ವಿಂಗಡಿಸಿದ ತಕ್ಷಣವೇ ಅವರು ಚಟುವಟಿಕೆಯನ್ನು ಪ್ರಾರಂಭ ಮಾಡಲು ಇದರಿಂದ ಸಾಧ್ಯವಾಗುತ್ತದೆ.

- ಎಷ್ಟು ಗುಂಪುಗಳಿರಬೇಕು ಮತ್ತು ಪ್ರತಿ ಗುಂಪಿಗೂ ಕೊಡಬೇಕಾದ ಸಾಮಗ್ರಿಗಳ ಬಗ್ಗೆ ಮೊದಲೇ ನಿರ್ಧರಿಸುವುದು. ತರಗತಿ ದೊಡ್ಡದಿದ್ದರೆ ಹೆಸರುಗಳನ್ನು ಹಾಳೆಯ ಮೇಲೆ ಬರೆದು ನಂತರ ಗುಂಪುಗಳನ್ನಾಗಿ ಮಾಡುವುದು.
- ಕೆಲಸ ಮಾಡುವ ಜಾಗಗಳನ್ನು ಸಿದ್ಧಪಡಿಸಿ ಅಲ್ಲಿ ಕೆಲಸ ಪ್ರಾರಂಭಿಸುವ ಮುನ್ನ ಸೂಚನಾ ಕಾರ್ಡುಗಳನ್ನು ಮತ್ತು ಸಾಮಗ್ರಿಗಳನ್ನು ಇಡುವುದು.
- ಕಾರ್ಡುಗಳನ್ನು ಮತ್ತು ಮಕ್ಕಳ ಗುಂಪುಗಳ ಪಟ್ಟಿಯನ್ನು ಅಂತಿಮಗೊಳಿಸುವುದು.

### ಚಟುವಟಿಕೆ 1: ಗುಂಪು ಚಟುವಟಿಕೆ

1. ನೆಲದ ಮೇಲೆ ನಾಲ್ಕು ವೃತ್ತಗಳನ್ನು ಬರೆದು ಅವುಗಳನ್ನು ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಯೆಂದು ಹೆಸರಿಸುವುದು.
2. ಪ್ರತಿಯೊಂದು ವೃತ್ತದ ಅರ್ಥವನ್ನು ಮಕ್ಕಳಿಗೆ ಹೇಳುವುದು.
3. 2 ಅಥವಾ 4 ಮಕ್ಕಳನ್ನು ಕರೆಯುವುದು.
4. ನೀವು ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಗೆ ಸಂಬಂಧಿಸಿದ ಯಾವುದಾದರೂ ಒಂದು ಕ್ರಿಯೆಯ ಅಭಿನಯವನ್ನು ಮಾಡುವಾಗ ಮಕ್ಕಳು ನಿಮ್ಮನ್ನು ಗಮನಿಸಲು ಹೇಳುವುದು. ಉದಾಹರಣೆಗೆ- ಹಲ್ಲುಜ್ಜುವುದು.
5. ನೀವು ಮಾಡಿದ ಚಟುವಟಿಕೆಯನ್ನು ಮಕ್ಕಳಿಗೆ ಊಹಿಸಲು ಹೇಳಿ, ಅದನ್ನು ಸಮಯದ ಜೊತೆ ಹೊಂದಿಸಿ ಆ ವೃತ್ತದ ಒಳಗೆ ನಿಲ್ಲಲು ಹೇಳುವುದು.
6. ಉಳಿದ ಎಲ್ಲಾ ಮಕ್ಕಳ ಜೊತೆ ಈ ಚಟುವಟಿಕೆಯನ್ನು ಪುನರಾವರ್ತಿಸುವುದು.

### ಚಟುವಟಿಕೆ 2: ವೈಯಕ್ತಿಕ/ಜೊತೆಯಲ್ಲಿ ಮಾಡುವ ಚಟುವಟಿಕೆ

1. ಮಕ್ಕಳಿಗೆ ಒಬ್ಬರ ಜೊತೆ ಇನ್ನೊಬ್ಬರು ನಿಲ್ಲಲು ಹೇಳುವುದು.
2. ಅವರ ಮುಂದೆ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಯ ಮಿಂಚುಪಟ್ಟಿಗಳನ್ನು **F8.1.1-1** ರಿಂದ **10** ಇರಿಸುವುದು.
3. ಉಳಿದ ಚಟುವಟಿಕೆಯ ಮಿಂಚುಪಟ್ಟಿಗಳನ್ನು ಮಕ್ಕಳಿಗೆ ಕೊಡುವುದು ಹಾಗೂ ಚಟುವಟಿಕೆಗಳನ್ನು ಯಾವ ಹೊತ್ತಿನಲ್ಲಿ ಮಾಡುತ್ತಾರೋ ಅದಕ್ಕೆ ತಕ್ಕಂತೆ ವಿಂಗಡಿಸಲು ಹೇಳುವುದು.



Scanned with CamScanner

# ಹೋಲಿಸುವುದು ಮತ್ತು ಅನುಕ್ರಮವಾಗಿ ಜೋಡಿಸುವುದು








## ಕಲಿಕಾ ಫಲಿತಗಳು

- ಸಮಯದ ಆಧಾರದ ಮೇಲೆ ಮಕ್ಕಳಿಗೆ ಚಟುವಟಿಕೆಗಳನ್ನು 3 ಹಂತದವರೆಗೆ ಅನುಕ್ರಮವಾಗಿ ಜೋಡಿಸಲು ಹೇಳುವುದು.

## ಕಲಿಕಾ ಸಾಮಗ್ರಿಗಳು

ಪ್ರತಿದಿನದ ಚಟುವಟಿಕೆಗಳ ಒಂದು ಹಂತವನ್ನು ತೋರಿಸುವ ಸರಣಿ ಕಾರ್ಡ್‌ಗಳು (Seriation Card).

## ಶಿಕ್ಷಕರ ಪೂರ್ವಸಿದ್ಧತೆ

1. ಮಕ್ಕಳು ಗುಂಪುಗಳಲ್ಲಿ ಕೆಲಸ ಮಾಡುವುದರಿಂದ ತರಗತಿ ಪ್ರಾರಂಭವಾಗುವ ಮೊದಲು ಸಾಮಗ್ರಿಗಳನ್ನು ಪ್ರತ್ಯೇಕಿಸಲ್ಪಟ್ಟ ಗುಂಪುಗಳಾಗಿ ವಿಂಗಡಿಸುವುದು. ಮಕ್ಕಳನ್ನು ಗುಂಪುಗಳನ್ನಾಗಿ ವಿಂಗಡಿಸಿದ ತಕ್ಷಣವೇ ಅವರು ಚಟುವಟಿಕೆಯನ್ನು ಪ್ರಾರಂಭ ಮಾಡಲು ಇದರಿಂದ ಸಾಧ್ಯವಾಗುತ್ತದೆ.
2. ಎಷ್ಟು ಗುಂಪುಗಳಿರಬೇಕು ಮತ್ತು ಪ್ರತಿ ಗುಂಪಿಗೂ ಕೊಡಬೇಕಾದ ಸಾಮಗ್ರಿಗಳ ಬಗ್ಗೆ ಮೊದಲೇ ನಿರ್ಧರಿಸುವುದು. ತರಗತಿ ದೊಡ್ಡದಿದ್ದರೆ ಹೆಸರುಗಳನ್ನು ಹಾಳೆಯ ಮೇಲೆ ಬರೆದು ನಂತರ ಗುಂಪುಗಳನ್ನಾಗಿ ಮಾಡುವುದು.
3. ಕೆಲಸ ಮಾಡುವ ಜಾಗಗಳನ್ನು ಸಿದ್ಧಪಡಿಸಿ ಅಲ್ಲಿ ಕೆಲಸ ಪ್ರಾರಂಭಿಸುವ ಮುನ್ನ ಸೂಚನಾ ಕಾರ್ಡುಗಳನ್ನು ಮತ್ತು ಸಾಮಗ್ರಿಗಳನ್ನು ಇಡುವುದು.
4. ಕಾರ್ಡುಗಳನ್ನು ಮತ್ತು ಮಕ್ಕಳ ಗುಂಪುಗಳ ಪಟ್ಟಿಯನ್ನು ಅಂತಿಮಗೊಳಿಸುವುದು.

## ಚಟುವಟಿಕೆ 1: ಗುಂಪು ಚಟುವಟಿಕೆ

1. ಹಲ್ಲು ಉಜ್ಜುತ್ತಿರುವ ಚಿತ್ರವನ್ನು ತೋರಿಸುವುದು.
2. ಇದನ್ನು ಹೇಗೆ ಒಂದು ಅನುಕ್ರಮದಲ್ಲಿ ಜೋಡಿಸುವುದು ಎಂದು ಮಕ್ಕಳಿಗೆ ತೋರಿಸುವುದು.
3. ಮೂರು ಮಕ್ಕಳಿರುವ ಗುಂಪುಗಳನ್ನು ಮಾಡಲು ಮಕ್ಕಳಿಗೆ ಹೇಳುವುದು.
4. ಕಾರ್ಡುಗಳ ಒಂದು ಜೊತೆಯನ್ನು ಪ್ರತಿಯೊಂದು ಗುಂಪಿಗೂ ಕೊಡುವುದು. ಅವುಗಳನ್ನು ಯಾವುದು ಮೊದಲು ಬರುವುದೋ, ನಂತರ ಬರುವುದೋ ಆ ಅನುಕ್ರಮದಲ್ಲಿ ಜೋಡಿಸಲು ಹೇಳುವುದು. ಮಕ್ಕಳು ಸರಿಯಾಗಿ ಅರ್ಥ ಮಾಡಿಕೊಂಡಿರುವರೇ ಎಂದು ಅವರ ಸುತ್ತಲೂ ಹೋಗುತ್ತಾ ಪರೀಕ್ಷಿಸುವುದು. ಅವರು ಮಾಡಿದ ಅನುಕ್ರಮವನ್ನು ಪರಿಶೀಲಿಸುವುದು. ಸಮಸ್ಯೆ ಇರುವಂತೆ ತೋರುವ ಮಕ್ಕಳಿಗೆ ಸಹಾಯ ಮಾಡುವುದು. ಮಕ್ಕಳು ಮುಂದಿನ ಕಾರ್ಡುಗಳಿಗೆ ಹೋಗಲು ಅನುವು ಮಾಡಿಕೊಟ್ಟು ಎಲ್ಲಾ ಗುಂಪುಗಳೂ ಎಲ್ಲಾ 9 ಜೊತೆಗಳನ್ನು ಜೋಡಿಸಲು ಬಿಡುವುದು. ಹಾಗೆ ಮಾಡುವಾಗ ಮಕ್ಕಳಿಗೆ ಕಾರ್ಡುಗಳನ್ನು ಜೋಡಿಸಿದ ಕ್ರಮವನ್ನು ವಿವರಿಸುವಂತೆ ಕೇಳುವುದು.
5. ಮುಂದಿನ ಕೆಲವು ದಿನಗಳು ಕಾರ್ಡುಗಳನ್ನು ಮುಕ್ತ ಆಟದ ವಿಭಾಗದಲ್ಲಿ ಇಟ್ಟು ಮಕ್ಕಳಿಗೆ ವೈಯಕ್ತಿಕವಾಗಿ ಮಾಡಲು ಪ್ರೋತ್ಸಾಹಿಸುವುದು ಮತ್ತು ಅವರು ಜೋಡಿಸಿದ ರೀತಿಯನ್ನು ಕಾರಣ ಸಹಿತ ನಿಮಗೆ ವಿವರಿಸಲು ಹೇಳುವುದು.



Scanned with CamScanner

## ಅನ್ವಯಿಸುವಿಕೆ

### ಕಲಿಕಾ ಫಲಿತಗಳು

- ದಿನನಿತ್ಯದ ಜೀವನಕ್ಕೆ ಸಂಬಂಧಿಸಿದ ಸಮಯ ಮತ್ತು ಅನುಕ್ರಮದ ಆಧಾರಿತ ಸರಳ ಸಮಸ್ಯೆಗಳನ್ನು ಬಿಡಿಸುವುದು.

### ಕಲಿಕಾ ಸಾಮಗ್ರಿಗಳು

1. ಓದುವ ಮೂಲೆಯ ಪುಸ್ತಕಗಳು

### ಗುಂಪು ಚಟುವಟಿಕೆ: ಓದಲು ಕಲಿಯುವುದರ ಅನುಕ್ರಮವನ್ನು ಮಕ್ಕಳಿಗೆ ಅರ್ಥ ಮಾಡಿಸುವುದು ಮತ್ತು ತೋರಿಸುವುದು

1. ಮಕ್ಕಳನ್ನು ವೃತ್ತಾಕಾರವಾಗಿ ಕುಳಿತುಕೊಳ್ಳಲು ಹೇಳುವುದು.
2. ಮಕ್ಕಳಿಗೆ ಪುಸ್ತಕವನ್ನು ತೋರಿಸಿ ಅದನ್ನು ಬಳಸುವ ಕ್ರಮದ ಹಂತಗಳನ್ನು- ಮುಂಭಾಗದ ಪುಟ/ಹೊದಿಕೆ, ಹಿಂಭಾಗದ ಪುಟ/ಹೊದಿಕೆ, ಒಳಗಿನ ಪುಟಗಳು ತೋರಿಸುವುದು.
3. ಎಡದಿಂದ ಬಲಕ್ಕೆ ಮತ್ತು ಮೇಲಿನಿಂದ ಕೆಳಕ್ಕೆ ಓದುವ ಕ್ರಮವನ್ನು ಮಕ್ಕಳಿಗೆ ತೋರಿಸುವುದು.
4. ನಟನೆಯ ಬರವಣಿಗೆ ಮತ್ತು ಚಿತ್ರಗಳಿಂದ ಮಾಡಿದ ನಾಲ್ಕು ಪುಟದ ಪುಸ್ತಕಗಳನ್ನು ಮಾಡಲು ಮಕ್ಕಳಿಗೆ ಅನುವು ಮಾಡಿಕೊಡುವುದು. (ಇದನ್ನು ಪರಿಕಲ್ಪನೆಯ ತರಗತಿಯಲ್ಲಿ ಮಾಡುವುದು ಮತ್ತು ಯೋಜನಾ ಕಾರ್ಯದ ತರಗತಿಯಲ್ಲಿ ಪೂರ್ಣಗೊಳಿಸುವುದು.)



Scanned with CamScanner

# ಶಿಕ್ಷಕರ ಕೈಪಿಡಿ - 4 ರಿಂದ 5 ವರ್ಷದವರಿಗೆ



Printed for

ಸಮಗ್ರ ಶಿಕ್ಷಣ ಕರ್ನಾಟಕ

**Department of Primary & Secondary Education, Samagra Shikshana Karnataka**
New Public Offices, Annexe Building, Nrupathunga Road, Sampangi Rama Nagar, Bengaluru - 560001, Karnataka

Designed by: Zinc & Broccoli, www.zandb.in

Printed at: SCPL, www.scpl.net

Scanned with CamScanner